

# ಚಿಂತನ ಬಯಲು


ಸಂಪುಟ 2 ಸಂಚಿಕೆ 2

ISSN 2278-2192


ತ್ರೈಮಾಸಿಕ


Volume 2, Issue 2, October-December 2013



# ಚಿಂತನ ಬಯಲು

ಸಂಪಾದಕಿ

**ರೇಶ್ಮಾ ಜಿ. ಭಟ್**

ಸಂಪಾದಕೀಯ ಸಲಹೆ

**ಡಾ. ಅಜಕ್ಕಳ ಗಿರೀಶ ಭಟ್**
**ಡಾ. ಶ್ರೀಧರ್ ಎಚ್.ಜಿ.**
**ಡಾ. ವರದರಾಜ ಚಂದ್ರಗಿರಿ**
**ಡಾ. ಜಿ.ಬಿ. ಹರೀಶ್**
**ಶ್ರೀ ಎಂ.ಎ. ಸುಬ್ರಹ್ಮಣ್ಯ**

**ಚಿಂತನ ಬಯಲು**
ನಂ. 15-109, ಮೊಡಂಕಾಪು ಅಂಚೆ
ಬಂಟ್ವಾಳ ತಾಲೂಕು, ದಕ್ಷಿಣ ಕನ್ನಡ - 574 219

**CHINTHANA BAYALU**
Kannada Quarterly
Volume 2, Issue 2, October-December 2013

Edited, Published, Printed & Owned by
**Reshma G. Bhat**
Door No. 15-109, Modankapu Post,
Bantwal Taluk, Dakshina Kannada 574 219.
Karnataka
Phone : 9449772651
Email : chinthanabayalu@gmail.com

© : Reserved

Price : Rs. 50

Pages : 64

Cover Design : **Kallur Nagesh**

Designed & Printed at :
**Aakrithi Prints**
Maximus Complex
Light House Hill Road
Mangalore - 575 001
Tel. : 0824 2443002

---

**ಸೂಚನೆ :** ಈ ಸಂಚಿಕೆಯಲ್ಲಿ ಪ್ರಕಟವಾದ ಲೇಖನಗಳ ಹಕ್ಕು ಆಯಾ ಲೇಖಕರದ್ದಾಗಿರುತ್ತದೆ. ಇಲ್ಲಿಯ ಲೇಖನಗಳಲ್ಲಿ ವ್ಯಕ್ತವಾಗುವ ಅಭಿಪ್ರಾಯಗಳು ಲೇಖಕರದ್ದೇ ಆಗಿರುತ್ತವೆ. ಅವುಗಳು ಪತ್ರಿಕೆಯ ಅಭಿಪ್ರಾಯಗಳಾಗಿರಬೇಕೆಂದೇನಿಲ್ಲ.

# ಪುಟನೋಟ


1. ಪ್ರಾಚೀನ ಸಾಹಿತ್ಯದಲ್ಲಿ ಜನ್ನನ ಸ್ಥಾನಮಾನ
■ ರೋಹಿಣಾಕ್ಷ ಶಿರ್ಲಾಲು / 7

2. ಸಾಕ್ಷಿಪ್ರಜ್ಞೆಗಳ ಮಾತು – ಮೌನಗಳು
■ ಅಜಕ್ಕಳ ಗಿರೀಶ್ ಭಟ್ / 13

3. ಚಿಗುರಿದ ಕನಸು;
ವಸ್ತು ವಿನ್ಯಾಸ, – ಪ್ರಸ್ತುತತೆ
■ ಶ್ರೇಯಾಂಕ ಎಸ್. ರಾನಡೆ / **25**

4. ನಾನೇಕೆ ಅಯೋಧ್ಯೆಗೆ ಹೋಗುತ್ತೇನೆ?
■ ಎಚ್. ಆನಂದರಾಮ ಶಾಸ್ತ್ರೀ / 32

5. ಶಿಶಿಲರ ಕಾದಂಬರಿಗಳು
■ ಡಾ. ಮಾಧವ ಪೆರಾಜೆ / 37

6. ದೇವುಡು ಮತ್ತು ಡಿವಿಜಿ ಚಿಂತನೆಗಳು / 45

7. ಮೌಲಿಕ ಕೃತಿ ‘ನಿಜಗುಣ’
■ ಡಾ. ಜಿ.ಎನ್. ಉಪಾಧ್ಯ / 50

8. ಭಕ್ತಿಪ್ರಧಾನ ಕೃಷಿ ಕಾವ್ಯ
ಶ್ರೀ ಮಧ್ವಪ್ರಾಣ ಕಕ್ರ ಶೆಟ್ಟಿ
ಕೃಷಿ ಕಾವ್ಯಲೋಕ
■ ಡಾ. ಬಿ. ಜನಾರ್ದನ ಭಟ್ / **54**

# ಸಂಪಾದಕೀಯ

ಸಾಹಿತ್ಯ ಸಮ್ಮೇಳನದಂಥ ಸಮಾರಂಭಗಳಲ್ಲಿ, ಗೋಷ್ಠಿಗಳಲ್ಲಿ ದೊಡ್ಡ ದೊಡ್ಡ ಮಾತುಗಳನ್ನಾಡುವ ಸಾಹಿತಿಗಳ ಬಣ್ಣ ಬಯಲಾಗುವುದು ಹೊಸತೇನಲ್ಲ. ಆದರೆ ಪಂಪ, ಕುಮಾರವ್ಯಾಸ, ಸರ್ವಜ್ಞ, ಕುವೆಂಪು, ಡಿ.ವಿ.ಜಿ. ಇಂಥವರನ್ನೆಲ್ಲ ಓದಿಕೊಂಡ ಸಾಹಿತಿಗಳಲ್ಲಿ ಪ್ರಾಮಾಣಿಕತೆ ಏಕಿಲ್ಲ ಎಂಬುದು ನಮ್ಮೆಲ್ಲರನ್ನು ಕಾಡುತ್ತಿರುವ ಪ್ರಶ್ನೆ. ವಿದ್ವತ್ತೇ ಪ್ರಧಾನವಾಗಿ ವಿಜೃಂಭಿಸಬೇಕಾದ ವಿಶ್ವವಿದ್ಯಾನಿಲಯಗಳ ಆವರಣಗಳಲ್ಲಿ ನಮಗೆ ಇಂದು ಕಾಣುವುದು ದ್ವೇಷ, ಮತ್ಸರ ಹಾಗೂ ಸಂಕುಚಿತ ವರ್ತನೆಗಳು. ಇಂಥವರ ನಡುವೆ ಒಬ್ಬಿಬ್ಬರು ಒಳ್ಳೆಯವರಿದ್ದರೂ ಅವರು ಹಿಂಸೆಯನ್ನನುಭವಿಸುತ್ತ ಮೂಕರಾಗಿರಬೇಕಾದ ಸ್ಥಿತಿಯಿರುತ್ತದೆ. ಹೀಗಾಗಿ, ನಮ್ಮ ಸಾಹಿತಿಗಳ, ಪ್ರಾಧ್ಯಾಪಕರ ನಡುವೆ ಸಿದ್ಧಾಂತಗಳ ಪಂಥಗಳ ಭಿನ್ನತೆಯಿದ್ದರೂ ಹಣಕಾಸಿನ ವಿಷಯ ಬಂದಾಗ ಎಲ್ಲರೂ ಅನುಕೂಲ ಪಂಥೀಯರೇ ಆಗಿರುತ್ತಾರೆ.

ಈಗ ಇವೆಲ್ಲ ನೆನಪಾಗಲು ಕಾರಣವಿದೆ. ಇತ್ತೀಚೆಗೆ ಮೂಡಬಿದ್ರೆಯಲ್ಲಿ ನಡೆದ ವಿಶ್ವನುಡಿಸಿರಿ ಸಮ್ಮೇಳದಲ್ಲಿ ನಮ್ಮ 'ಚಿಂತನ ಬಯಲು' ಪತ್ರಿಕೆಯ ಸಣ್ಣ ಮಳಿಗೆಯಿತ್ತು. ನಮ್ಮ ಎದುರು ಸಾಲಿನಲ್ಲಿ ರಾಮಕೃಷ್ಣ ಮಠದವರ ಪುಸ್ತಕ ಮಳಿಗೆಯಿತ್ತು. ಅಲ್ಲಿ ಪಾದರಸದಂತೆ ಚುರುಕಾಗಿದ್ದ ಹಲವು ಹುಡುಗರು ಉತ್ಸಾಹದಿಂದ ರಾಮಕೃಷ್ಣರ, ವಿವೇಕಾನಂದರ ತತ್ವ ಚಿಂತನೆಗಳುಳ್ಳ ಪುಸ್ತಕಗಳನ್ನು ಮಾರುತ್ತಿದ್ದರು. ಆ ಹುಡುಗರು ಮಳಿಗೆಯ ಎದುರು ನಿಂತು, ಆಚೀಚೆ ಸಾಗುತ್ತಿದ್ದ ವಿದ್ಯಾರ್ಥಿಗಳನ್ನು ಹಾಗೂ ಸಾರ್ವಜನಿಕರನ್ನು ಒಟ್ಟು ಸೇರಿಸಿ ವಿವೇಕಾನಂದರ ದೇಶಭಕ್ತಿ, ಆದರ್ಶ, ಸಮಾನತೆಯ ತತ್ವ, ವೇದಾಂತ ಇತ್ಯಾದಿ ವಿಚಾರಗಳ ಬಗ್ಗೆ ವಿವರಿಸುತ್ತಿದ್ದರು. ಅದಕ್ಕೆ ಸಂಬಂಧಿಸಿದ ಪುಸ್ತಕಗಳನ್ನು ಕೊಳ್ಳುವಂತೆ ಪ್ರೇರೇಪಿಸುತ್ತಿದ್ದರು. ಅವರಲ್ಲಿ ನನ್ನ ಗಮನವನ್ನು ವಿಶೇಷವಾಗಿ ಸೆಳೆದ ಒಬ್ಬನನ್ನು ಮಾತಾನಾಡಿಸಿದಾಗ ತಿಳಿದುಬಂದಂತೆ, ಆತ ವಿಶ್ವವಿದ್ಯಾನಿಲಯದಲ್ಲಿ ಎಂ.ಕಾಂ. ಓದುತ್ತಿರುವ ವಿದ್ಯಾರ್ಥಿ. ತನ್ನ ಬಿಡುವಿನ ದಿನಗಳಲ್ಲಿ ಈ ರೀತಿಯ ಸೇವೆಯಲ್ಲಿ ತೊಡಗಿಸಿಕೊಳ್ಳುತ್ತಿದ್ದ. ಸಮಾನಾಸಕ್ತರ ಗುಂಪು ಕಟ್ಟಿಕೊಂಡು ಏಡ್ಸ್ ಪೀಡಿತ ಮಕ್ಕಳ ಕಲ್ಯಾಣಾರ್ಥವಾಗಿ ಹಣ ಸಂಗ್ರಹ ಇತ್ಯಾದಿ ಚಟುವಟಿಕೆಗಳನ್ನು ತನ್ನ ಬಿಡುವಿನ ಸಮಯದಲ್ಲಿ ನಡೆಸುವ ಕುರಿತು ವಿವರಿಸಿದ. ಹಣ ಸಂಪಾದನೆಯ ಯಾವ ಉದ್ದೇಶವೂ ಇಲ್ಲದ ಅವನ ಗುರಿಯೆಂದರೆ ಉಪನ್ಯಾಸಕನಾಗಿ, ಉಳಿಕೆ ಸಮಯದಲ್ಲಿ ಸಮಾಜಸೇವೆ ಮಾಡುವುದು. ಆ ಮಳಿಗೆಯಲ್ಲಿ ಉತ್ಸಾಹದಿಂದ ದುಡಿಯುತ್ತಿದ್ದ ಇತರ ಸೇವಾವ್ರತಿಗಳೂ ಇದೇ ನಿಸ್ವಾರ್ಥ ಮನೋಭಾವದವರು. ಇವರೆಲ್ಲ ಈ ರೀತಿ ನಿಸ್ವಾರ್ಥವಾಗಿ ಸಮಾಜದ ಕೆಲಸಗಳಲ್ಲಿ ತಮ್ಮನ್ನು ತೊಡಗಿಸಿಕೊಳ್ಳಲು ಅವರಿಗೆ ಸಿಕ್ಕಿದ ಪ್ರೇರಣೆ ಯಾವುದು? ನಮ್ಮ ಇಂದಿನ ಶಿಕ್ಷಣ ವ್ಯವಸ್ಥೆ ಇದನ್ನು ಸಾಧ್ಯಗೊಳಿಸಿದೆಯೆಂದು ಸಂತೋಷಪಡಬೇಕೇ ಅಥವಾ ಇಂಥಾ ಶಿಕ್ಷಣ ವ್ಯವಸ್ಥೆಯಿದ್ದೂ, ಅದರ ಪ್ರಭಾವದಿಂದ ಬಿಡಿಸಿಕೊಂಡು ಈ ಮನೋಭಾವವನ್ನು ಇವರು ರೂಢಿಸಿಕೊಳ್ಳಲು ಸಾಧ್ಯವಾಯಿತೆಂದು ಸಂತೋಷ ಪಡಬೇಕೇ?

ನಿಯಮಿತವಾಗಿ ದೊಡ್ಡ ಮೊತ್ತದ ಸಂಬಳವನ್ನೂ ವಿವಿಧ ಭತ್ಯೆಗಳನ್ನೂ ಪಡೆಯುವ ಭಾಷಣಕಾರರು ವೇದಿಕೆಯಿಂದ ಆಡುವ ಮಾತುಗಳು ಸಮ್ಮೇಳನದ ಅಂಗಣ ಅಂಗಣಗಳಲ್ಲೂ ಕೇಳಿಸುತ್ತವೆ. ಮಾಧ್ಯಮಗಳಲ್ಲೂ ಪ್ರಸಾರಗೊಳ್ಳುತ್ತವೆ. ಆದರೆ ಇಂಥಾ ಯುವಕರ ದನಿಗಳು ಆಲಿಸುವ ಮನಸ್ಸಿದ್ದವರಿಗೆ ಮಾತ್ರ ಕೇಳಿಸುತ್ತವೆ.

**– ಸಂಪಾದಕಿ**

# ಪ್ರಾಚೀನ ಸಾಹಿತ್ಯದಲ್ಲಿ ಜನ್ನನ ಸ್ಥಾನಮಾನ

**ರೋಹಿಣಾಕ್ಷ ಶಿರ್ಲಾಲು**
ಕನ್ನಡ ಉಪನ್ಯಾಸಕ
ವಿವೇಕಾನಂದ ಕಾಲೇಜು, ನೆಹರು ನಗರ, ಪುತ್ತೂರು, ದ.ಕ–574203

**–1–**

ಹನ್ನೆರಡನೆಯ ಶತಮಾನದ ಉತ್ತರಾರ್ಧ ಮತ್ತು ಹದಿಮೂರನೆಯ ಶತಮಾನದ ಪೂರ್ವಾರ್ಧದ ಕಾಲಘಟ್ಟದಲ್ಲಿ ಬಾಳಿ ಬದುಕಿದ್ದ 'ಕವಿ ಚಕ್ರವರ್ತಿ' ಬಿರುದಾಂಕಿತ, 'ಚತುರ್ವಿಧ ಪಂಡಿತ', 'ನವ ವೈಯಾಕರಣಂ' ಎಂದು ಗುರುತಿಸಿಕೊಂಡಿದ್ದ 'ಜನ್ನ' ಕನ್ನಡ ಸಾಹಿತ್ಯ ಪರಂಪರೆಯಲ್ಲಿ ತನ್ನದೇ ಹೊಸ ಮಾರ್ಗವೊಂದನ್ನು ರೂಪಿಸಿದ ಮಹತ್ವದ ಕವಿ. ಈತನ ಕುರಿತು 'ಆದಿಪಂಪನಂತೆ ಸರ್ವಂಕಷವಾದ ಮತ್ತು ಪ್ರಫುಲ್ಲವಾದ ವ್ಯಕ್ತಿತ್ವವುಳ್ಳವನು ಜನ್ನ'[1] ಎಂದಿದ್ದಾರೆ ರಂ.ಶ್ರೀ.ಮುಗಳಿಯವರು. ಜನ್ನನು ನಾಲ್ಕು ಶಾಸನ ಗಳನ್ನೂ ಒಳಗೊಂಡಂತೆ ಯಶೊಧರ ಚರಿತೆ,ಅನಂತನಾಥ ಪುರಾಣ ಹಾಗೂ ಅನುಭವ ಮುಕುರ ಎಂಬ ಮೂರು ಕೃತಿಗಳನ್ನು ಬರೆದಿದ್ದಾನೆ. ಕನ್ನಡ ಸಾಹಿತ್ಯ ಪರಂಪರೆಯನ್ನು ಬೆಳಗಿದ್ದ ಜೈನ ಪುರಾಣಗಳ ಸಾಲಿಗೆ ಜನ್ನನ ಎರಡು ಕೃತಿಗಳು ಹೊಸ ಕಾಣಿಕೆ. ಜೈನ ಪುರಾಣವನ್ನು ಕಾವ್ಯವನ್ನಾಗಿಸಿದ್ದ ಕವಿಗಳ ನಡುವೆ ಜನ್ನನೂ ಒಬ್ಬನಾಗಿ ಮಾತ್ರನಿಲ್ಲದೆ ತನ್ನ ಕವಿತ್ವ ಶಕ್ತಿ, ಪ್ರತಿಭೆಯಿಂದ ಕನ್ನಡ ಕಾವ್ಯಲೋಕದಲ್ಲಿ ಪ್ರಕಾಶಮಾನವಾಗಿ ಶೋಭಿಸುವ ಕವಿ ಶ್ರೇಷ್ಠನಾಗಿ ಕಾಣುತ್ತಾನೆ.

'ಪ್ರಾಚೀನ ಸಾಹಿತ್ಯದಲ್ಲಿ ಜನ್ನನ ಸ್ಥಾನಮಾನ'ದ ಬಗೆಗೆ ಚಿಂತನೆ ಮಾಡುವ ಸಂದರ್ಭದಲ್ಲಿ ನನ್ನ ಮುಂದೆ ಕೆಲವು ಪ್ರಶ್ನೆಗಳಿವೆ.ಸ್ಥಾನಮಾನದ ಪ್ರಶ್ನೆಯನ್ನು ಅಭ್ಯಾಸ ಮಾಡುವಾಗ ನನಗೆ ಈ ಪ್ರಶ್ನೆಗಳು ಮುಖ್ಯವೆನ್ನಿಸುತ್ತಿದೆ. ಅಖಂಡ ಕಾವ್ಯ ಪರಂಪರೆಯಲ್ಲಿ ಕವಿಯೊಬ್ಬನ ಸ್ಥಾನಮಾನವನ್ನು ಶೋಧಿಸುವ ಉದ್ದೇಶವನ್ನು ಹೇಗೆ ಗ್ರಹಿಸಬೇಕು? ಕವಿಯೊಬ್ಬನ ಸ್ಥಾನವನ್ನು ನಿರ್ದೇಶಿಸುವುದು ಅಂದರೆ ಏನು?ಪ್ರಸ್ತುತ ಕವಿಯ ಉಪಲಬ್ಧ ಕೃತಿಗಳ ಕಾವ್ಯಸೌಂಧರ್ಯ, ಕಾವ್ಯದ ವಸ್ತು, ಶೈಲಿ, ಪಾತ್ರ ಸೃಷ್ಟಿ, ಛಂದಸ್ಸುಗಳೆಂಬ ಕಾವ್ಯದ ಆಂತರಿಕ ಪ್ರಮಾಣಗಳಿಂದ ಪುಷ್ಟಿ ಪಡೆದು ಕವಿಯ ಮಹತ್ವವನ್ನು ಅರಿಯುವ ಪ್ರಕ್ರಿಯೆಯೆ? ಅಥವಾ ಆ ಕವಿಗಿಂತ ಹಿಂದಿನ ಮತ್ತು ನಂತರದ ಕವಿಗಳ ಕಾವ್ಯಕ್ಕೆ ಬೆಲೆಕಟ್ಟಿ ಅವುಗಳ ಶ್ರೇಷ್ಟತೆಯ ಜೊತೆಗೆ ಹೋಲಿಸಿ ಅನ್ಯ ಬೆಳಕಿನಲ್ಲಿ ಕಾವ್ಯಕ್ಕೆ ಮೌಲ್ಯ ಕಟ್ಟುವ ಪ್ರಕ್ರಿಯೆಯೆ? ಇಲ್ಲಿ ಒಂದು ಆಂತರಿಕ ಪ್ರಕ್ರಿಯೆಯಾದರೆ, ಇನ್ನೊಂದು ಬಾಹ್ಯ ಪ್ರಕ್ರಿಯೆ. ನಮ್ಮ ಸಾಹಿತ್ಯ ಚರಿತ್ರೆಯ

ಅಭ್ಯಾಸದ ಉದ್ದಕ್ಕೂ ನಡೆದುಕೊಂಡು ಬಂದ ಒಂದು ಪ್ರಕ್ರಿಯೆ ಎಂದರೆ ಕವಿಗೆ ಒಂದು ಸ್ಥಾನವನ್ನು ನೀಡುವ ಪ್ರಯತ್ನಮಾಡಿರುವುದು. ಸಾಹಿತ್ಯದ ಅಭ್ಯಾಸಕ್ಕೆ ಹೊರತಾದ ಪ್ರಶ್ನೆಯಿದು. ಆದರೂ ಬಹುಕಾಲದಿಂದಲೂ ಈ ಪ್ರಕ್ರಿಯೆ ನಡೆಯುತ್ತಲೇ ಬಂದಿದೆ. ನಮ್ಮ ಸಾಹಿತ್ಯ ಚರಿತ್ರೆ ರಚನೆಯ ಚಿಂತನೆಯಲ್ಲಿ ಸೇರಿಕೊಂಡ ಮೂಲಭೂತ ಪ್ರಶ್ನೆಯೆಂದರೆ ಒಬ್ಬ ಕವಿಗೆ ಸಮಗ್ರ ಸಾಹಿತ್ಯದೊಳಗೆ ಸಲ್ಲುವ, ಸೇರುವ ಜಾಗ ಯಾವುದು? ಎನ್ನುವುದರ ಶೋಧವೆ ಆಗಿದೆ. ಕವಿ ಚರಿತ್ರೆಕಾರರ, ಸಾಹಿತ್ಯ ಚರಿತ್ರೆಕಾರರ ಪ್ರಶ್ನೆ ಮಾತ್ರ ಅಲ್ಲ. ಸ್ವತಃ ಕವಿಗೂ ಈ ಪ್ರಶ್ನೆ ಕಾಡಿದೆ. ತಾನು ಬರೆದ ಕಾವ್ಯದಿಂದ ತಾನು ಕಾವ್ಯ ಲೋಕದಲ್ಲಿ ಅಲಂಕರಿಸಬಹುದಾದ ಸ್ಥಾನ ಯಾವುದು ಎಂಬ ಪ್ರಶ್ನೆ ಇತ್ತು. ಕವಿಗೆ ಒಂದು 'ಸ್ವ ಪ್ರಜ್ಞೆ' ಇದೆ. ಹೀಗಾಗಿ ಕವಿಯೇ ತನ್ನನ್ನು ತಾನು ಒಂದು ಸ್ಥಾನದಲ್ಲಿ ಗುರುತಿಸಿಕೊಳ್ಳುತ್ತಾನೆ.

ಇದಲ್ಲದೆ ಸಾಹಿತ್ಯದೊಳಗೆ ಕವಿಗೆ ನಿರ್ದಿಷ್ಟ ಸ್ಥಾನವನ್ನು ನೀಡಬೇಕಾದುದು ಸಾಹಿತ್ಯದ ಓದಿನ ಅವಶ್ಯಕತೆಯಲ್ಲ. ಕವಿಯೊಬ್ಬನ ಕೃತಿಗಳನ್ನು ಸಾಹಿತ್ಯ ಚರಿತ್ರೆಯ ಚೌಕಟ್ಟಿನಲ್ಲಿ ಅಭ್ಯಾಸ ಮಾಡುವುದಾದರೆ ಕವಿಗೆ ಒಂದು ಸ್ಥಾನವನ್ನು ನಿರ್ದೇಶಿಸಬೇಕಾಗುತ್ತದೆ. ಆದರೆ ಕಾವ್ಯಾಭ್ಯಾಸಕ್ಕೆ ಕಾವ್ಯಚರಿತ್ರೆಯ ರಚನೆಯ ಹೊರತಾದ ಉದ್ದೇಶವೂ ಇದೆ ಎನ್ನುವುದನ್ನು ನೆನಪಿಟ್ಟುಕೊಳ್ಳಬೇಕು. ಕವಿಯ ಸ್ಥಾನಮಾನದ ಪ್ರಶ್ನೆ ಮುಖ್ಯವಾಗುವುದು ಕವಿ ಚರಿತ್ರೆಯನ್ನು, ಸಾಹಿತ್ಯ ಚರಿತ್ರೆಯನ್ನು ಬರೆಯಲು ಹೊರಟಾಗ. ಒಬ್ಬ ಕವಿಯನ್ನು ಕಾವ್ಯಾಭ್ಯಾಸಿಯಾಗಿ ಓದಲು ಹೊರಟರೆ ಅಲ್ಲಿ ಸ್ಥಾನಮಾನದ ಪ್ರಶ್ನೆ ಬರುವುದಿಲ್ಲ. ಅಲ್ಲಿ ಕವಿ ಕೃತಿ ಅಷ್ಟೇ ಮುಖ್ಯವಾಗುವುದೇ ಹೊರತು ಅದರೊಳಗೊಂದು ಶ್ರೇಣೀಕರಣದ ಪ್ರಶ್ನೆ ಉದ್ಭವಿಸುವುದಿಲ್ಲ. ಆದರೆ ಇದೇ ಕವಿ-ಕಾವ್ಯವನ್ನು ಸಾಹಿತ್ಯ ಚರಿತ್ರೆಕಾರನ ಹಿನ್ನೆಲೆಯಿಂದ ಒಂದು ಚರಿತ್ರೆಯನ್ನು ಕಟ್ಟುವುದಕ್ಕಾಗಿ ನೊಡುವುದಾದರೆ ಅಲ್ಲಿ ಕವಿಗೆ, ಆ ಕವಿಯ ಕಾವ್ಯಕ್ಕೆ ಪ್ರಾಪ್ತವಾಗುವ ಸ್ಥಾನ ಆ ಕ್ರಮದೊಳಗೆ ಮಹತ್ವದ ಸಂಗತಿಯಾಗುತ್ತದೆ. ನಮ್ಮ ಸಾಹಿತ್ಯ ಚರಿತ್ರೆಯ ಕೃತಿಗಳಲ್ಲಿ ಕೃತಿ ಮತ್ತು ಕವಿಗಳ ಕುರಿತು ನೀಡುವ ವಿವರಣೆಗಳನ್ನು ಇದಕ್ಕೆ ನಿದರ್ಶನವಾಗಿ ಗಮನಿಸಬಹುದು.

ಜನ್ನನ ಕಾವ್ಯಗಳನ್ನು ಗಮನಿಸಿದರೆ ಆತನೆ ತನ್ನ ಕುರಿತು ಹೇಳಿಕೊಂಡ ಒಂದು ಪದ್ಯಭಾಗ ಹೀಗಿದೆ.

"ರನ್ನಂ ವೈಯಾಕರಣಂ
ಜನ್ನಂ ಮೇಣ್ ಕವಿಗಳೊಳಗೆ ವೈಯಾಕರಣಂ
ಹೊನ್ನನಸಹಾಯ ಕವಿ ಮೇಣ್
ಜನ್ನಿಗನಸಹಾಯ ಸುಕವಿ ಕವಿಚಕ್ರಿಗಳೊಳ್" (ಅನಂತನಾಥ ಪುರಾಣ 14-77)

ಇಲ್ಲಿ ಜನ್ನನು ತನ್ನನ್ನು ರನ್ನ, ಪೊನ್ನರಿಗಿಂತ ಮಿಗಿಲು ಎಂಬ ಭಾವವನ್ನು ವ್ಯಕ್ತಪಡಿಸುತ್ತಾನೆ. ಇದು ಕವಿಯೇ ತನ್ನ ಸ್ಥಾನಮಾನವನ್ನು ಗುರುತಿಸಿಕೊಂಡ ಬಗೆ. ವಾಸ್ತವದಲ್ಲಿ ಸ್ಥಾನಮಾನ ಎನ್ನುವುದು ಸಾಪೇಕ್ಷವಾದುದು. ಅದು ನಾವು ನೊಡುವ ಕಾಲ ಮತ್ತು ಮಾನದಂಡಗಳಿಂದ ಬದಲಾಗುತ್ತಾ ಹೊಗುತ್ತಿರುತ್ತದೆ. ಹೀಗಾಗಿ ಈಪ್ರಬಂಧ ಪ್ರಾಚೀನ ಕನ್ನಡ ಸಾಹಿತ್ಯದಲ್ಲಿ ಜನ್ನನಿಗೆ ನೀಡಬಹುದಾದ ಸ್ಥಾನವನ್ನು ನಿರ್ದಿಷ್ಟಗೊಳಿಸಿ ಹೇಳುವ ಉದ್ದೇಶವನ್ನು ಹೊಂದಿಲ್ಲ.

**-2-**

ಸ್ಥಾನಮಾನದ ಪ್ರಶ್ನೆ ಆಧುನಿಕರಾದ ನಮ್ಮ ಮುಂದೆ ಮಾತ್ರ ಬಂದದ್ದಲ್ಲ. ಸ್ವತಃ ಕವಿಗೂ ಬಾಧಿಸಿದ ಸಂಗತಿಯಿದು. ಕವಿ ತನ್ನ ಕಾಲದಲ್ಲೇ ಈ ಹಿಂದಿನ ಕವಿ ಪರಂಪರೆಗಿಂತ ತಾನು

ಹೇಗೆ ಭಿನ್ನ ಎಂದೂ, ತನ್ನ ಕಾವ್ಯ ಮಾರ್ಗ ಹೇಗೆ ವಿಶಿಷ್ಟ ಎಂದೂ ಹೇಳಿಕೊಳ್ಳುವಾಗ, ತಾನು ಯಾರ ಯಾರ ಋಣದಲ್ಲಿ ಇರುವೆನೆಂದು ಹೇಳಿಕೊಳ್ಳುವ ಬಗೆಯಲ್ಲೂ ಈ ಸ್ಥಾನಮಾನದ ಆಲೋಚನೆ ಇದೆ ಎನ್ನುವುದನ್ನು ತಿಳಿಯಬೇಕು. ಪ್ರಾಚೀನ ಕಾಲದಿಂದ ಹಿಡಿದು ಆಧುನಿಕ ಕವಿ–ಕಾವ್ಯ ಚರಿತ್ರೆಕಾರರು ಜನ್ನನಿಗೆ ನೀಡುತ್ತಾ ಹೋದ ಸ್ಥಾನಮಾನವನ್ನು ಈ ಮುಂದಿನಂತೆ ಅವಲೋಕನ ಮಾಡಬಹುದು.

ಮಧುರ ಕವಿಯು
"ಸರ್ವರ ಸಮ್ಮತಮೆನಗಿದು
ಗರ್ವದ ಮಾತಲ್ಲ ಶಾಸ್ತ್ರಲೌಕಿಕ ಕಲೆಯೊಳ್
ಬೇರ್ವರಿದ ನೇಮಿ ಜನ್ನಮ
ರಿರ್ವರೆ ಕರ್ನಾಟಕೃತಿಗೆ ಸೀಮಾಪುರುಷರ್"

ಎಂದು ಹೇಳುತ್ತಾನೆ.ಜನ್ನನನ್ನು ನೇಮಿಯೊಂದಿಗೆ ಕನ್ನಡದ ಕೃತಿಗಳಿಗೆ ಸೀಮಾಪುರುಷ ಎಂದು ಗುರುತಿಸುತ್ತಾನೆ. ಇದು ಪ್ರಾಚೀನ ಕಾವ್ಯದ ಒಳಗೆಯೇ ಜನ್ನನಿಗೆ ನೀಡಲಾದ ಸ್ಥಾನವೂ ಹೌದು.ಇದಲ್ಲದೆ ಆಂಡಯ್ಯ 'ಜನ್ನಿಗನ ಜಸ' ದ ಬಗ್ಗೆ,ಮಲ್ಲಿಕಾರ್ಜುನ 'ಜನ್ನನ ದೇಸೆ'ಎಂದು, ಹೇಳುವುದರ ಮೂಲಕ,ಕುಮುದೇಂದು,ಕಮಲಭವ ಮೊದಲಾದವರೂ ಕೂಡ ಜನ್ನನನ್ನು ನೆನಪಿಸಿಕೊಳ್ಳುತ್ತಾರೆ. ಜನ್ನನು ರಚಿಸಿದ ಯಶೋಧರ ಚರಿತೆ ಮತ್ತು ಅನಂತನಾಥ ಪುರಾಣ ಇವೆರಡರಲ್ಲೂ ಕವಿಗಿದ್ದ ಧಾರ್ಮಿಕ ಉದ್ದೇಶ ಸ್ಪಷ್ಟವಾಗಿ ಕಾಣಿಸುತ್ತದೆ. ಯಶೋಧರ ಚರಿತೆಯಂತೂ ಜೀವ ಹಿಂಸೆಯಿಂದಾಗುವ ಅನರ್ಥವನ್ನು ಹೇಳುತ್ತಿದೆ. "ಶ್ರಾವಕ ಜನದುಪವಾಸಂ ಜೀವ ದಯಾಷ್ಟಮಿಯೊಳಗೆ ಪಾರಣೆ ಕಿವಿಗಳ್ಗೇ" ಎಂದು ಹೇಳುವ ಮೂಲಕ ತನ್ನ ಕಾವ್ಯ ಯಾರಿಗೆ ಎನ್ನುವುದನ್ನು ಸೂಚಿಸಿದ್ದಾನೆ. ಅನಂತನಾಥ ಪುರಾಣ ಹದಿನಾಲ್ಕನೇ ತೀರ್ಥಂಕರನ ಕಥೆ. "ಜಾರ ಚೋರ ವೀರರ ಕಥೆಯಂತೆ ಬಾಯ್ಸವಿಯ ಮಾತುಗಳಂ ಬಱಿಕಯ್ವ ಚರ್ಚೆಯಲ್ಲ, ಬಾಳಬಟ್ಟೆಯ ಪರಮಾಗಮ" ಎಂದು ತನ್ನ ಕಾವ್ಯದ ಬಗೆಗೆ ಅನಂತನಾಥ ಪುರಾಣ ದಲ್ಲಿ ಹೇಳಿಕೊಳ್ಳುತ್ತಾನೆ. ತನ್ನ ಕಾಲಕ್ಕೆ ಒಂದು ದೊಡ್ಡ ಧಾರ್ಮಿಕ ಸಂದೇಶವನ್ನು ನೀಡುವುದು ಜನ್ನನ ಉದ್ದೇಶವಾಗಿತ್ತು. 'ದಯಾಮೂಲಂ ಧರ್ಮಂ' ಎಂಬ ಮಾತು ಕೂಡ ಆತನ ಕಾವ್ಯೋದ್ದೇಶವನ್ನು ಹೇಳುತ್ತಿದೆ. ಹೀಗಿರುವಾಗ ಜನ್ನನನ್ನು ಅರ್ಥ ಮಾಡಿಕೊಂಡು ಪ್ರಾಚೀನ ಕಾವ್ಯ ಪರಂಪರೆಯಲ್ಲಿ ಆತನ ಕಾವ್ಯದ ಮೌಲ್ಯವನ್ನು ಗುರುತಿಸಬೇಕಾದರೆ ಜನ್ನನೊಳಗಿನ ಎರಡು ಪ್ರಧಾನ ಧಾರೆಗಳನ್ನು ನಾವು ಗುರುತಿಸಿ ಅರ್ಥೈಸಿಕೊಳ್ಳಬೇಕು. ಒಂದು ಆತನೊಳಗಿನ ಧಾರ್ಮಿಕ ಧಾರೆ, ಇನ್ನೊಂದು ಕಾವ್ಯಧಾರೆ. ಎಲ್ಲೆಲ್ಲಾ ಕಾವ್ಯಧಾರೆ ಮಿಂಚುತ್ತದೆ? ಎಲ್ಲೆಲ್ಲಾ ಧಾರ್ಮಿಕ ಧಾರೆಯೇ ಎದ್ದುಕಾಣುತ್ತದೆ? ಮತ್ತು ಎಲ್ಲೆಲ್ಲಾ ಧಾರ್ಮಿಕ ಧಾರೆಯನ್ನು ಆತನ ಕಾವ್ಯಧಾರೆ ಹಿಡಿದಿಟ್ಟು ಒಳಮುಖಿಯಾಗಿ ಹರಿಸಿದೆ? ಎಂಬ ಸೂಕ್ಷ್ಮ ವಿವೇಚನೆಯನ್ನು ಮಾಡದೇ ಹೋದರೆ ಜನ್ನನನ್ನು ಸರಿಯಾಗಿ ಅರ್ಥೈಸಿಕೊಳ್ಳಲು ಸಾಧ್ಯವಿಲ್ಲ.

ಜನ್ನನ 'ಯಶೋಧರ ಚರಿತೆ' ಕಾವ್ಯ ವಾದಿರಾಜನ ಯಶೋಧರ ಚರಿತೆಯನ್ನು ಮೂಲವಾಗಿ ಇಟ್ಟುಕೊಂಡು ರಚನೆಯಾದ ಕಾವ್ಯ. ಅನೇಕ ವಿದ್ವಾಂಸರು ಇದನ್ನು ವಾದಿರಾಜನ ಕೃತಿಯ ಅನುವಾದ ಎಂದು ಹೇಳಿದ್ದರೂ ಅದು ಕೇವಲ ಅನುವಾದವಷ್ಟೇ ಅಲ್ಲ. ಜನ್ನನ ಕೃತಿಯಲ್ಲಿ ಆತನ ಪ್ರತಿಭೆಯ ಕೈಚಳಕ ಪ್ರಧಾನವಾಗಿ ಎದ್ದು ತೋರುತ್ತದೆ. ಹೀಗಾಗಿ ಇಲ್ಲಿ ಜನ್ನನ ಸ್ಥಾನವನ್ನು ನಿರಾಕರಿಸಲಾಗದು. ತನ್ನ ಕವಿತ್ವ ಸಾಮರ್ಥ್ಯದಿಂದ ಅತ್ಯುತ್ತಮವಾಗಿಯೇ

ಕವಿ ಇಲ್ಲಿ ಪುನರ್ ಸೃಷ್ಟಿಯನ್ನು ಮಾಡಿದ್ದಾನೆ. ಜನ್ನನ ಸೃಷ್ಟಿಶೀಲ ಕವಿ ಪ್ರತಿಭೆಯಿಂದ ಆತನು ಆಯ್ದುಕೊಂಡ ಆಕರ ಕಾವ್ಯ ಹೊಸ ಜೀವವನ್ನು ಪಡೆದಿದೆ. ಹಾಗಾಗಿ ಅವನ ಕೃತಿಗಳಲ್ಲಿ ಇದು ಶ್ರೇಷ್ಠವಾದುದು ಎನ್ನಲಾಗಿದೆ. "ಋಣ ಸಾವಿರವಿರಲಿ, ಗಾತ್ರ ಗಜ್ಜುಗವಿರಲಿ ಪ್ರತಿಭೆಯೊಂದಿದ್ದು ತನ್ನ ಭಾಷೆಯ ಮರ್ಮಗಳೆಲ್ಲ ಬಾಯ್ಗೂಡಿದ್ದರೆ ಒಬ್ಬ ಕವಿ ಅದರಲ್ಲೆ ಜನ ಸಾವಿರ ಕಾಲ ನೆನೆಯುವಂಥ ಕೃತಿ ಬರೆಯಬಲ್ಲನೆನ್ನಲು ಜನ್ನ ಸಾಕ್ಷಿಯಾಗಿದ್ದಾನೆ. ಕೇವಲ ಕಂದ ಪದ್ಯಗಳಲ್ಲಿಯೇ ರಚಿತವಾಗಿದ್ದು ಹೆಸರಾದ ಸೃಜನಾತ್ಮಕ ಕೃತಿ ಬಹುಶಃ ಕನ್ನಡದಲ್ಲಿ ಇದೊಂದೇ ಎಂದು ತೋರುತ್ತದೆ"[2] ಎಂಬ ಲಕ್ಷ್ಮೀನಾರಾಯಣ ಭಟ್ಟರ ಮಾತು ಜನ್ನನ ಹಿರಿಮೆಯನ್ನು ಗುರುತಿಸುತ್ತದೆ.

ಧರ್ಮ ಮತ್ತು ಕಾವ್ಯಧರ್ಮಗಳ ಸಮನ್ವಯವನ್ನು ಕವಿ ಈ ಕಾವ್ಯದೊಳಗೆ ಯಶಸ್ವಿಯಾಗಿ ಸಾಧಿಸಿದ್ದಾನೆ. ಯಶೋಧರ ಚರಿತೆಯಲ್ಲಿ ಒಂದೆಡೆ ಧರ್ಮದ ಚಿಂತನೆಗಳು ಹರಿದರೆ, ಇನ್ನೊಂದೆಡೆ ಕವಿಯ ಕಾವ್ಯ ಕಲೆಯೂ ಕೂಡ ಉನ್ನತ ಸ್ವರೂಪದಲ್ಲಿ ಮೂಡಿಬಂದಿದೆ. ಪ್ರಣಯವು ಜೀವನದ ಮೂಲಭೂತ ಸಮಸ್ಯೆಯಾದುದರಿಂದ ಮತ್ತು ಇಂತಹ ಸಮಸ್ಯೆಯೊಂದರ ಮೂಲಕ ಕಾವ್ಯ ವಿಸ್ತರಿಸಿಕೊಳ್ಳುವುದರಿಂದ ಅದರ ಸ್ವರೂಪ ಸಾರ್ವಕಾಲಿಕವಾದುದು. ಹಾಗಾಗಿ ಅದು ಕಾಲದ ಪರಿಮಿತಿಯನ್ನು ದಾಟಿಯೂ ಆಕರ್ಷಕವಾಗಿ ಉಳಿಯಬಲ್ಲ ಕಾವ್ಯವಾಗುತ್ತದೆ. ಈ ಕಾರಣದಿಂದ ಯಶೋಧರ ಚರಿತೆ ಕನ್ನಡದ ಶ್ರೇಷ್ಠ ಕಾವ್ಯಗಳಲ್ಲೊಂದು ಎಂದು ಪರಿಗಣಿಸಬಹುದು. ಡಿ.ಎಲ್.ನರಸಿಂಹಾಚಾರ್ ಇದನ್ನರಿತೇ 'ವಾದಿರಾಜನಂತಹ ಮಹಾಕವಿಯನ್ನು ಮೀರಿಸಿರುವವ ಕನ್ನಡದ ಕವಿ ಜನ್ನ'[3] ಎಂದಿರುವುದು.

ಜನ್ನನ ಅನಂತನಾಥ ಪುರಾಣ ಕೂಡ ಒಂದು ಗಮನಾರ್ಹವಾದ ಕಾವ್ಯವೇ. ಪಂಪ, ರನ್ನರು ಆದಿಪುರಾಣ, ಅಜಿತತೀರ್ಥಂಕರ ಪುರಾಣಗಳಲ್ಲಿ ಜಿನಾಗಮನದ ಕಥೆಯನ್ನು ಹೇಳಿದ ಬಗೆಗೆ ಹೋಲಿಸಿದರೆ ಜನ್ನನಿಗೆ ಆತ ಆಯ್ಕೆಮಾಡಿಕೊಂಡ ಕಥಾವಸ್ತು ಆತನ ಕವಿಪ್ರತಿಭೆ ಮೈದುಂಬಿ ಹರಿಯುವಲ್ಲಿ ತೊಡಕನ್ನುಂಟು ಮಾಡಿರುವುದನ್ನು ಕಾಣಬಹುದು.ಆದರೆ ಆತನ ಪಾಂಡಿತ್ಯಪೂರ್ಣ ಕವಿತಾ ಶಕ್ತಿ ಈ ಸಣ್ಣ ಕಥಾ ಭಾಗವನ್ನು 1400 ಪದ್ಯಗಳ, 14 ಆಶ್ವಾಸಗಳ ಮಹಾಕಾವ್ಯವನ್ನಾಗಿಸಿದೆ. ಈ ಕಾವ್ಯದೊಳಗೆ ಹಾದುಹೋಗುವ ಚಂಡಶಾಸನ– ಸುನಂದೆಯರ ಪ್ರಣಯ ಪ್ರಕರಣದಲ್ಲಿ ಸುನಂದೆಯನ್ನು ಕಂಡ ಮೇಲೆ ಚಂಡಶಾಸನನಲ್ಲಿ ಉಂಟಾದ ಬಯಕೆಯಾಗಲೀ, ಕೊನೆಗೆ ವಿಫಲನಾದಾಗ ಆಕೆಯ ಸಾವಿನೊಂದಿಗೆ ಆತನೂ ಸಹಗಮನ ಮಾಡಿಕೊಂಡ ಬಗೆಯನ್ನು ಜನ್ನ ಚಿತ್ರಿಸಿದ ರೀತಿಯಲ್ಲಿ ಆತನ ಉಜ್ವಲ ಕವಿಪ್ರತಿಭೆಯನ್ನು ಕಾಣಬಹುದಾಗಿದೆ. "ಇಂಥ ದುರಂತ ಪಾತ್ರವನ್ನು ಕನ್ನಡ ಕಾವ್ಯಭೂಮಿಗೆ ಕಾಣಿಕೆಯಾಗಿ ಕೊಟ್ಟು ಜನ್ನ ಕವಿ ಕೀರ್ತಿಯ ಕಲಶವೇರಿಸಿಕೊಂಡಿರುವನು"[4] ಎಂಬ ಮಾತು ಜನ್ನನಿಗೆ ಕನ್ನಡ ಸಾಹಿತ್ಯಲೋಕದಲ್ಲಿ ಕೊಡುವ ಸ್ಥಾನವನ್ನು ಗ್ರಹಿಸುವಲ್ಲಿ ಅರ್ಥಪೂರ್ಣವಾಗಿದೆ.

ಜನ್ನನನ್ನು ಕನ್ನಡ ಸಾಹಿತ್ಯಲೋಕದಲ್ಲಿ ಶಾಶ್ವತವಾಗಿ ಉಳಿಸಿದ್ದು ಆತನ ಕಾವ್ಯ ಶೈಲಿಯ ಲಾಲಿತ್ಯ, ಜೀವಪೂರ್ಣ ಪಾತ್ರಗಳು ಮತ್ತು ಪದ್ಯಗಳ ಭಾವ ಪರಿಪುಷ್ಟತನ. ಕಾಮದ ಕೇಡನ್ನು ಅಮೃತಮತಿಯ ಪ್ರಣಯ ಮತ್ತು ಚಂಡಶಾಸನನ ಪ್ರಣಯದ ಮೂಲಕ ಚಿತ್ರಿಸಿದ್ದು, ಹೀಗೆ ಚಿತ್ರಿಸುವಾಗಲೂ ಮಾನವಸಹಜ ದೌರ್ಬಲ್ಯವಿದು ಎಂಬ ಎಚ್ಚರದ ಜೊತೆ 'ವಿಧಿವಿಲಸನ'ದ ಸಹಾಯ ಒದಗಿದರೆ ತಲುಪಬಹುದಾದ ಪ್ರಪಾತದ ಸ್ಥಿತಿಯನ್ನು ಜನ್ನ ಅದ್ಭುತವಾಗಿ ಕಟ್ಟಿಕೊಟ್ಟಿದ್ದಾನೆ.

"ಮಹಾ ಕಾವ್ಯದ ಔನ್ನತ್ಯ–ಭವ್ಯತೆಗಳು ಆಂಶೀಕವಾಗಿಯಾದರೂ ಈ ಕಿರುಗಬ್ಬಗಳಲ್ಲಿ ತಲೆದೋರಿವೆ ಎಂದೊಪ್ಪಬೇಕು. ಆದ್ದರಿಂದ ಜನ್ನ ಮಹಾಕವಿಗಳ ಸಾಲಿನಲ್ಲಿ ನಿಲ್ಲಲಾರನಾದರೂ

ಮಧ್ಯಮವರ್ಗದ ಕವಿಗಳ ಪಂಕ್ತಿಯಲ್ಲಿ ಅಗ್ರಸ್ಥಾನಕ್ಕೆ ನಿಸ್ಸಂದೇಹವಾಗಿ ಅರ್ಹನಾಗುತ್ತಾನೆ"[5] ಎಂದು ಹೇಳುವ ಪ್ರೊ. ಸಿ.ಪಿ.ಕೆ.ಯವರು ಜನ್ನನಿಗೊಂದು ಸ್ಥಾನವನ್ನು ಗುರುತಿಸುತ್ತಾರೆ. ಇದಲ್ಲದೆ "ಪಂಪ, ಕುಮಾರವ್ಯಾಸ, ರನ್ನರ ನಂತರ ಕನ್ನಡ ಕಾವ್ಯದಲ್ಲಿ ಜನ್ನನ ಸ್ಥಾನವೇ ಬರುತ್ತದೆ"[6] ಎಂಬ ಆರ್.ಸಿ. ಕುಲಕರ್ಣಿಯವರ ವಾದ, "ರನ್ನ ಮತ್ತು ಜನ್ನ ಸುಮಾರು ಸಮಶಕ್ತಿಯ ಕವಿಗಳು, ಎರಡನೇ ಸಾಲಿನ ಅಗ್ರ ಕವಿಗಳು"[7] ಎಂಬ ಡಾ. ಕೆ.ವೈ. ಶಿವಕುಮಾರ್ ಇವರ ಅಭಿಪ್ರಾಯ ಜನ್ನನಿಗೆ ಕನ್ನಡ ಸಾಹಿತ್ಯಲೋಕದಲ್ಲಿ ಸ್ಥಾನವನ್ನು ಕಲ್ಪಿಸಲು ನಡೆಸಿದ ಶೋಧದ ಫಲಿತಗಳು. ಯಾವ ಕವಿಗೆ ಯಾವ ಸ್ಥಾನ ಎಂದು ನೋಡುವ ಸಾಹಿತ್ಯ ಚರಿತ್ರೆಯ ಗ್ರಹಿಕೆಯ ಮಾದರಿ ಇದು. ಜನ್ನನಿಗೆ ಹಿರಿಮೆಯನ್ನು ತಂದುಕೊಟ್ಟದ್ದು ಆತನ ಆಸಕ್ತಿ. "ರತಿರಹಸ್ಯವನ್ನು ಬಣ್ಣಿಸುವುದಕ್ಕಿಂತಲೂ ಪ್ರಣಯ ಸಮಸ್ಯೆಯನ್ನು ಬಿಡಿಸುವುದರ ಕಡೆಗೆ ಅವನ ಆಸಕ್ತಿ ಹೆಚ್ಚು" (ತೀ.ನಂ.ಶ್ರೀಕಂಠಯ್ಯ). ಪ್ರಾಚೀನ ಕನ್ನಡ ಸಾಹಿತ್ಯದಲ್ಲಿ ಪ್ರಣಯ ಸಮಸ್ಯೆಯನ್ನು ಈ ಮಟ್ಟದಲ್ಲಿ ಸೂಕ್ಷ್ಮವಾಗಿ ಬಿಡಿಸುವ ಆಸಕ್ತಿ ತೋರಿ ಅದರಲ್ಲಿ ಯಶಸ್ವಿಯಾದ ಕವಿ ಜನ್ನನೊಬ್ಬನೇ. ಜನ್ನನನ್ನು, ಆತನೊಬ್ಬ ಧಾರ್ಮಿಕ ಪರಂಪರೆಯ ಚೌಕಟ್ಟಿನಲ್ಲಿ ಕಾವ್ಯ ರಚಿಸಿದ ಎಂಬ ಕಾರಣದಿಂದ ಸರಳವಾಗಿ ಗ್ರಹಿಸಲಾಗದು. ಆತ ಧರ್ಮ–ಕಾವ್ಯ ಧರ್ಮ, ಪ್ರತಿಭೆ – ಪಾಂಡಿತ್ಯ, ಮಾರ್ಗ – ದೇಸಿ, ಲಾಲಿತ್ಯ – ಚಮತ್ಕಾರಗಳ ನಡುವೆ ಸಮನ್ವಯವನ್ನು ಸಾಧಿಸಲು ಯತ್ನಿಸಿದ ಒಬ್ಬ ಸಂಕೀರ್ಣ ಕವಿ.

**–3–**

ಆಧುನಿಕ ಸಂಧರ್ಭದಲ್ಲಿ ಸಾಹಿತ್ಯ ಚರಿತ್ರೆಕಾರರು ಅಖಂಡ ಸಾಹಿತ್ಯ ಪ್ರವಾಹವನ್ನು ವಿಂಗಡಿಸಿ ಕೊಳ್ಳುವುದಕ್ಕಾಗಿ ಕೆಲವು ಗುರುತುಗಳನ್ನು ಹುಡುಕಿದರು.ಇದಕ್ಕಾಗಿ ಕವಿಗಳ ಹೆಸರಿನಲ್ಲಿ ಕೆಲವು ಯುಗಗಳನ್ನು ಸೃಷ್ಟಿಸಲಾಯಿತು. ಒಂದು ಕಾಲದ ಯಾವುದೋ ಒಬ್ಬ ಕವಿಯನ್ನು ಯುಗ ಪ್ರವರ್ತಕರನ್ನಾಗಿ ಪರಿಭಾವಿಸಿ ಹೆಸರಿಸಲಾಯಿತು. ಪಂಪ ಯುಗ, ಬಸವ ಯುಗ, ಹರಿಹರ ಯುಗ ಎಂದು ಗುರುತಿಸಿ ಕವಿಪ್ರತಿಭೆಗಳನ್ನು ಕಾವ್ಯ ಚರಿತ್ರೆಯ ಮೈಲಿಗಲ್ಲುಗಳನ್ನಾಗಿ ಹೆಸರಿಸಲಾಯಿತು. ಈ ಕ್ರಮದಲ್ಲಿ ನೋಡಿದರೆ ಜನ್ನ ನಮ್ಮ ಸಾಹಿತ್ಯ ಚರಿತ್ರೆ ಕಾರರ ಮಾನದಂಡದ ಒಂದು ಮೈಲಿಗಲ್ಲಾಗಲೀ, ಯುಗಪ್ರವರ್ತಕನೆಂದಾಗಲೀ ಗುರುತಿಸಲ್ಪಡಲಿಲ್ಲ. ಇದಲ್ಲದೆ ಜನ್ನನ ಕಾಲದ ಹಿಂದೆ ಮತ್ತು ನಂತರದ ಕನ್ನಡ ಕವಿಗಳ ಮನಸ್ಥಿತಿಯನ್ನು ನೋಡಿದಾಗ ಅದು ಷಟ್ಪದಿ ಪ್ರಕಾರದ ಉತ್ಕರ್ಷದ ಕಾಲವಾಗಿ ಕಾಣುತ್ತದೆ.ಇದರ ನಡುವೆ ಚಂಪೂ ಕವಿಗಳು ಕಾಣಿಸಿಕೊಂಡರೂ ಪಂಪ ರನ್ನರ ಮಟ್ಟಕ್ಕೆ ಗುರುತಿಸಲ್ಪಡಲಿಲ್ಲ. ಈ ನಡುವಿನ ಕಾಲದಲ್ಲಿ ಒಂದು ಕಾವ್ಯವನ್ನು ಸಂಪೂರ್ಣ ಕಂದಪದ್ಯದಲ್ಲೂ, ಇನ್ನೊಂದು ಕಾವ್ಯವನ್ನು ಚಂಪೂ ಪ್ರಕಾರದಲ್ಲೂ ಬರೆದ ಜನ್ನ ಒಂದು ಯುಗ ಪ್ರವರ್ತಕ ಎಂದು ಸಾಹಿತ್ಯ ಚರಿತ್ರೆಕಾರರಿಂದ ಗುರುತಿಸಲ್ಪಡಲಿಲ್ಲ. ಹೀಗೆಂದು ಜನ್ನನ ಮಹತ್ವ, ಕಾವ್ಯದ ಹಿರಿಮೆ ಕಡಿಮೆಯೇನಲ್ಲ.

ಜನ್ನನ ಮಹತ್ವವನ್ನು, ಪ್ರಾಚೀನ ಸಾಹಿತ್ಯಲೋಕದೊಳಗೆ ಆತನ ಸ್ಥಾನಮಾನವನ್ನು ಅರಿಯಲು ಯತ್ನಿಸುವಾಗ ಜನ್ನನನ್ನು ನೋಡಬಹುದಾದ ಹಲವು ಬೆಳಕಿನ ಕಿಂಡಿಗಳು ಕಾಣುತ್ತದೆ. ಹೀಗಿರುವಾಗ ಈ ಯಾವ ಬೆಳಕಿಂಡಿಯಲ್ಲಿ ಜನ್ನನನ್ನು ನೊಡಬೇಕು? ಎಂಬ ಪ್ರಶ್ನೆ ಎದುರಾಗುತ್ತದೆ.ಜನ್ನನನ್ನು 'ಕವಿರತ್ನ'ರ(ಪಂಪ,ರನ್ನ,ಜನ್ನ) ಬೆಳಕಿನಲ್ಲಿ ನೋಡಬೇಕೆ? 'ಕವಿ ಚಕ್ರವರ್ತಿ'ಗಳ(ರನ್ನ,ಪೊನ್ನ,ಜನ್ನ) ಬೆಳಕಿನಲ್ಲಿ ನೋಡಬೇಕೆ ? 'ವಾದಿರಾಜ'ನ ಬೆಳಕಿನಲ್ಲಿ ನೋಡಬೇಕೆ? ಕನ್ನಡದಲ್ಲಿ ಸೃಷ್ಟಿಸಲ್ಪಟ್ಟ ಜೈನಪುರಾಣ ಗಳ ಬೆಳಕಿನಲ್ಲಿ ನೋಡಬೇಕೆ? ಕಂದ–

ಚಂಪೂವಿನ ಬೆಳಕಿನಲ್ಲಿ ನೋಡಬೇಕೆ? ಜನ್ನನ ಕಾಲದ ಬೆಳಕಿನಲ್ಲಿ ನೋಡಬೇಕೆ? ಅಥವಾ ಜನ್ನನೇ ಸೃಷ್ಟಿಸಿದ ಕಾವ್ಯದ ಬೆಳಕಿನಲ್ಲಿ ನೋಡಬೇಕೆ? ಈ ಪ್ರಶ್ನೆಗಳು ಸರಳ ಪ್ರಶ್ನೆಗಳಲ್ಲ. ನಾವು ಕವಿಯನ್ನು ಇಂತಹ ಒಂದೊಂದು ಕ್ರಮದಿಂದ ನೋಡಿದಾಗಲೂ ಅದು ಕೊಡುವ ಸ್ಥಾನದ ಪ್ರಶ್ನೆಗಳು ಬದಲಾಗುತ್ತಾ ಹೊಗುತ್ತದೆ. ಹೀಗಿರುವಾಗ ಒಬ್ಬ ಕವಿಗೆ ಒಂದು ಸ್ಥಾನ ನೀಡಲೇ ಬೇಕೆಂಬ ಹಠ ಸಾಹಿತ್ಯ ಚರಿತ್ರೆಕಾರರಿಗೆ ಇರಲೇ ಬೇಕಾಗಿಲ್ಲ. ಈ ಕ್ರಮದ ಹೊರತಾಗಿಯೂ ಸಾಹಿತ್ಯದ ಅಭ್ಯಾಸ ಸಾಧ್ಯವಿದೆ. ಪ್ರಾಚೀನ ಕಾಲದ ಸಾಹಿತ್ಯವಿರಲಿ, ಆಧುನಿಕ ಸಾಹಿತ್ಯವಿರಲೀ ಅದನ್ನು ಸಾಹಿತ್ಯಚರಿತ್ರೆಯ ದೃಷ್ಟಿಯಿಂದಲ್ಲದೆ ಕೂಡ ಓದಲು ಸಾಧ್ಯವಿದೆ ಎನ್ನುವುದನ್ನು ಮುಕ್ತವಾಗಿ ಒಪ್ಪಿಕೊಳ್ಳಬೇಕು. ಈ ಹಿನ್ನೆಲೆಯಿಂದ ನೋಡಿದಾಗ ಜನ್ನನ ಸ್ಥಾನಮಾನವನ್ನು ತೀರ್ಮಾನಿಸುವ ಹಾದಿಯು ಹೊಸ ಬಗೆಯಿಂದ ಕಾಣುತ್ತದೆ. ಈ ಯೋಚನೆಗಳು ಕವಿ – ಕಾವ್ಯವನ್ನು ಹೊಸ ಬಗೆಯಿಂದ ನೋಡಬಹುದಾದ ಸಾಧ್ಯತೆಯನ್ನು ನಮ್ಮ ಮುಂದಿಡುತ್ತವೆ.

ಅಡಿಟಿಪ್ಪಣಿ:

1. ಪುಟ 185, ಮುಗಳಿ ರಂ.ಶ್ರೀ. ಕನ್ನಡ ಸಾಹಿತ್ಯ ಚರಿತ್ರೆ
2. ಪುಟ 496, ಲಕ್ಷ್ಮಿನಾರಾಯಣ ಭಟ್ಟ ಎನ್.ಆರ್. ಸಮಗ್ರ ಕನ್ನಡ ಸಾಹಿತ್ಯ ಚರಿತ್ರೆ, ಸಂ.3
3. ಪುಟ 488, ನರಸಿಂಹಾಚಾರ್ ಡಿ.ಎಲ್. ಪೀಠಿಕೆಗಳು,ಲೇಖನಗಳು
4. ಪುಟ 508, ಬ್ರಹ್ಮಪ್ಪ ಜಿ. ಸಮಗ್ರ ಕನ್ನಡ ಸಾಹಿತ್ಯ ಚರಿತ್ರೆ, ಸಂ.3
5. ಪುಟ xlviii , ಸಂ: ಪ್ರೋ.ಸಿ.ಪಿ.ಕೆ. ಪ್ರಸ್ತಾವನೆ, ಜನ್ನ ಸಂಪುಟ
6. ಪುಟ 514, ಕುಲಕರ್ಣಿ ಆರ್.ಸಿ. ಸಮಗ್ರ ಕನ್ನಡ ಸಾಹಿತ್ಯ ಚರಿತ್ರೆ, ಸಂ.3
7. ಪುಟ 416, ಶಿವಕುಮಾರ್.ಕೆ.ವೈ. ಜನ್ನ:ಒಂದು ಅಧ್ಯಯನ

(ದಿನಾಂಕ 13/09/13 ಮತ್ತು 14/09/13 ರಂದು ಬೆಂಗಳೂರಿನ ಗಾಂಧಿಭವನದಲ್ಲಿ ಬಿ.ಎನ್.ಇ.ಎಸ್ ಸಂಸ್ಥೆ ಮತ್ತು ಕನ್ನಡ ಸಂಸ್ಕೃತಿ ಇಲಾಖೆ ಯ ಸಹಯೋಗದಲ್ಲಿ ನಡೆದ ಜನ್ನ ಸಾಹಿತ್ಯ ಸಂಭ್ರಮ ಎಂಬ 2 ದಿನಗಳ ರಾಷ್ಟ್ರೀಯ ವಿಚಾರ ಸಂಕಿರಣದಲ್ಲಿ ಮಂಡಿಸಿದ ಪ್ರಬಂಧ.)

ಅರಿದಿರುವ ಯತಿ ಮುಂದೆ
ಪರಿವೆಯಿರದ ಜನತತಿ ಹಿಂದೆ
ದಾರಿ ಮಲಗಿತ್ತು ಬತ್ತಲಾಗಿ
ಅರಿವು–ಪರಿವೆಗಳ ಹಂಗಿಲ್ಲದೆ

## ಸಾಕ್ಷಿಪ್ರಜ್ಞೆಗಳ ಮಾತು – ಮೌನಗಳು
(ಕಳೆದ ಸಂಚಿಕೆಯಿಂದ)

**ಅಜಕ್ಕಳ ಗಿರೀಶ ಭಟ್**
ಸರಕಾರಿ ಪ್ರಥಮ ದರ್ಜೆ ಕಾಲೇಜು,
ಬಂಟ್ವಾಳ, ದಕ್ಷಿಣ ಕನ್ನಡ – 574219

### ಆಯ್ದ ಅಭಿವ್ಯಕ್ತಿ ಸ್ವಾತಂತ್ರ್ಯ

ವಿವಿಧ ಸಾಹಿತ್ಯ ಕೃತಿಗಳು ವಾದ ವಿವಾದಗಳಿಗೆ ಕಾರಣವಾದಾಗ ಅಂಥ ವಾದ, ವಿವಾದ, ಸಂವಾದಗಳ ಭಾಗವಾಗಿ ಅಭಿವ್ಯಕ್ತಿ ಸ್ವಾತಂತ್ರ್ಯದ ಬಗ್ಗೆ ಚರ್ಚೆ ನಡೆಯುತ್ತದೆ. ಅಭಿವ್ಯಕ್ತಿ ಸ್ವಾತಂತ್ರ್ಯದ ಕುರಿತಂತೆ ಗಿರೀಶ್ ಕಾರ್ನಾಡ್ ಅವರ ಮಾತುಗಳು ಹೀಗಿವೆ– "ಅಭಿವ್ಯಕ್ತಿ ಸ್ವಾತಂತ್ರ್ಯದ ಅಡಿಯಲ್ಲಿ ಬರೆಯುವ ಅಧಿಕಾರವಿದೆ. ಕಾದಂಬರಿ ಎಷ್ಟೇ ಕೆಟ್ಟದಾಗಿದ್ದರೂ ಅದನ್ನು ಬರೆಯುವ ಹಕ್ಕು ಲೇಖಕನಿಗೆ ಇದೆ. ಆ ಕಾದಂಬರಿ ಓದಿ ಯಾರಿಗಾದರೂ ನೋವಾದರೆ ಅದಕ್ಕೆ ಲೇಖಕ ಜವಾಬ್ದಾರ ಅಲ್ಲ. ನನಗೆ ಅನಿಸಿದ ವಿಷಯ ಗಳನ್ನು ಹೇಳುವ ಅಧಿಕಾರವನ್ನು ಯಾರೂ ಕಿತ್ತುಕೊಳ್ಳುವಂತಿಲ್ಲ.....", "ಪುಸ್ತಕ ದಲ್ಲಿ ಏನು ಇದೆ ಎಂಬುದು ಮುಖ್ಯವಲ್ಲ, ಬರೆಯುವ ಸ್ವಾತಂತ್ರ್ಯ ನನಗೆ ಇದೆ. ವಿಚಾರ ಮಾಡಿ ಬರೆಯಬೇಕು ಎಂಬ ವಾದ ಮುಖ್ಯವಲ್ಲ. ಆದರೆ ದೇಶದ ಯಾವ ವ್ಯಕ್ತಿಗೂ ದೈಹಿಕ ನೋವು ಉಂಟುಮಾಡುವುದು ತಪ್ಪು. ಅಂತಹ ವೈಯಕ್ತಿಕ ದಾಳಿ ನಡೆಸಬಾರದು. ವಿಷಯದ ಬಗ್ಗೆ ಚರ್ಚೆ ನಡೆಸಲು ಯಾವಾಗಲೂ ಅವಕಾಶ ಇದೆ". ಇದು 'ಢುಂಢಿ' ಕಾದಂಬರಿಯ ವಿವಾದದ ಸಂದರ್ಭದಲ್ಲಿ ಕಾರ್ನಾಡರು ಹೇಳಿದ ಮಾತು[11]. 'ಪಬ್ಲಿಕ್ ಆರ್ಡರ್', ಮತ್ತು 'ಡೀಸೆನ್ಸಿ', 'ಮೊರ್‍ಯಾಲಿಟಿ' ಇತ್ಯಾದಿಗಳ ಆಧಾರದಲ್ಲಿ ಭಾರತೀಯ ದಂಡಸಂಹಿತೆಯ ವಿವಿಧ ಸೆಕ್ಷನ್‌ಗಳ ಅನ್ವಯ ಲೇಖಕರನ್ನು ಸುಲಭವಾಗಿ ತಪ್ಪಿತಸ್ಥರನ್ನಾಗಿ ಮಾಡಲು ಸಾಧ್ಯವಿದೆ ಎಂಬ ಹಿನ್ನೆಲೆಯಲ್ಲಿ ಕಾರ್ನಾಡರು ಎತ್ತಿ ಹಿಡಿಯುವ ಅಭಿವ್ಯಕ್ತಿ ಸ್ವಾತಂತ್ರ್ಯವು ಒಪ್ಪಬೇಕಾದದ್ದೇ ಆಗಿದೆ. ಆದರೆ ಎಲ್ಲರಿಗೂ ಅಂಥ ಸ್ವಾತಂತ್ರ್ಯವಿದೆಯೆಂದು ಅವರು ಪರಿಗಣಿಸುವುದಿಲ್ಲ. ಯಾಕೆಂದರೆ, ಅವರಂಥವರ ದ್ವಿಮುಖ ನೀತಿಗಳನ್ನು, ದ್ವಂದ್ವ ನಿಲುವುಗಳನ್ನು ಪ್ರಶ್ನಿಸಿದ ಕೂಡಲೇ ಅದು ಅವರಿಗೆ ತಾತ್ವಿಕ ಚರ್ಚೆಯಾಗಿ ಉಳಿಯುವುದಿಲ್ಲ. ವೈಯಕ್ತಿಕ ತೇಜೋವಧೆಯಾಗಿ ಕಾಣುತ್ತದೆ. "ನಮ್ಮ ಅಭಿಪ್ರಾಯಗಳನ್ನು ಒಪ್ಪದಿರಲು, ಖಂಡಿಸಲು ನಿಮಗೆ ಹಕ್ಕಿದೆ. ಆದರೆ, ನಿಮ್ಮ ಟೀಕೆ ಟಿಪ್ಪಣಿಗಳು ವೈಯಕ್ತಿಕ ತೇಜೋವಧೆಯ ಮಟ್ಟಕ್ಕೆ ಇಳಿಯಬಾರದು..."[12] ಮೋದಿ ಪ್ರಧಾನಿ ಯಾಗುವುದನ್ನು ನೋಡಲು ನಾನು ಇಷ್ಟಪಡುವುದಿಲ್ಲ ಎಂದು ಮುಂತಾಗಿ

ಅನಂತಮೂರ್ತಿಯವರು ಹೇಳಿದ ಸಂದರ್ಭದಲ್ಲಿ ಬಂದ ಪತ್ರಿಕಾಬರಹಗಳಲ್ಲಿ ಅನಂತಮೂರ್ತಿಯವರನ್ನು ಕಟುವಾಗಿ ಟೀಕಿಸಲಾಗಿತ್ತು. ಅಂಥ ಬರಹಗಳಿಗೆ ಪ್ರತಿಕ್ರಿಯೆಯಾಗಿ ಕಾರ್ನಾಡ್ ಮೊದಲಾದವರು ವ್ಯಕ್ತಪಡಿಸಿದ ಅಭಿಪ್ರಾಯವಿದು. ಸಾಹಿತಿಯಾಗಲೀ, ರಾಜಕಾರಣಿಯಾಗಲೀ ಸಾರ್ವಜನಿಕ ಹಣದಿಂದ ಏನಾದರೂ ಸೌಲಭ್ಯ ಪಡೆದುಕೊಂಡುದನ್ನು ಹೇಳಿದರೆ, ಅಥವಾ ಅದು ನೈತಿಕವೇ ಅನೈತಿಕವೇ ಎಂದು ಚರ್ಚಿಸಿದರೆ ಅದು ವೈಯಕ್ತಿಕ ತೇಜೋವಧೆಯಾಗುತ್ತದೆಯೆ? 'ವೈಯಕ್ತಿಕ ತೇಜೋವಧೆ' ಎನ್ನುವುದು ನಮ್ಮಲ್ಲಿ ಲಾಗಾಯ್ತಿನಿಂದ ಬಳಸಿಕೊಂಡು ಬರಲಾಗುತ್ತಿರುವ ಪ್ರತ್ಯಸ್ತ್ರವಾಗಿದೆ. ಉದಾಹರಣೆಗೆ, ಅರುಣ್ ಶೌರಿಯವರು ದಾಖಲೆಗಳ ಸಮೇತ ಪ್ರಮುಖ ಇತಿಹಾಸಕಾರರ ಬಣ್ಣಗಳನ್ನು ಬಯಲು ಮಾಡಿದಾಗ ಅಂಥ ಇತಿಹಾಸಕಾರರು ತಮ್ಮ ಬಗೆಗಿನ ಟೀಕೆಯನ್ನು ಎದುರಿಸಿದ್ದು ಹೇಗೆಂದರೆ, " ಇದು ವೈಯಕ್ತಿಕವಾದ ಟೀಕೆ", "ಇದು ಅನಾಗರಿಕತೆ", "ಇದು ಅಲ್ಪತನ" ಎಂದೆಲ್ಲ ಹೇಳುವ ಮೂಲಕ.[13] ತಮ್ಮ ಮೇಲಿನ ಆರೋಪಗಳನ್ನು ವೈಯಕ್ತಿಕ ತೇಜೋವಧೆ ಎಂದು ಪರಿಗಣಿಸುವವರು ತಮ್ಮ ವೈಯಕ್ತಿಕ ನಡವಳಿಕೆ ನೈತಿಕವಾಗಿ ಸರಿಯಿಲ್ಲ ಎಂದು ಒಪ್ಪಿಕೊಂಡಂತೆಯೇ ಅಲ್ಲವೆ ? ಮುಂದುವರಿದು ಕಾರ್ನಾಡ್ ಮತ್ತಿತರರು ಹೇಳುತ್ತಾರೆ – "ಮಾಧ್ಯಮವೇ ವಿಷಪೂರಿತವಾಗಿ ಏಕಮುಖ ಪ್ರಚಾರದಲ್ಲಿ ನಿರತವಾದರೆ ಗತಿ ಏನು ? ಸಮಕಾಲೀನ ಕರ್ನಾಟಕದಲ್ಲಿ ಇಂಥ ವಿಷಮ ಸನ್ನಿವೇಶ ಈಗ ಜನರ ಮುಂದಿದೆಯೆಂದೇ ನಾವೆಲ್ಲ ತೀವ್ರವಾಗಿ ಆತಂಕಗೊಂಡಿದ್ದೇವೆ." ಮೋದಿ ವಿರೋಧಿಯಾದ ಅನಂತ ಮೂರ್ತಿಯವರನ್ನು ವಿರೋಧಿಸಿ ಅಭಿಪ್ರಾಯಗಳು ಪತ್ರಿಕೆಗಳಲ್ಲಿ ಪ್ರಕಟವಾದಾಗ ಸಹಜವಾಗಿಯೇ ಉಂಟಾದ ಆತಂಕವಿದು. ಮೋದಿಯ ಅಭಿವೃದ್ಧಿ ಮಾದರಿಯನ್ನು, ಸಾಂಸ್ಕೃತಿಕ ರಾಜಕೀಯ ನಿಲುವುಗಳನ್ನೆಲ್ಲ ವಿರೋಧಿಸಬಹುದು. ಅದು ಪ್ರತ್ಯೇಕ ವಿಚಾರ. ಆದರೆ, ಏಕಮುಖ ಪ್ರಚಾರದ ಬಗ್ಗೆ ಆತಂಕಗೊಳ್ಳುವವರು "ನರೇಂದ್ರ ಮೋದಿಯಂತಹ ನರಹಂತಕ", "ನರೇಂದ್ರ ಮೋದಿ ಎಂಬ ನರಹಂತಕ", "ಮೋದಿ ಎಂಬ ಫ್ಯಾಸಿಸ್ಟ್", "ನರಹಂತಕ ನರೇಂದ್ರ ಮೋದಿ", "ತಾನು ಮಾಡಿದ ನರಮೇಧದ ಪ್ರಮಾದ ಒಪ್ಪಿಕೊಳ್ಳದ ಉದ್ಧಟ, ಮಾನವತ್ವ ಇಲ್ಲದ ಸ್ಪೀಶೀಸ್", "ನರೇಂದ್ರ ಮೋದಿಯನ್ನು ನರಮೇಧಿ ಎಂದು ಕರೆಯುವುದೇ ಸೂಕ್ತ", "ಒಂದು ಜನಾಂಗದ ಹತ್ಯೆ ಮಾಡಿದ, ವಿನಾ ಕಾರಣ ಒಂದು ಸಮುದಾಯವನ್ನೇ ದ್ವೇಷಿಸುವ ನರೇಂದ್ರಮೋದಿ"[14] ಎಂಬಂಥ ಮಾತುಗಳು ಪತ್ರಿಕೆಗಳಲ್ಲಿ ಪದೇ ಪದೇ ಬಂದಾಗ ಏಕಮುಖ ಪ್ರಚಾರದ ಬಗ್ಗೆ ಆತಂಕಗೊಳ್ಳಲಿಲ್ಲ.

ವಾಸ್ತವ ಏನೆಂದರೆ ಕಳೆದ ಹತ್ತು–ಹದಿನೈದು ವರ್ಷಗಳಲ್ಲಿ ಪತ್ರಿಕಾ ಮಾಧ್ಯಮವು ಯಾವುದೇ ಒಂದು ನಿರ್ದಿಷ್ಟ ವಿಚಾರಧಾರೆಯ ಹಿಡಿತದಲ್ಲಿಲ್ಲ. ಶಿಕ್ಷಿತರ ಸಂಖ್ಯೆ, ಮಾಧ್ಯಮಗಳ ಸಂಖ್ಯೆ ವೃದ್ಧಿಯಾದಂತೆ ಎಲ್ಲ ವಿಚಾರಧಾರೆಗಳಿಗೂ ಮಾಧ್ಯಮವು ಅನಿವಾರ್ಯವಾಗಿ ಅವಕಾಶ ನೀಡಬೇಕಾದ ಪರಿಸ್ಥಿತಿ ಬಂದಿದೆ. ಯಾವ ಪತ್ರಿಕೆಗೂ ಇಂದು ಏಕಸ್ವಾಮ್ಯವಿಲ್ಲ. ಅಂದರೆ, ಹಿಂದೆಲ್ಲ ಪತ್ರಿಕಾ ಮಾಧ್ಯಮವು ಅನಂತಮೂರ್ತಿಯವರಂಥ ಪ್ರಭಾವಿ ಸಾಹಿತಿಗಳ ಚಿಂತನೆಗೆ ಪೂರಕವಾಗಿಯೇ ಇತ್ತು. ಅಥವಾ ಪತ್ರಿಕೆಗಳ ಮೇಲೆ ತಕ್ಕಮಟ್ಟಿನ ಹಿಡಿತ ಕೂಡ ಮುಂಚೂಣಿ ಸಾಹಿತಿಗಳಿಗೆ, ಚಿಂತಕರಿಗೆ ಇತ್ತು. ಇಂದು ಹಾಗಲ್ಲ. ಪತ್ರಿಕೆ ಓದುವವರು, ಪತ್ರಿಕೆಯಲ್ಲಿ ಬರೆಯುವವರು ಹೆಚ್ಚಾಗಿದ್ದಾರೆ. ಅಂತರ್ಜಾಲದಂಥ ಸ್ವತಂತ್ರ ಮಾಧ್ಯಮಗಳಿವೆ. "ನಾವು ನೆಹರೂ, ಇಂದಿರಾಗಾಂಧಿ ಎಲ್ಲರನ್ನೂ ಟೀಕಿಸಬಹುದಾಗಿತ್ತು. ಲೋಹಿಯಾ ಅಂತೂ ನೆಹರೂವನ್ನು ಅಟ್ಯಾಕ್ ಮಾಡುತ್ತಿದ್ದರು... ಆದರೆ ನೆಹರೂ ಕಡೆಯವರು ಲೋಹಿಯಾ ಮತ್ತಿತರರನ್ನು

ಇಂಥ ನೀಚ ಮಾತುಗಳಿಂದ ಅಟ್ಯಾಕ್ ಮಾಡುತ್ತಿರಲಿಲ್ಲ". ಎಂದು ಅನಂತಮೂರ್ತಿಯವರು ವಿಷಾದದಿಂದ ಹೇಳುತ್ತಾರೆ.[15] ವಾಸ್ತವವಾಗಿ ನೆಹರೂ ಅವರಿಗೆ ಮಾಧ್ಯಮದಲ್ಲಿದ್ದ ಬೆಂಬಲ ವೇನೂ ಕಡಿಮೆಯಾಗಿರಲಿಲ್ಲ. ನೆಹರೂ ಅವರನ್ನು ಟೀಕಿಸುವ ತಮ್ಮ ಪದ್ಯವನ್ನು ಅಡಿಗರು ಆ ಕಾಲದಲ್ಲಿ ಯಾವ ಪತ್ರಿಕೆಯಲ್ಲೂ ಪ್ರಕಟಿಸಲಾಗಲಿಲ್ಲ. ಕೊನೆಗೆ ಹೆಚ್ಚೇನೂ ಪ್ರಸಾರವಿಲ್ಲದ 'ವಿಕ್ರಮ' ಪತ್ರಿಕೆಯಲ್ಲಿ ಪ್ರಕಟಿಸಬೇಕಾಯಿತು ಎಂಬುದು ಕನ್ನಡ ಸಾಹಿತ್ಯದ ವಲಯದಲ್ಲಿ ಪ್ರಚಲಿತ ಸಂಗತಿಯಾಗಿದೆ. ಅಂದರೆ, ಮಾಧ್ಯಮದಲ್ಲಿ ಮತ್ತು ಬುದ್ಧಿಜೀವಿ ವಲಯದಲ್ಲಿ ವ್ಯಾಪಕ ಬೆಂಬಲವಿದ್ದ ನೆಹರೂ ಅವರಿಗಾಗಲೀ ಅವರ ಸಮರ್ಥಕರಿಗಾಗಲೀ ಅಲ್ಲಿ ಇಲ್ಲಿ ಏಳುತ್ತಿದ್ದ ಟೀಕೆಗಳ ಬಗ್ಗೆ ಗಮನ ನೀಡಬೇಕಾದ ಅಗತ್ಯವೇ ಇರಲಿಲ್ಲ !

ಇಂಗ್ಲೆಂಡಿನ ಅಂದಿನ ಪರಿಸ್ಥಿತಿ ಬಗ್ಗೆ ಜಾರ್ಜ್ ಆರ್ವೆಲ್ ಹೇಳಿದ ಮಾತುಗಳನ್ನು ನೆನಪಿಸಬಹುದು. ಇಂಗ್ಲೆಂಡಿನಲ್ಲಿ ಸಾಹಿತ್ಯದ ಸೆನ್ಸಾರನ್ನು ಲೇಖಕರೇ ಸ್ವ ಇಚ್ಛೆಯಿಂದ ಒಪ್ಪಿಕೊಂಡ ಬಗ್ಗೆ, ಅಪ್ರಿಯ ವಿಚಾರಗಳನ್ನು ಹತ್ತಿಕ್ಕುವ ಬಗ್ಗೆ, ಅಪ್ರಾಮಾಣಿಕತೆ ಬಗ್ಗೆ ಆರ್ವೆಲ್ ಹೇಳುತ್ತಾನೆ.[16] ಈ ಮಾತುಗಳು ಕನ್ನಡಕ್ಕೂ ಅನ್ವಯಿಸದೆ ಇಲ್ಲ. ಅನಂತಮೂರ್ತಿಯವರೇ ತಾವು ಹಿಂದೊಮ್ಮೆ ಯಾವುದೋ ವಿಚಾರವನ್ನು ಪ್ರಕಟಿಸುವುದಕ್ಕೆ ಸಂಬಂಧಿಸಿದಂತೆ ಪ್ರಜಾವಾಣಿಯ ಮೇಲೆ ಪ್ರಭಾವ ಬೀರಿದ್ದನ್ನು ಹೇಳಿಕೊಂಡಿದ್ದಾರೆ. ಲಂಕೇಶರು ಬೆಂಗಳೂರು ವಿಶ್ವವಿದ್ಯಾಲಯದಲ್ಲಿ ಬೋಧಕರಾಗಿದ್ದಾಗ, ವಿದ್ಯಾರ್ಥಿಗಳನ್ನು ಪ್ರವಾಸಕ್ಕೆ ಕರೆದುಕೊಂಡು ಹೋಗಿ ಬಂದ ಬಳಿಕ ಸರಿಯಾದ ಲೆಕ್ಕ ಕೊಡದೇ ಇದ್ದ ಬಗ್ಗೆ ಪ್ರಜಾವಾಣಿ ಪತ್ರಿಕೆಯಲ್ಲಿ ಕೆಲವರು ಟೀಕಾ ಪ್ರಹಾರ ಮಾಡುತ್ತಿದ್ದರಂತೆ. ಇದನ್ನು ನಿಲ್ಲಿಸಲು ಲಂಕೇಶರು ಅನಂತಮೂರ್ತಿಯವರ ಸಹಾಯ ಯಾಚಿಸಿದರಂತೆ. ಈ ಕೆಲಸಕ್ಕಾಗಿಯೇ ಅವಸರದಲ್ಲಿ ಮೈಸೂರಿನಿಂದ ಬೆಂಗಳೂರಿಗೆ ಓಡಿ ಬಂದಿದ್ದ ಅನಂತಮೂರ್ತಿಯವರಿಗೆ ಲಂಕೇಶರು ಹೀಗೆ ಹೇಳಿದರಂತೆ– "ನೋಡಿ, ನಾಳೆ ಮತ್ತೆ ಯಾವುದೋ ಪತ್ರ ಪ್ರಕಟ ಆಗುತ್ತದೆಯಂತೆ. ದಯವಿಟ್ಟು ಹಾಗಾಗದ ಹಾಗೆ ನೋಡಿಕೊಳ್ಳಿ. ರಾಮಚಂದ್ರರಾಯರ ಹತ್ತಿರ ಮಾತಾಡಿ"...."ಬೇಕಾದರೆ ಒಂದು ಬಾಟಲ್ ವಿಸ್ಕಿ ತಗೊಂಡು ಹೋಗಿ ಎಡಿಟರ್‌ಗೆ ಕೊಡಿ". ಒಂದು ಬಾಟಲ್ ವಿಸ್ಕಿಗೆ ಅಷ್ಟು ಶಕ್ತಿ ಇತ್ತೇ ಇಲ್ಲವೇ ಎಂಬುದು ಬೇರೆ ಮಾತು. ಲಂಕೇಶರು ಸಂಪಾದಕರ ಬಗ್ಗೆ ಹಾಗೂ ಅನಂತಮೂರ್ತಿಯವರು ಹೊಂದಿದ್ದ ಪ್ರಭಾವದ ಬಗ್ಗೆ ಏನು ಯೋಚಿಸಿದ್ದರು ಎಂಬುದು ಮುಖ್ಯ. ಮುಂದೆ ಈ ಟೀಕಾ ಪ್ರಹಾರವನ್ನು ಮುಕ್ತಾಯಗೊಳಿಸಲು ಅನಂತಮೂರ್ತಿಯವರು "ಇದೊಂದು ವೈಯಕ್ತಿಕ ನೆಲೆಯಲ್ಲಿ ಬಗೆಹರಿಯಬಹುದಾದ ವಿಚಾರ. ಹೀಗೆ ಸಾರ್ವಜನಿಕವಾಗಿ ಚರ್ಚೆಯಾಗಬೇಕಾಗಿಲ್ಲ. ಇದರ ಬಗ್ಗೆ ಲಂಕೇಶರಿಗೂ ಬೇಸರವಿದೆ" ಎಂದು ರಾಮಚಂದ್ರರಾಯರಿಗೆ ಬರೆದುಕೊಟ್ಟರಂತೆ.[17] ಎಷ್ಟೇ ಸಣ್ಣ ಮೊತ್ತವಾಗಿರಲಿ, ಸಾರ್ವಜನಿಕ ಹಣದ ವಿಚಾರವು ವೈಯಕ್ತಿಕ ಹೇಗಾಗುತ್ತದೆ? ಅದೇನಿದ್ದರೂ ಒಟ್ಟಿನಲ್ಲಿ ಅನಂತಮೂರ್ತಿಯವರಿಗೆ ಅಂದು ಪತ್ರಿಕಾ ಮಾಧ್ಯಮದ ಮೇಲೆ ಪ್ರಭಾವ ಬೀರಲು ಇದ್ದ ಸಾಮರ್ಥ್ಯ ಇಂದಿಲ್ಲದೇ ಹೋದುದೇ ಅವರ ಆತಂಕಕ್ಕೆ ಕಾರಣ ಎಂದೆನ್ನಿಸದೇ ಇರುವುದಿಲ್ಲ.

ಇಲ್ಲಿಯೇ ಅಭಿವ್ಯಕ್ತಿ ಅಥವಾ ಮಾತಿಗೆ ಸಂಬಂಧಿಸಿದಂತೆ ಅನಂತಮೂರ್ತಿಯವರು ಹೇಳುವುದನ್ನು ಸಾಂದರ್ಭಿಕವಾಗಿ ನೆನಪು ಮಾಡಿಕೊಳ್ಳಬಹುದು. "ನಾನು ಲೆಕ್ಕಾಚಾರ ಹಾಕಿ ಮಾತನಾಡುವ ಮನುಷ್ಯ ಅಲ್ಲ. ಆ ಕ್ಷಣ ಏನು ಅನ್ನಿಸುತ್ತೋ ಅದನ್ನು ಹೇಳಿ ಬಿಡುತ್ತೇನೆ. ಆಗ ಏನು ಹೇಳಿದೆ ಅನ್ನೋದೂ ನೆನಪಿಲ್ಲ." ಅನಂತಮೂರ್ತಿಯವರು ಮೋದಿಯನ್ನು ವಿರೋಧಿಸಿ ಹೇಳಿದ ಮಾತುಗಳ ಧ್ವನಿಯನ್ನು ಗ್ರಹಿಸದೆ, ಅಕ್ಷರಶಃ ಪರಿಗಣಿಸಿ, ಅವರು ದೇಶ

ಬಿಟ್ಟು ಹೋಗಲಿ ಎಂದೆಲ್ಲ ಕಠೋರವಾಗಿ ಜನರು ಪ್ರತಿಕ್ರಿಯಿಸಿದ ದಿನಗಳಲ್ಲಿ ಸಂದರ್ಶನ ವೊಂದರಲ್ಲಿ ಹೇಳಿದ ಮಾತು ಮೇಲಿನದು.[18] ಅನಂತಮೂರ್ತಿಯವರ ಮಾತಿನ ಧ್ವನಿಯನ್ನು ಗ್ರಹಿಸಬೇಕಿತ್ತೆಂದು ಅವರು ಹೇಳುವುದು ಸರಿ. ಆದರೆ, ಮೋದಿಯ ಮಾತನ್ನು ಅನಂತಮೂರ್ತಿ ಯವರು ಹೇಗೆ ಅರ್ಥೈಸಿದರು ಎಂಬುದೂ ಇಲ್ಲಿ ಮುಖ್ಯವಾಗುತ್ತದೆ. 2002ರ ಗುಜರಾತ್ ಹಿಂಸೆಯ ಬಗ್ಗೆ ಸಂದರ್ಶನವೊಂದರಲ್ಲಿ, ಯಾವುದೇ ಹಿಂಸೆ, ಸಾವು, ನೋವುಗಳಾದಾಗ ಅದಕ್ಕೆ ತಾನು ಕಾರಣನಾಗಿಲ್ಲದಿದ್ದರೂ ನೋವಾಗುತ್ತದೆ ಎಂಬರ್ಥದಲ್ಲಿ ಮೋದಿ ಹೇಳಿದ್ದು ಹೀಗೆ– "ಒಂದು ನಾಯಿ ಮರಿ ಕಾರಿನ ಚಕ್ರಕ್ಕೆ ಸಿಕ್ಕಿದಾಗ ನಾನು ಕಾರು ಚಲಾಯಿಸುತ್ತಿರಬಹುದು, ಬೇರೊಬ್ಬ ಚಲಾಯಿಸುತ್ತಿರಬಹುದು, ನೋವಾಗುತ್ತದೆ"[(19)] ಗಲಭೆಗೆ ಮೋದಿ ಜವಾಬ್ದಾರರೋ ಅಲ್ಲವೋ ಎಂಬುದು ಬೇರೆಯೇ ಚರ್ಚೆಯ ವಿಷಯ. ಆದರೆ, ಇದನ್ನು ಅನಂತಮೂರ್ತಿ ಯವರು ತಿರುಚಿ ಹೇಳುವುದು ಹೇಗೆಂದು ನೋಡಬೇಕು–"ಅಷ್ಟು ಜನ ಕೋಮುಗಲಭೆಯಲ್ಲಿ ಸತ್ತರಲ್ಲ. ಅವರು ಓಡ್ತಾ ಇರೋ ಕಾರಿನ ಚಕ್ರಕ್ಕೆ ಕುನ್ನಿಗಳು ಸಿಕ್ಕಂಗೆ ಅಂತಂದನಲ್ಲ. ನಾನು ಆತನನ್ನು ಯಾವತ್ತೂ ಕ್ಷಮಿಸಲ್ಲ." ಬೇರೆ ಬೇರೆ ಪತ್ರಿಕೆಗಳಿಗೆ ನೀಡಿದ ಎರಡೆರಡು ಸಂದರ್ಶನ ಗಳಲ್ಲೂ ಇದನ್ನೇ ಹೇಳಿದರು.[(20)] ಅಂತರ್ಜಾಲದಲ್ಲಿ ಅನಂತಮೂರ್ತಿಯವರ ವಿರುದ್ಧ ಕಿರುಚಾಡಿದ ಒರಟರಿಗೆ ಮೋದಿ ಪ್ರಧಾನಿಯಾದ ದೇಶದಲ್ಲಿ ಇರಲು ಇಷ್ಟವಿಲ್ಲವೆಂಬ ದೊಡ್ಡ ಸಾಹಿತಿ ಯೊಬ್ಬರ ಮಾತಿನ ರೂಪಕಾತ್ಮಕತೆ ಅರ್ಥವಾಗದಿದ್ದರೆ ಅಚ್ಚರಿಯಿಲ್ಲ. ಆದರೆ, ಅನಂತಮೂರ್ತಿ ಯವರಂಥ ಸೂಕ್ಷ್ಮಜ್ಞ ಸಾಹಿತಿ– ವಿಮರ್ಶಕರಿಗೆ ಮೋದಿಯಂಥ ಒರಟ–ಉದ್ಧಟರ ಮಾತಿನಲ್ಲಿರುವ ಸರಳ ರೂಪಕಾತ್ಮಕತೆ ಅರ್ಥವಾಗದಿದ್ದರೆ ಅದು ಅಚ್ಚರಿಯ ಸಂಗತಿ.

**ತಿರುವು ಮುರುವಾದ ಸೆಕ್ಯುಲರಿಸಂ**

"ಪ್ರಜೆಗಳನ್ನು ಮತಧರ್ಮಗಳ ಆಧಾರದಲ್ಲಿ ವಿಭಜಿಸದೆ, ದೇಶದ ಎಲ್ಲಾ ಪ್ರಜೆಗಳಿಗೂ ಸಮಾನವಾದ ಹಕ್ಕು, ಅವಕಾಶ, ಹೊಣೆಗಾರಿಕೆ, ಸ್ವಾತಂತ್ರ್ಯ ಇರುವ ಸ್ಥಿತಿಯೇ ಸೆಕ್ಯುಲರಿಸಂ" ಎಂಬಂಥ ಒಂದು ಸರಳ ವ್ಯಾಖ್ಯೆಯನ್ನಷ್ಟೇ ಹೊಂದಿರಬೇಕಾಗಿದ್ದ ಈ ಸೆಕ್ಯುಲರಿಸಂ ಪರಿಕಲ್ಪನೆ ಯನ್ನು ನಮ್ಮಲ್ಲಿ ಅನವಶ್ಯಕವಾಗಿ ಗೋಜಲುಗೊಳಿಸಲಾಗಿದೆ. ಅಂದರೆ, ಸೆಕ್ಯುಲರಿಸಂ ಆಗಲೀ ಕೋಮುವಾದವಾಗಲೀ ವ್ಯಾಖ್ಯಾನಕ್ಕೊಳಗಾಗುವುದು ಮತಧರ್ಮಗಳನ್ನು ಆಧರಿಸಿಯೇ. ಜನರನ್ನು ಹಿಂದೂ–ಮುಸ್ಲಿಂ, ಬಹುಸಂಖ್ಯಾತ – ಅಲ್ಪಸಂಖ್ಯಾತ ಎಂದು ಮುಂತಾಗಿ ವಿಭಜಿಸುವ ಮೂಲಕವೇ. ಹಿಂದುತ್ವವೆಂಬ ಗುಮ್ಮನ ಹೆದರಿಕೆಯಲ್ಲಿಯೇ ಸದಾ ಮುಸ್ಲಿಮರು ಇರುವಂತೆ ಮಾಡುವುದು, ಅವರನ್ನು ರಕ್ಷಿಸುವ ಹೊಣೆ ಹೊರುತ್ತೇವೆಂದು ಹೇಳಿಕೊಳ್ಳುವುದು ಪ್ರಭುತ್ವಕ್ಕೆ ಅನಿವಾರ್ಯವಾದುದು. ಆದರೆ, ಪ್ರಗತಿಪರರು, ಚಿಂತಕರು ಎನಿಸಿಕೊಂಡ ಬರಹಗಾರರಾದರೂ ಸರಿಯಾದುದನ್ನು ಗುರುತಿಸಿ ಹೇಳುವ ಪ್ರಾಮಾಣಿಕತೆ, ಧೈರ್ಯ ಮತ್ತು ಬುದ್ಧಿವಂತಿಕೆಯನ್ನು ತೋರಿಸುವುದು ಬೇಡವೇ?

ಯಾರಾದರೂ ಅಷ್ಟೆ; ಇತಿಹಾಸವನ್ನು ಉದ್ದೇಶಪೂರ್ವಕವಾಗಿ ತಪ್ಪಾಗಿ ಅಥವಾ ತಿರುಚಿ ಬರೆಯುತ್ತಾರೆ ಎಂದಾದರೆ ಅದಕ್ಕೆ ವರ್ತಮಾನದ ಉದ್ದೇಶಗಳು ಇರುತ್ತವೆ. ಆದರೆ, ಜನಸಮುದಾಯಗಳಿಗೆ ಇತಿಹಾಸದಲ್ಲಿ ಆಗಿ ಹೋದ ಘಟನೆಗಳಿಗಿಂತ ವರ್ತಮಾನದ, ತಮ್ಮ ಸಮಕಾಲೀನ ಜಗತ್ತಿನ ಆಗುಹೋಗುಗಳೇ ಹೆಚ್ಚು ಮುಖ್ಯವಾಗುತ್ತವೆ. ಇದನ್ನು ಸರಳಗೊಳಿಸಿ ಹೇಳುವುದಾದರೆ, ಬಾಬರಿ ಮಸೀದಿ ಧ್ವಂಸಕ್ಕೆ ಅದು ರಾಮ ಮಂದಿರವನ್ನು ಕೆಡಹಿ ಬಾಬರ್ ಕಟ್ಟಿದ ಮಸೀದಿ ಎಂಬುದಕ್ಕಿಂತಲೂ ಸ್ವಾತಂತ್ರ್ಯಾ ನಂತರದ ಕಾಲಘಟ್ಟದಲ್ಲಿ ಅಲ್ಪಸಂಖ್ಯೆ–

ಬಹುಸಂಖ್ಯೆಯ ಹೆಸರಿನಲ್ಲಿ ನಡೆಸುತ್ತ ಬಂದ ವಿಭಜನವಾದಿ ರಾಜಕೀಯ ಸಂಕಥನವೇ ಹೆಚ್ಚು ಮುಖ್ಯವಾದ ಕಾರಣ ಎಂಬುದನ್ನು ನಮ್ಮ ಇತಿಹಾಸಕಾರರು ಮನಗಾಣಬೇಕು. ಇದರರ್ಥವೇನೆಂದರೆ, ಇತಿಹಾಸವನ್ನು ನಾವು ಸರಿಯಾಗಿ, ತಿರುಚದೆ ನೋಡಬೇಕೆಂದರೆ, ಅದಕ್ಕೆ ಮೊದಲು ವರ್ತಮಾನವನ್ನು ಸರಿಯಾಗಿ ನೋಡಲು ಮತ್ತು ಅರ್ಥ ಮಾಡಿಕೊಳ್ಳಲು ಸಿದ್ಧರಿರಬೇಕು. ಇನ್ನಷ್ಟು ಸರಳವಾಗಿ ಹೇಳುವುದಾದರೆ, ಟಿಪ್ಪೂ ಹೆಸರಲ್ಲಿ ಮುಸ್ಲಿಮರಿಗೆ ಪ್ರತ್ಯೇಕ ವಿಶ್ವವಿದ್ಯಾಲಯ ಸ್ಥಾಪಿಸಲು ಹೊರಟಾಗ ಟಿಪ್ಪು ಒಬ್ಬ ಪರಮತ ದ್ವೇಷಿ ಮುಂತಾದ ವಾದಗಳು ಹೆಚ್ಚು ಹೆಚ್ಚು ಜನರನ್ನು ಆಕರ್ಷಿಸುತ್ತವೆ. ಮುಸ್ಲಿಂ ಯುವಕರನ್ನು ಬಂಧಿಸುವಾಗ ಎಚ್ಚರಿಕೆ ವಹಿಸಬೇಕು; ಮುಸ್ಲಿಂ ಯುವಕರ ವಿಚಾರಣೆಗಳಿಗಾಗಿ ತ್ವರಿತ ನ್ಯಾಯಾಲಯ ಸ್ಥಾಪಿಸಬೇಕು ಎಂದು ಮುಂತಾಗಿ ಸರಕಾರ ಆಗಾಗ ಪ್ರಕಟಿಸುವ ನೀತಿಗಳು ಕೂಡಾ ಇದೇ ಪರಿಣಾಮ ವನ್ನುಂಟುಮಾಡುತ್ತವೆ.[21] ಇಂಥ ಯಾವುದೇ ವಿಭಜನವಾದಿ ಕ್ರಿಯೆಗೂ ಪ್ರತಿಕ್ರಿಯೆ ನೀಡದ ಸಾಕ್ಷಿಪ್ರಜ್ಞೆಯಾಗಿರುವವರು ಸಮುದಾಯದೊಳಗಿಂದ ಅದಕ್ಕೆ ಉಗ್ರ ಪ್ರತಿಕ್ರಿಯೆ ಬದಲು ಪರೋಕ್ಷವಾಗಿ ಕಾರಣವೇ ಆಗುತ್ತಾರೆ.

ಇತಿಹಾಸವನ್ನು ಪ್ರಗತಿಪರರಿಗೆ ಇಷ್ಟವಾಗುವಂತೆ ನೋಡುವ ರೋಮಿಲಾ ಥಾಪರ್ ಅವರು ವರ್ತಮಾನವನ್ನು ನೋಡುವುದು ಹೀಗೆ– "ಇಂದು ಇಂಡಿಯಾದಲ್ಲಿ ಪ್ರಚಲಿತ ವಾಗಿರುವ ಹತ್ತು ಹಲವು ಮತೀಯವಾದಗಳಲ್ಲಿ ಹಿಂದೂ ಮತೀಯವಾದವೇ ಪ್ರಧಾನವಾದುದು. ಈ ಸಂಗತಿಯು ಸ್ಪಷ್ಟವಾಗಿಯೇ ಇದೆ. ಏಕೆಂದರೆ ಅದರ ಪರಿಧಿಯಲ್ಲಿ ಅತ್ಯಂತ ಅಧಿಕ ಸಂಖ್ಯೆಯ ಜನರು ಇದ್ದಾರೆ."[22] ಇದು ತುಂಬಾ ಮೇಲುಸ್ತರದ ಅಭಿಪ್ರಾಯ. ಯಾಕೆಂದರೆ, ಒಟ್ಟು ಜನಸಂಖ್ಯೆಯ ಪ್ರಮಾಣಕ್ಕೆ ಹೋಲಿಸಿ ಯಾರು ಹೆಚ್ಚು ಮತೀಯವಾದಿಗಳಾಗಿದ್ದಾರೆ ಎಂಬುದನ್ನು ನಿರ್ಣಯಿಸಲು ಅವರು ಹೋಗುವುದಿಲ್ಲ. ಅರ್ಥಾತ್ ವರ್ತಮಾನ ಕಾಲದಲ್ಲಿ ಸಮುದಾಯಗಳು ವರ್ತಿಸುವ ಬಗೆಯನ್ನು ಅರ್ಥಮಾಡಿಕೊಳ್ಳುವಲ್ಲಿಯೇ ದೋಷವಿದೆ. ಉದಾಹರಣೆಗೆ ಅನಂತಮೂರ್ತಿಯವರು ಒಂದು ಸಂದರ್ಶನದಲ್ಲಿ ಹೇಳಿದರು. "ವಾಜಪೇಯಿ ಯವರು ಅಧಿಕಾರದಲ್ಲಿದ್ದಾಗ ಅವರ ಮೂಲಕ ಪ್ರಯೋಗಕ್ಕೆ ಮುಂದಾಗಿ (ಸಂಘ ಪರಿವಾರವು) ನಿರಾಶವಾಯಿತು. ಈಗ 'ಶುದ್ಧ' ಹಿಂದುತ್ವವಾದಿಯಾದ ಬೇರೆಯೇ ರೀತಿಯ ವ್ಯಕ್ತಿಯನ್ನು ಬಯಸುತ್ತಿದೆ. ದುರಂತವೆಂದರೆ, ಭಯಭೀತ ಮುಸ್ಲಿಮರಿಂದ ಸೆಕ್ಯುಲರ್ ಪಕ್ಷಕ್ಕೆ ಲಾಭವಾಗುತ್ತದೆ ಮತ್ತು ಭಯಭೀತ ಹಿಂದೂಗಳಿಂದ ಕಮ್ಯೂನಲ್ ಪಕ್ಷಕ್ಕೆ ಲಾಭವಾಗುತ್ತದೆ"[23] ಭಯಭೀತ ಮುಸ್ಲಿಮರು ಸೆಕ್ಯುಲರ್ ಆಗುತ್ತಾರೆ ಮತ್ತು ಭಯಭೀತ ಹಿಂದೂಗಳು ಕಮ್ಯೂನಲ್ ಆಗುತ್ತಾರೆ ಎಂಬರ್ಥದ ಈ ಮಾತು ಏನನ್ನು ಸೂಚಿಸುತ್ತದೆ? ಅಥವಾ, ದೇಶದಲ್ಲಿ ಅಥವಾ ರಾಜ್ಯದಲ್ಲಿ ಸೆಕ್ಯುಲರ್ ಪಕ್ಷಗಳು ಗೆದ್ದು, ಸೆಕ್ಯುಲರ್ ಆಡಳಿತ ಇರಬೇಕಾದರೆ ಮುಸ್ಲಿಮರು ಯಾವಾಗಲೂ ಭಯಭೀತರಾಗಿ ಮತ್ತು ಹಿಂದೂಗಳು ಭಯವಿಲ್ಲದವರಾಗಿ ಇರಬೇಕೆಂದು ಅನಂತಮೂರ್ತಿ ಯವರು ಹೇಳುತ್ತಿದ್ದಾರೆಯೆ? ಇಂಥ ಸಾಮಾಜಿಕ, ರಾಜಕೀಯ ವಿಶ್ಲೇಷಣೆಗಳು ದೇಶವನ್ನು ಎಲ್ಲಿಗೆ ಕೊಂಡೊಯ್ಯಬಲ್ಲವು?

ಹಿಂದೂಗಳು ಕೋಮುವಾದಿಗಳಾದಾಗ ಅವರನ್ನು ತಿದ್ದಲು, ನಿಯಂತ್ರಿಸಲು ಹಿಂದೂಗಳೇ ಯತ್ನಿಸುತ್ತಾರೆ. ಮತಾಂತರ ವಿರೋಧಿ ಹೇಳಿಕೆಗಳು ಬಂದಾಗ ಮತಾಂತರವನ್ನು ಬೆಂಬಲಿಸಿ ದವರು ಹಿಂದೂಗಳೇ. ಹಿಂದುತ್ವವಾದಿಗಳ ಪ್ರಯೋಗ ಶಾಲೆ ಎಂದು ಪ್ರಗತಿಪರರಿಂದ ಟೀಕೆಗೊಳ ಗಾದ ದಕ್ಷಿಣಕನ್ನಡ ಉಡುಪಿ ಜಿಲ್ಲೆಗಳಲ್ಲಿ ಬಿ.ಜೆ.ಪಿ. 2013ರ ವಿಧಾನಸಭಾ ಚುನಾವಣೆಯಲ್ಲಿ ಸೋಲಬೇಕಾಯಿತು. ಹಿಂದೂಗಳ ಮತದಾನದ ವಿನ್ಯಾಸವು ಕೋಮು ದೃಷ್ಟಿಯನ್ನೇ

ಅವಲಂಬಿಸಿರುತ್ತಿದ್ದರೆ, ಮತ-ಧರ್ಮವನ್ನು ಆಧರಿಸುತ್ತಿದ್ದರೆ ಹೀಗಾಗುತ್ತಿರಲಿಲ್ಲ. ಅಂದರೆ, ಹಿಂದೂ ಕೋಮುವಾದವಿದ್ದರೆ, ಮೂಲಭೂತವಾದವಿದ್ದರೆ, ಅದನ್ನು ವಿಮರ್ಶಿಸಲು ಹಿಂದೂ ಬುದ್ಧಿಜೀವಿಗಳೂ ಇದ್ದಾರೆ. ಮುಸ್ಲಿಂ ಚಿಂತಕರೂ ಇದ್ದಾರೆ. ಜನಸಾಮಾನ್ಯ ಹಿಂದೂಗಳೂ ಇದ್ದಾರೆ. ಆದರೆ, ಮುಸ್ಲಿಂ ಕೋಮುವಾದ- ಮೂಲಭೂತವಾದಗಳನ್ನು ವಿಮರ್ಶಿಸಲು ಮುಸ್ಲಿಂ ಬುದ್ಧಿಜೀವಿಗಳಾಗಲೀ ಹಿಂದೂ ಬುದ್ಧಿಜೀವಿಗಳಾಗಲೀ ಮುಸ್ಲಿಂ ಜನಸಾಮಾನ್ಯರಾಗಲೀ (ಚುನಾವಣೆ ಮೂಲಕ) ಮುಂದೆ ಬರುವುದಿಲ್ಲ. ಮುಸ್ಲಿಂ ಬುದ್ಧಿಜೀವಿಗಳ ಬಗ್ಗೆ ಈ ಮುಂದಿನ ಮಾತುಗಳನ್ನು ಗಮನಿಸಿ- "ಇವರ ಭಾರತೀಯ ಸಮಾಜದ ವಿಮರ್ಶೆಯ ಭಾಗವಾಗಿ ಮುಸ್ಲಿಂ ಸಮಾಜದ ವಿಮರ್ಶೆಯೂ ಸೇರಿಕೊಂಡಿದ್ದರೆ; ಹಿಂದೂ ಜಾತಿ ಪದ್ಧತಿ, ಅಸ್ಪೃಶ್ಯತೆ, ಮತ ವ್ಯವಸ್ಥೆ, ಮೌಢ್ಯಾಚಾರಗಳನ್ನು ಟೀಕಿಸುವಂತೆಯೇ ಮುಸ್ಲಿಂ ಧರ್ಮದ ಸದ್ಯದ ಜಡತೆ, ಕಂದಾಚಾರ, ಪ್ರತಿಗಾಮಿತನಗಳನ್ನೂ ಟೀಕಿಸತೊಡಗಿದ್ದರೆ, ಮುಸ್ಲಿಂ ಮುಲ್ಲಾ ಶಾಹಿ ಇಷ್ಟೊಂದು ಬೆಳೆಯುತ್ತಿರಲಿಲ್ಲವೇನೋ. ಹಾಗೇ, ನಮ್ಮ ಕೋಮು ಪರಿಸ್ಥಿತಿ ಕೂಡಾ ಇಷ್ಟೊಂದು ಬಿಗಡಾಯಿಸುತ್ತಿರಲಿಲ್ಲವೇನೋ !"[24]

ಕುತೂಹಲಕ್ಕಾಗಿ ಒಂದು ಉದಾಹರಣೆ ಗಮನಿಸಿ. 'ವಿಚಾರ ಸಾಹಿತ್ಯ – 2006' ಸಂಕಲನದಲ್ಲಿ ಹಿಂದೂಗಳ ವರ್ತನೆ, ಆಚರಣೆ ಇತ್ಯಾದಿ ಬಗ್ಗೆ ವಿಮರ್ಶೆ ಇರುವ ಲೇಖನಗಳಿವೆ. ಕೆ. ಷರೀಪಾ ಅವರು ಬರೆದ "ಮಹಿಳೆ ಮತ್ತು ಜಾಗತೀಕರಣ" ಎಂಬ ಲೇಖನವಿದೆ. ಇದರಲ್ಲಿ, ಜಾಗತೀಕರಣದಿಂದಾಗಿ ಮಹಿಳೆ ಉದ್ಯೋಗ ಕ್ಷೇತ್ರದಲ್ಲಿ ದುರ್ಬಲವಾದ ಬಗ್ಗೆಯೆಲ್ಲ ಉತ್ತಮ ಚರ್ಚೆಯಿದೆ. ಆದರೆ, ಧಾರ್ಮಿಕ ಕಾರಣಕ್ಕಾಗಿ, ಮಹಿಳೆ ಉದ್ಯೋಗಕ್ಕೇ ಹೋಗಲಾರದ ಸ್ಥಿತಿ ಬಹಳಷ್ಟು ಮುಸ್ಲಿಂ ಕುಟುಂಬಗಳನ್ನು ಬಡತನದಲ್ಲೇ ಇಟ್ಟಿದೆ ಎಂಬುದಾಗಲೀ, ವೇಷಭೂಷಣ ಗಳಲ್ಲಿ ಮಹಿಳೆಗೆ ಸ್ವಾತಂತ್ರ್ಯವಿಲ್ಲದಿರುವುದಾಗಲೀ ಅವರಿಗೆ ಮುಖ್ಯವಾಗುವುದೇ ಇಲ್ಲ.[25] ರಹಮತ್ ತರೀಕೆರೆಯವರು ತಮ್ಮ "ಧರ್ಮ ಪರೀಕ್ಷೆ" ಕೃತಿಯಲ್ಲಿ ಇರಾಕಿನ ಸದ್ದಾಂ ಪರವಾಗಿ ಪ್ರತಿಭಟನೆ ಭಾರತದಲ್ಲಿ ಮಾಡಿದ ಬಗ್ಗೆ ಟೀಕಿಸುವ ಲೇಖನವೊಂದನ್ನು ಬರೆದಿದ್ದು ಆ ಲೇಖನದ ಮುಕ್ಕಾಲು ಭಾಗ ಹಿಂದುತ್ವವಾದ ಹಾಗೂ ಗುಜರಾತಿನ ಗೋಧ್ರೋತ್ತರ ಗಲಭೆಯನ್ನು ಕುರಿತಾಗಿಯೇ ಇದೆ. ಸ್ವಾತಂತ್ರ್ಯಪೂರ್ವದ ಖಿಲಾಫತ್ ಚಳುವಳಿಯ ಬಗ್ಗೆ ಬರೆಯುವುದಾದರೂ ಆರ್.ಎಸ್.ಎಸ್., ಬಾಬರಿ ಮಸೀದಿ ಧ್ವಂಸ ಮತ್ತು ಗೋಧ್ರಾ ಗುಜರಾತ್ ಬಗ್ಗೆ ಬರೆಯದೆ ವಿಶ್ಲೇಷಿಸಲು ಸಾಧ್ಯವಿಲ್ಲ!

ಇನ್ನು ಹಿಂದೂ ಬುದ್ಧಿಜೀವಿಗಳಿಂದ ಇಸ್ಲಾಂ ವಿಮರ್ಶೆಯನ್ನು ನಿರೀಕ್ಷಿಸಲೂ ಸಾಧ್ಯವಿಲ್ಲ. ಅನಂತಮೂರ್ತಿಯವರಿಗೆ ಸಂದರ್ಶನವೊಂದರಲ್ಲಿ ಹೀಗೆ ಕೇಳಲಾಯಿತು. "ಹಿಂದೂಗಳ ವಿಚಾರಕ್ಕೆ ಬಂದಾಗ ಇಷ್ಟು ಕಟ್ಟುನಿಟ್ಟಾಗಿ ಮಾತಾಡುವ ನಿಮ್ಮಂಥ ಬುದ್ಧಿಜೀವಿಗಳು ಇನ್ನೊಂದು ಕೋಮಿನ ವಿಚಾರ ಬಂದಾಗ ಯಾಕೆ ಸುಮ್ಮನಾಗುತ್ತೀರಿ ?" ಅದಕ್ಕೆ ಅನಂತಮೂರ್ತಿಯವರು ನೀಡಿದ ಉತ್ತರ ಅವರೆಲ್ಲ ಜಾಣ್ಮೆಯನ್ನೂ ಜಾಹೀರು ಮಾಡುತ್ತದೆ. ಅವರೆಂದರು-"ಇರಾನ್‌ನಲ್ಲಿ ಏನೋ ಆಯ್ತು ಅಂತ ಇಲ್ಲಿ ಮುಸಲ್ಮಾನರು ದಂಗೆ ಎದ್ದರು. ಆಗ ಕೃಪಲಾನಿ ಅವರು ಆರೋಗ್ಯ ಹದಗೆಟ್ಟು ಆಸ್ಪತ್ರೆಯಲ್ಲಿ ಇದ್ದರು. ತಮ್ಮ ಆರೋಗ್ಯ ಹದಗೆಟ್ಟಾಗಲೂ ಪತ್ರಿಕೆಯೊಂದಕ್ಕೆ ಪತ್ರ ಬರೆದರು. ಹೀಗೆ ಮಾಡ್ತಾ ಹೋದರೆ ಸೈದ್ಧಾಂತಿಕವಾಗಿ ದೇಶವನ್ನು ಜಾತ್ಯತೀತವಾಗಿ ಉಳಿಸಿಕೊಳ್ಳಲು ಸಾಧ್ಯವೇ ಅಂತ ಖಾರವಾಗಿ ಪ್ರತಿಕ್ರಿಯಿಸಿದ್ದರು. ಗಾಂಧಿ ಕೂಡ ಹಾಗೇ ಮಾಡಿದರು. ಆದರೆ ಇವತ್ತು ವೋಟಿಗೋಸ್ಕರ ಮುಸ್ಲಿಮರನ್ನೂ ಹಿಂದೂಗಳನ್ನೂ ಒಡೆದಿದ್ದಾರೆ. ಆದರೂ ಭಾರತದ ಭವಿಷ್ಯದ ಬಗ್ಗೆ ಕನಸನ್ನಿಟ್ಟುಕೊಳ್ಳಬೇಕು. ಬೆಂಗಳೂರಲ್ಲಿ ಒಂದಷ್ಟು ದಿನ

ತಮಿಳು ಮಾತಾಡೋ ಜನ ಇಲ್ಲದೇ ಇದ್ದಾಗ ಮನೆ ನಿರ್ಮಾಣಕ್ಕೆ ಜನರೇ ಇಲ್ಲದ ಹಾಗಾಗಿತ್ತು. ಕಟ್ಟಡ ನಿರ್ಮಾಣವೇ ನಿಂತು ಹೋಗಿತ್ತು. ಹಾಗೇ ಮುಸ್ಲಿಂ ಇಲ್ಲದೆ ಹೋದರೂ ಇರಲಿಕ್ಕಾಗಲ್ಲ ಅಂತ ನಮಗೆ ಗೊತ್ತಿರತ್ತೆ. ನಮ್ಮ ನಾಯಕರ ಅತ್ಯಂತ ದೊಡ್ಡ ಸಾಧನೆ ಅಂದರೆ ಭಾರತ-ಪಾಕ್ ವಿಭಜನೆ ಮಾಡಬೇಕು ಅಂತ ಬಂದಾಗ ಜಾತಿಮತದ ಆಧಾರದಲ್ಲಿ ಡಿವೈಡ್ ಮಾಡುವುದನ್ನು ಒಪ್ಪಲಿಲ್ಲ. ಯಾರ್‍ಯಾರಿಗೆ ಎಲ್ಲಿ ಇರುವುದಕ್ಕೆ ಇಷ್ಟವೋ ಅಲ್ಲಲ್ಲಿ ಇರಲಿ ಅಂದರು. ಮುಸ್ಲಿಮರೆಲ್ಲ ಅಲ್ಲಿಗೆ, ಹಿಂದೂಗಳು ಇಲ್ಲಿ ಅನ್ನುವ ನಿರ್ಧಾರಕ್ಕೆ ನಾಯಕರು ಒಪ್ಪಲಿಲ್ಲ. ನೈತಿಕವಾಗಿ ಅದೊಂದು ಬಹಳ ದೊಡ್ಡ ನಿರ್ಧಾರ".[26] ಇಲ್ಲಿ ಹೇಳಿದ್ದೆಲ್ಲಾ ಸರಿಯೇ. ಆದರೆ ಇಲ್ಲಿ ಎಲ್ಲಾದರೂ ಅವರಿಗೆ ಕೇಳಲಾದ ಪ್ರಶ್ನೆಗೆ ಉತ್ತರವಿದೆಯೆ? ಕೃಪಲಾನಿ ಮಾಡಿದ್ದನ್ನು ಅನಂತಮೂರ್ತಿ ಕನಿಷ್ಠ ಈ ಪ್ರಶ್ನೆಗೆ ಉತ್ತರ ನೀಡುವಾಗಲಾದರೂ ಮಾಡಬಹುದಿತ್ತು. ಮಾಡಲಿಲ್ಲ!

ಜಾತ್ಯತೀತರು ಲೇಖಕಿ ಬಾನುಮುಷ್ತಾಕ್ ಅವರಿಗೆ ಹಾಕಿರುವ ಬಹಿಷ್ಕಾರ ಹೇಗಿದೆ ಗಮನಿಸಿ. ತಮ್ಮೊಂದಿಗೆ ಪ್ರಗತಿಪರರು ನಡೆದುಕೊಳ್ಳುವ ರೀತಿಯ ಬಗ್ಗೆ ಅವರು ವ್ಯಕ್ತಪಡಿಸಿದ ಅಭಿಪ್ರಾಯ ಹೀಗಿದೆ- "ಗೋ ಹತ್ಯೆ ನಿಷೇಧ ಕಾಯ್ದೆ ವಿರೋಧಿಸಿ ಕೋಮು ಸೌಹಾರ್ದ ವೇದಿಕೆಯಿಂದ ಏರ್ಪಡಿಸಿದ್ದ ಸಭೆಗೆ ಆಹ್ವಾನ ನೀಡಲಾಗಿತ್ತು. ಕೆಲಸದ ಒತ್ತಡದ ನಡುವೆಯೂ ಕಾರ್ಯಕ್ರಮಕ್ಕೆ ಹೋಗಲು ಸಮ್ಮತಿಸಿದ್ದೆ. ಆದರೆ ಮರುದಿನ ಕರೆ ಮಾಡಿದ ಎ.ಕೆ. ಸುಬ್ಬಯ್ಯ ಅವರು ಮುಸ್ಲಿಂ ಸಂಘಟನೆಯೊಂದು ನಾನು ವೇದಿಕೆಗೆ ಬಂದರೆ ಹೋರಾಟಕ್ಕೆ ಬೆಂಬಲ ನೀಡುವುದಿಲ್ಲ ಎಂದು ಹೇಳಿದೆ. ಹೀಗಾಗಿ ನೀವು ಬರದಿದ್ದರೆ ಒಳ್ಳೆಯದು ಎಂದು ಹೇಳಿದರು. ಮುಸ್ಲಿಂ ಸಂಘಟನೆಯೊಂದು ನನ್ನನ್ನು ಇಷ್ಟಪಡುವುದಿಲ್ಲ ಎನ್ನುವ ಕಾರಣಕ್ಕಾಗಿ ವೈಚಾರಿಕ ನಿಲುವು ವ್ಯಕ್ತಪಡಿಸಲು ನನಗೆ ಅವಕಾಶ ನಿರಾಕರಿಸುವ ನಿರ್ಧಾರಕ್ಕೆ ಬಂದಿದ್ದರು. ಮುಸ್ಲಿಂ ಧರ್ಮದಿಂದ ಹಾಕಿರುವ ಬಹಿಷ್ಕಾರ ಹಿಂಪಡೆಯಲಾಗಿದ್ದರೂ ಜಾತ್ಯತೀತರು ನನಗೆ ಹಾಕಿರುವ ಬಹಿಷ್ಕಾರ ಮಾತ್ರ ಇನ್ನೂ ಮುಂದುವರಿದಿದೆ"[27] ನಮ್ಮ ದೇಶದಲ್ಲಿ ಯಾರು ಹೆಚ್ಚು ದೊಡ್ಡ ಮೂಲಭೂತವಾದಿಗಳು ಎಂಬುದು ಈ ಪ್ರಸಂಗದಿಂದ ಸ್ಪಷ್ಟವಾಗುತ್ತದೆ.

### ಮೌಢ್ಯವಿರೋಧಿ ಕರಡು ಮಸೂದೆ ಮತ್ತು ಪ್ರಗತಿಪರತೆ

ಇತ್ತೀಚೆಗೆ ಮೌಢ್ಯ ವಿರೋಧಿ ಕರಡು ಮಸೂದೆಯನ್ನು ವಿರೋಧಿಸುವ ಮಾತುಗಳು ಬಂದಾಗ, ಅದನ್ನು ಸಿದ್ಧಪಡಿಸಿದವರು ಮತ್ತು ಬೆಂಬಲಿಸಿದವರು ಹೇಳಿದ್ದೇನೆಂದರೆ, ಇದಿನ್ನೂ ಮಸೂದೆಯಾಗಿ ಜಾರಿಯಾಗಿಲ್ಲ. ಕೇವಲ ಚರ್ಚೆಗಾಗಿ ತಯಾರಿಸಿದ ಕರಡು ಅಷ್ಟೇ ಎಂದು. ಅಂದರೆ ಚರ್ಚೆ ಎಂದರೆ ಟೀಕಿಸುವುದಲ್ಲ; ಕೇವಲ ಬೆಂಬಲಿಸುವುದು ಮಾತ್ರ ಎಂದು ಅವರ ಅರ್ಥ. ಕರಡು ಮಸೂದೆ ಜೊತೆಗಿನ ಟಿಪ್ಪಣಿಯನ್ನು ಕಂಪ್ಯೂಟರಿನ ಜಾಲತಾಣದಿಂದ ಬಹಳ ಬೇಗನೇ ಹಿಂಪಡೆಯಲಾಯಿತು. ಸಾರ್ವಜನಿಕ ಚರ್ಚೆಗೆ ತಮ್ಮ ಟಿಪ್ಪಣಿಗಳನ್ನು ಒಡ್ಡಿಕೊಳ್ಳಲು ತಯಾರಿಲ್ಲದವರು ಸಿದ್ಧಪಡಿಸಿದ ಟಿಪ್ಪಣಿಗಳಾಗಿದ್ದವು ಅವು ಎಂಬುದು ಖೇದಕರ ಸಂಗತಿ. ಈ ಕರಡು ಮಸೂದೆ ಹಿಂದೂಗಳ ನಂಬಿಕೆ. ಆಚರಣೆಗಳನ್ನೇ ಗುರಿಯಾಗಿ ಇಟ್ಟುಕೊಂಡಿದೆ ಎಂಬ ಟೀಕೆಗೆ ಪ್ರತಿಕ್ರಿಯೆಯಾಗಿ ಜಿ. ರಾಜಶೇಖರ್ ಅವರು ಹೇಳಿದ ಮಾತುಗಳು ಹೀಗಿವೆ "ಅಷ್ಟಕ್ಕೂ ಬೇರೆಯವರ ಮನೆಯಲ್ಲಿಯೂ ಕೊಳೆ ಇದೆ ಎಂಬ ಕಾರಣಕ್ಕೆ ನಮ್ಮ ಮನೆಯ ಕಸ ಗುಡಿಸದೆ ಇರಲು ಆಗುತ್ತದೆಯೆ?"[28] ಬೇರೆಯವರ ಮನೆ, ನಮ್ಮ ಮನೆ ಎಂಬ ವಿಭಾಗವೇ ವಿಭಜನವಾದಿಯಾದದ್ದು. ಅಲ್ಲದೆ, ಪರಿಸರ ಸ್ವಚ್ಛವಾಗಿರಬೇಕಾದರೆ ನಮ್ಮ ಮನೆ ಮಾತ್ರ ಸ್ವಚ್ಛವಾಗಿದ್ದರೆ ಸಾಕಾಗುವುದಿಲ್ಲ. ಎಲ್ಲ ಮನೆಗಳೂ ಸ್ವಚ್ಛವಾಗಿರಬೇಕಾದುದು

ಅನಿವಾರ್ಯ. ನಮ್ಮ ಪಕ್ಕದ ಮನೆಯೂ ಕೋಳೆರಹಿತವಾಗಿದ್ದಾಗ ಮಾತ್ರ ಸಹಬಾಳ್ವೆಯು ಸೌಹಾರ್ದಯುತವಾಗಿರಬಲ್ಲುದು ಎಂಬುದನ್ನು ಅರ್ಥಮಾಡಿಕೊಳ್ಳದೇ ಇರುವುದರಿಂದಲೇ ಹುಡುಗ-ಹುಡುಗಿಯರು ಪರಸ್ಪರ ಮಾತನಾಡಿದ ಪ್ರಸಂಗಗಳು ಕೂಡ ಇಂದು ಕೋಮು ಸೂಕ್ಷ್ಮ ಪ್ರಸಂಗಗಳಾಗುತ್ತಿರುವುದು; ಅಮಾಯಕರು ಪೆಟ್ಟು ತಿನ್ನುವಂತಾಗುವುದು. ಅಂದರೆ, ಒಂದು ಸಮುದಾಯವು ಆಧುನಿಕತೆಯನ್ನು ಅಳವಡಿಸಿಕೊಳ್ಳುತ್ತ ಕಾಲದ ಜೊತೆ ಹೊಂದಿಕೊಳ್ಳುವಾಗ, ಇನ್ನೊಂದು ಸಮುದಾಯವು ಧರ್ಮದ ಕಾರಣದಿಂದ ಅಂಥ ಬದಲಾವಣೆಗೆ ಸಿದ್ಧವಾಗದೇ ಹೋದಾಗ ಉಂಟಾಗುವ ಸಂಘರ್ಷವನ್ನು ಜಿ. ರಾಜಶೇಖರರ ರೂಪಕದ ಮೂಲಕ ನಾವು ಚೆನ್ನಾಗಿ ಮನದಟ್ಟು ಮಾಡಿಕೊಳ್ಳಬಹುದು.

**ನೈತಿಕತೆಯ ಅಧಃಪತನ**

ಹಿಂದಿನ ತಲೆಮಾರು ಮತ್ತು ನವ್ಯದ ಕಾಲಘಟ್ಟದಿಂದೀಚಿನ ಲೇಖಕರ, ಚಿಂತಕರ ಬರಹಗಳ ನಡುವೆ ಕಾಣುವ ಅತ್ಯಂತ ಮುಖ್ಯ ವ್ಯತ್ಯಾಸವು 'ನೈತಿಕತೆ'ಗೆ ಸಂಬಂಧಿಸಿದ್ದಾಗಿದೆ ಎಂದು ಈ ಲೇಖನದ ಆರಂಭದಲ್ಲಿ ಹೇಳಲಾಗಿತ್ತು. ಅದನ್ನೀಗ ಸ್ವಲ್ಪ ವಿಸ್ತರಿಸಬಹುದು.

ನೈತಿಕತೆಗೆ ಸಂಬಂಧಿಸಿ ಅನಂತಮೂರ್ತಿಯವರು ಹೇಳಿದ ಮಾತುಗಳು ಗಮನಾರ್ಹ– "ನಮ್ಮ ಹಿಂದಿನ ಸಾಹಿತಿಗಳಲ್ಲಿ ಹೀಗೆ ನೈತಿಕ ಪೈಪೋಟಿ ನಡೆದದ್ದು ಇಲ್ಲವೇನೊ ? ನಮ್ಮ ಪೀಳಿಗೆಯಲ್ಲಿ ಇದು ಶುರುವಾಯಿತು. ಮುಂದಿನ ಪೀಳಿಗೆಯಲ್ಲಿ ಇದು ಇನ್ನೂ ಹೆಚ್ಚಾಗುತ್ತದೆ. ಇದು ನನಗೆ ಅವನತಿಯ ಸಂಕೇತವಾಗಿ ಕಾಣುತ್ತದೆ. ಈ ಬಗೆಯ ವ್ಯಗ್ರ ನಖಗಳನ್ನು ತೋರಿಸುತ್ತ ಓಡಾಡುವ ಕಾಲ ಈಗ ಬಂದಿದೆ. ಅದು ಇಷ್ಟು ವಿಸ್ತಾರವಾದ ಪ್ರಮಾಣದಲ್ಲಿ ಈಗಲೇ ಆಗುತ್ತಿರುವುದು. ನೀನೊಬ್ಬ ಒಳ್ಳೆಯ ಲೇಖಕ ಅನ್ನುವುದನ್ನು ಸಾಬೀತು ಪಡಿಸಲು ನೀನೊಂದು ಪ್ರತಿಭಟನೆಯಲ್ಲಿ ಪಾಲ್ಗೊಂಡು ಗುರುತಾಗಿರಬೇಕು, ಆ ಪ್ರತಿಭಟನೆಯಿಂದ ನಿನಗೆ ಅಷ್ಟೇನೂ ಹಾನಿಯೂ ಇಲ್ಲ ಎನ್ನುವುದನ್ನೂ ನೀನು ಖಚಿತಪಡಿಸಿಕೊಂಡೇ ಮಾಡುತ್ತಿರುತ್ತೀಯ ಎನ್ನುವುದೂ ಮತ್ತೊಂದು ಸತ್ಯ." [29] ಈ ಮಾತುಗಳು ಸತ್ಯವೇ ಹೌದು. ಪ್ರತಿಭಟನೆ ಅಂತಲ್ಲ, ಮಾಧ್ಯಮಗಳಿಗೆ ನಮ್ಮ ಕನ್ನಡ ನಾಡಿನ ಸಾಹಿತಿಗಳು, ಚಿಂತಕರು ಆಗಾಗ ನೀಡುವ ಹೇಳಿಕೆಗಳು ಕೂಡ ಮೇಲಿನ ಮಾತುಗಳನ್ನು ದೃಢೀಕರಿಸುತ್ತವೆ.

ಸತ್ಯ ಮುಂತಾದ ಮೌಲ್ಯಗಳು ಸಾಪೇಕ್ಷ ಎಂಬ ಗ್ರಹಿಕೆ ಹೆಚ್ಚು ಹೆಚ್ಚು ಜನಪ್ರಿಯವಾಗುತ್ತಿರುವ ಈ ದಿನಗಳಲ್ಲಿ 'ನೈತಿಕತೆ' ಎನ್ನುವುದು ಕೂಡ ಸಾಪೇಕ್ಷವೆನಿಸಿರುವುದರಲ್ಲಿ ಆಶ್ಚರ್ಯವೇನಿಲ್ಲ. ನಿಮಗೆ ಅನೈತಿಕವೆನಿಸಿದ್ದು ನಮಗೆ ನೈತಿಕ ಎಂದೂ ವಾದಿಸಬಹುದು. ಹೀಗೆ 'ಸಾಪೇಕ್ಷತೆಯ ಸಿದ್ಧಾಂತ'ವನ್ನು ಪಾಲಿಸುವವರಿಗೆ ಸತ್ಯವೂ ಮೌಲ್ಯವಾಗಬೇಕಾಗಿಲ್ಲ. ಇದಕ್ಕೆ 'ವಿಶ್ವ ನುಡಿಸಿರಿಗೆ ಬರಗೂರು ಬಂಡಾಯ'ವೆಂಬ ಪ್ರಹಸನ ಒಂದು ಒಳ್ಳೆಯ ಉದಾಹರಣೆ. ಅವರು ವಿಶ್ವ ನುಡಿಸಿರಿಯ ಸನ್ಮಾನ ಹಾಗೂ ಅದರೊಂದಿಗೆ ದೊಡ್ಡ ಮೊತ್ತದ ಹಣವನ್ನು ಸ್ವೀಕರಿಸಿದ್ದು, ಆ ನಂತರ ಬಂಡಾಯವೆದ್ದದ್ದು, ಬಳಿಕ ಆತ್ಮಾವಲೋಕನ ಮಾಡಿಕೊಂಡು ಹಣವನ್ನು ಚೆಕ್ ಮೂಲಕ ಹಿಂದಿರುಗಿಸಿದ್ದು ಇತ್ಯಾದಿ ಸಂಗತಿಗಳೆಲ್ಲ ವರದಿಯಾಗಿವೆ[30] ಯಾವ ಕ್ಷಣದಲ್ಲಾದರೂ ಸತ್ಯ ಸಾಕ್ಷಾತ್ಕಾರವಾಗಿ ವ್ಯಕ್ತಿಯು ಬಂಡಾಯವೇಳಬಹುದು ಅಥವಾ ಶರಣಾಗಬಹುದು. ಅದೆಲ್ಲ ಸರಿಯೇ. ಆದರೆ, ಈ ಬಗ್ಗೆ ಬರಗೂರರು ನೀಡಿದ ಸ್ಪಷ್ಟೀಕರಣದಲ್ಲಿ ಹಸಿ ಹಸಿ ಸುಳ್ಳೊಂದನ್ನು ಹೇಳಿದ್ದಾರೆ. 'ಸಮಾಜ' ಎಂಬ ವಿಷಯದ ಬಗ್ಗೆ ಉಪನ್ಯಾಸ ನೀಡಲು ತಾವು ಒಪ್ಪಿರಲಿಲ್ಲ. ಆದರೂ ಒಪ್ಪಬಹುದೆಂಬ ಭಾವನೆಯಿಂದ ಸಂಘಟಕರು ಆಮಂತ್ರಣ ಪತ್ರದಲ್ಲಿ

ಹೆಸರನ್ನು ಅಚ್ಚು ಮಾಡಿದ್ದರು ಎಂದು ಅವರು ಪ್ರಜಾವಾಣಿಗೆ ಬರೆದ ಪತ್ರದಲ್ಲಿ (25–12–2013) ಹೇಳಿದ್ದಾರೆ. ಆಳ್ವಾಸ್ ವಿಶ್ವನುಡಿಸಿರಿಯ ಸಂಘಟಕರಿಗಷ್ಟೇ ಅಲ್ಲ; ಅದರ ಬಗೆಗಿನ ಕೆಲ ಸಭೆಗಳಲ್ಲಿ ಅಲ್ಪ ಸ್ವಲ್ಪ ಭಾಗಿಗಳಾಗಿದ್ದ ನಮ್ಮಂಥವರಿಗೂ ಸ್ಪಷ್ಟವಾಗಿ ಗೊತ್ತಿದ್ದ ವಿಷಯವೆಂದರೆ, ಬರಗೂರರು ಆರಂಭದಲ್ಲಿ ಉಪನ್ಯಾಸ ನೀಡಲು ಒಪ್ಪಿದ್ದರು. ಅವರಿಗಾಗಿಯೇ, ಅವರ ಕೋರಿಕೆಯಂತೆಯೇ ಉಪನ್ಯಾಸದ ಸಮಯವನ್ನು ಮರುಹೊಂದಾಣಿಕೆ ಕೂಡ ಮಾಡಲಾಗಿತ್ತು. ಮೊದಲ ಹಂತದ ಆಮಂತ್ರಣ ಪತ್ರಿಕೆಗಳು ಅಚ್ಚಾದ ಬಳಿಕವಷ್ಟೇ, ತಮಗೆ ಬೇರೆ ಕಾರ್ಯಕ್ರಮವಿದೆ ಯಾದ್ದರಿಂದ ಉಪನ್ಯಾಸ ನೀಡಲು ಸಾಧ್ಯವಾಗುವುದಿಲ್ಲ ಎಂದು ಅವರು ತಿಳಿಸಿದುದು. ಹೀಗೆ, ತಾನು ಒಪ್ಪಿರಲಿಲ್ಲವಾದರೂ ತನ್ನ ಹೆಸರನ್ನು ಅಚ್ಚು ಮಾಡಿದ್ದಾರೆಂದು ಸುಳ್ಳು ಹೇಳುವ ಮೂಲಕ ಸಂಘಟಕರನ್ನೇ ಅಪರಾಧಿಗಳನ್ನಾಗಿ ಮಾಡಿದರು. ಸಮುದಾಯ ನಾಟಕ ತಂಡ ದವರೂ ಅಷ್ಟೆ. ನುಡಿಸಿರಿಯಲ್ಲಿ ನಾಟಕ ಪ್ರದರ್ಶಿಸುತ್ತೇವೆಂದು ಒಪ್ಪಿಕೊಂಡ ಕಾರ್ಯಕ್ರಮಕ್ಕೆ ಕೊನೆಗಳಿಗೆಯಲ್ಲಿ ಕೈಕೊಡುವ ಮೂಲಕ ತಮ್ಮ ನೈತಿಕತೆಯನ್ನು ಪ್ರದರ್ಶಿಸಿದರು! ಇಂಥ ವರ್ತನೆಗಳ ಮೂಲಕ ಬರಗೂರು ರಾಮಚಂದ್ರಪ್ಪರಂಥವರು ಕರ್ನಾಟಕಕ್ಕೆ ಯಾವ ಸಾಂಸ್ಕೃತಿಕ ನೀತಿಯನ್ನು ರೂಪಿಸಲು ಹೊರಟಿದ್ದಾರೆ?

ಭ್ರಷ್ಟತೆ ಎನ್ನುವುದು ಕೂಡ ಅನುಕೂಲಕ್ಕೆ ತಕ್ಕಂತೆ ಸಾಪೇಕ್ಷವಾಗಬಹುದು. "ಭ್ರಷ್ಟರಲ್ಲದೆ ಇರೋದು ಒಂದು ಸಹಜವಾಗಿ ಇರಬೇಕಾದ ಗುಣ. ಅವನು ಉಸಿರಾಡುತ್ತಿದ್ದಾನೆ ಅಂದಷ್ಟೇ ಸಹಜವಾದದ್ದು. ಹೀಗಾಗಿ ಭ್ರಷ್ಟರಲ್ಲ ಅನ್ನೋದು ದೊಡ್ಡ ಸಾಧನೆ ಏನಲ್ಲ. ನಮ್ಮಲ್ಲಿ ಭ್ರಷ್ಟರು ಹೆಚ್ಚಾಗಿರೋದರಿಂದ ಅದೊಂದು ಮಹಾನ್ ವಿಷಯ ಆಗಿಬಿಟ್ಟಿದೆ ಅಷ್ಟೆ....." ಎಂದು ಒಂದೆಡೆ ಹೇಳುವ ಅನಂತಮೂರ್ತಿಯವರು, ಹಿಂದೆ ಕರ್ನಾಟಕದಲ್ಲಿ ತಮಗೆ ಹತ್ತಿರವಾಗಿದ್ದ ಮುಖ್ಯಮಂತ್ರಿಗಳು ಮತ್ತು ಮಂತ್ರಿಗಳು ಹಣ ಹಂಚುವ ಮೂಲಕವೇ (ಅಕ್ರಮವಾಗಿ ಹಣ ಸಂಗ್ರಹಿಸದೆ ಹಂಚುವುದು ಹೇಗೆ ?) ಅಧಿಕಾರ ಗಳಿಸಿ, ಉಳಿಸಿಕೊಂಡ ಸಂದರ್ಭದಲ್ಲಿ ಅದನ್ನೆಲ್ಲ ತಿಳಿದೂ ಬಾಯಿ ಬಿಟ್ಟದ್ದಿಲ್ಲ. ಅಧಿಕಾರದಲ್ಲಿರುವವರಿಗೆ ಹತ್ತಿರವಾಗಿದ್ದಾಗ ಸಾಹಿತಿಗಳಿಗೆ ಆಗುವ ಲಾಭವೂ ದೊಡ್ಡದು. ಅನಂತಮೂರ್ತಿಯವರ 'ಭವ' ಕಾದಂಬರಿಗೆ ಡಿ. ಆರ್. ನಾಗರಾಜರು ಹೊಗಳಿಕೆಯ ಬೆನ್ನುಡಿ ಬರೆಯಲು, ಆ ಬಗ್ಗೆ ಅನಂತಮೂರ್ತಿಯವರೊಂದಿಗೆ 'ಬ್ಯಾಡ್ ಫೇತ್'ನಲ್ಲಿ ವ್ಯವಹರಿಸಲು ಕಾರಣವಾದುದು ಅವರು ಹೊಂದಿದ್ದ ಅಧಿಕಾರವೇ. "ನಾನು ಹೇರದಿದ್ದರೂ ನನ್ನ ಅಧಿಕಾರ ನನ್ನ ಯಶಸ್ಸಿಗೆ ಎಷ್ಟು ಕಾರಣವಾಗಿರಬಹುದೆಂಬುದು ನನಗೆ ಆತಂಕದ ಸಂಗತಿ" ಎಂಬ ಅವರ ಮಾತು ಸತ್ಯವಾದುದು ಮತ್ತು ಪ್ರಾಮಾಣಿಕವಾದುದು.

ಒಂದೆಡೆ ಸರ್. ಎಂ. ವಿಶ್ವೇಶ್ವರಯ್ಯನವರ ದಿವಾನಗಿರಿಯ ಸಂದರ್ಭವನ್ನು ಉಲ್ಲೇಖಿಸುತ್ತಾ "ಯಾವ ಕಷ್ಟದಲ್ಲಾದರೂ ಬದುಕಬಲ್ಲ ಶಕ್ತಿಯುಳ್ಳ ಮೇಲ್ಜಾತಿಯವರಿಗೆ ಈ ಬಗೆಯ ನೈತಿಕತೆ ದುಸ್ಸಾಧ್ಯವಲ್ಲ" ಎಂದು ಅನಂತಮೂರ್ತಿಯವರು ಹೇಳುತ್ತಾರೆ. ಆದಾಗ್ಯೂ, ವಿಶ್ವವಿದ್ಯಾಲಯ ಗಳಲ್ಲಿ ಪ್ರೊಫೆಸರ್ ಆಗಿದ್ದು, ಕುಲಪತಿಯಾಗಿದ್ದು ಮನೆಯೊಂದನ್ನು ಕೊಂಡುಕೊಳ್ಳುವ ಆರ್ಥಿಕ ಅನುಕೂಲತೆಯಿದ್ದರೂ, ಸ್ವಂತ ಮನೆಯಿಲ್ಲ ಎಂಬ ಕಾರಣ ನೀಡಿ, ಮಾರುಕಟ್ಟೆ ದರದ ಅರ್ಧಕ್ಕಿಂತಲೂ ಕಡಿಮೆ ಬೆಲೆಗೆ ಸರಕಾರದಿಂದ ಮನೆಯನ್ನೋ ನಿವೇಶನವನ್ನೋ ಪಡೆಯುವುದು ನೈತಿಕವಾಗಿ ಸರಿಯೇ ಎಂಬ ಪ್ರಶ್ನೆ ಅನಂತಮೂರ್ತಿಯವರಿಗೆ ಮುಖ್ಯವಾಗ ಲಿಲ್ಲ. ಆರ್ಥಿಕ ಅನುಕೂಲವಿದ್ದರೂ ಸರಕಾರದಿಂದ ಸವಲತ್ತು, ಸೌಕರ್ಯಗಳನ್ನು ಪಡೆಯುವುದೂ 'ಅರ್ಹತೆ'ಯಿರುವ ಕಾರಣಕ್ಕೆ ನೈತಿಕತೆಯೇ ಆಗುತ್ತದೆ. ಭ್ರಷ್ಟತೆಯಾಗುವುದಿಲ್ಲ, ಸಾರ್ವಜನಿಕ ಬದುಕಿನ ಮೊರ್‍ಯಾಲಿಟಿಯ ಪ್ರಶ್ನೆಯಾಗುವುದಿಲ್ಲ, ಮೀಸಲಾತಿಯನ್ನು ಬೆಂಬಲಿಸುತ್ತೇನೆಂದು

ಹೇಳಬೇಕು. ಆದರೆ, ತನಗೆ ಬಂದ ಯಾವ ಅವಕಾಶವನ್ನೂ ಬಿಟ್ಟು ಕೊಡಬಾರದು. ಯಾಕೆಂದರೆ, ತನ್ನಷ್ಟು ಚೆನ್ನಾಗಿ ಆ ಜವಾಬ್ದಾರಿಯನ್ನು ಜಗತ್ತಿನಲ್ಲಿ ಬೇರಾರೂ ನಿರ್ವಹಿಸಲಾರರು. ನೆಹರೂ ನಿವೃತ್ತರಾಗುವುದಿಲ್ಲ ಎಂದ ಹಾಗೆ, ಇವರಾರೂ ನಿವೃತ್ತರಾಗಲು ಸಿದ್ಧವಿರುವುದಿಲ್ಲ. ಮುಂದಿನ ತಲೆಮಾರನ್ನು ಬೆಳೆಸುವ ಪರಿ ಇದುವೇ. ವ್ಯವಸ್ಥೆಯನ್ನು ಮತ್ತು ಪ್ರಭುತ್ವವನ್ನು ವಿರೋಧಿಸಬೇಕೆಂದು ಹೇಳುತ್ತಲೇ, ಅದಕ್ಕೆ ಹತ್ತಿರವಾಗಿ ನಡೆದುಕೊಳ್ಳುವುದ ರಲ್ಲಿ ಅನುಕೂಲವಿದ್ದಾಗ ಅದೇ ಸರಿಯಾಗುತ್ತದೆ.[32] ಡಿ.ವಿ.ಜಿಯಂಥವರು ನಡೆದುಕೊಂಡ ಬಗೆಯನ್ನು ಈಗಿನವರ ನಡವಳಿಕೆಯ ಜೊತೆಗೆ ಹೋಲಿಸಿದರೆ 'ನೈತಿಕತೆ' ಎಂಬ ಪರಿಕಲ್ಪನೆ ಯಲ್ಲಾದ ವ್ಯತ್ಯಾಸ ಸ್ಪಷ್ಟವಾದೀತು. ಬಹಳಷ್ಟು ಪ್ರಚಾರಪ್ರಿಯ ಪ್ರಗತಿಪರರ ನೈತಿಕಪ್ರಜ್ಞೆ ಜಾಗೃತ ವಾಗುವುದು ಅಪರಾಧಿಗಳ ಬಗ್ಗೆ ಸಹೃದಯತೆ ತೋರಿಸುವಲ್ಲಿ ಮಾತ್ರ. ಮಾನವಹಕ್ಕುಗಳ ಬಗ್ಗೆ ಮಾತನಾಡುವ ಅನೇಕರಿಗೆ ಪಾತಕಿಗಳ, ಭಯೋತ್ಪಾದಕರ ದಾಳಿಗೆ ಅಕಾರಣವಾಗಿ ಬಲಿಯಾಗುವ ಅಮಾಯಕರ ಮಾನವ ಹಕ್ಕಿನ ಬಗ್ಗೆ ಯಾವುದೇ ಕಾಳಜಿ ಇರುವುದಿಲ್ಲ. ಬದಲಾಗಿ ಅಂಥ ಪಾತಕ ಎಸಗಿದವರ ಹಕ್ಕುಗಳು ಮುಖ್ಯವಾಗುತ್ತವೆ. ಅವರಿಗೆ ಪೊಲೀಸ್ ಲಾಕಪ್ಪಿನಲ್ಲಿ ಹೊಡೆಯುವುದು, ಮರಣದಂಡನೆಯಂತಹ ಶಿಕ್ಷೆಯಾಗುವುದು ಮಾನವ ಹಕ್ಕಿನ ದೊಡ್ಡ ಉಲ್ಲಂಘನೆಯಾಗುತ್ತದೆ. ಎಷ್ಟೋ ಬಾರಿ ಇಂಥ ಪ್ರಗತಿಪರ ಸಾಕ್ಷಿಪ್ರಜ್ಞೆಗಳಿಗೆ ಕಾನೂನುಗಳ ಆಶಯ ಮುಖ್ಯವಾಗುವುದಿಲ್ಲ. ಕಾನೂನಿನ ಪ್ರಕಾರ ಸಿಕ್ಕಿ ಬೀಳದಿದ್ದರೆ ಸರಿ, ಅಷ್ಟೇ. ಕಾನೂನಿನಲ್ಲಿರುವ ಕೊರತೆಯೆಂಬುದು ಪಾತಕದಲ್ಲಿ ಭಾಗಿಯಾದವರಿಗೆ ಹೆಮ್ಮೆಯಿಂದ ಹೇಳಿಕೊಳ್ಳುವ ಸಂಗತಿಯೂ ಆಗಬಹುದು. ಹೀಗೆ ನೈತಿಕತೆ – ಅನೈತಿಕತೆಗಳ ನಡುವಿನ ಗೆರೆಯನ್ನೇ ಅಳಿಸಿಬಿಡಲಾಗುತ್ತದೆ.[33]

ಸ್ತ್ರೀ ಸ್ವಾತಂತ್ರ್ಯ, ಹೆಣ್ಣಿನ ಘನತೆ ಬಗ್ಗೆ ದೊಡ್ಡ ದೊಡ್ಡ ಮಾತಾಡುವ ಮಂದಿ ತಮ್ಮ ಬದುಕಿನಲ್ಲಿ ಸ್ತ್ರೀ ಪರವಾದ ಕಾನೂನುಗಳ ಆಶಯವನ್ನು ಗೌರವಿಸುವ ಬಗೆ ಹೇಗೆ? ಕಾನೂನಿನ ಆಶಯಕ್ಕೆ ವಿರುದ್ಧವಾದರೂ ವೈಯಕ್ತಿಕ ಸಂಗತಿಯಾಗಿ ಎರಡನೆ ಸಂಬಂಧ ಇಟ್ಟುಕೊಂಡ ಘೋಷಿತ ಪ್ರಗತಿಪರರಿಲ್ಲವೆ? ಏಕಪತ್ನೀವ್ರತಸ್ಥನಾಗಿ ಉಳಿಯದ ಸಾಹಿತಿಯೂ ಪತ್ನಿಗೆ ಮೋಸ ಮಾಡಿದ್ದೇವೆಂಬ ಭಾವವನ್ನಾಗಲೀ ಕಾನೂನಿನ ಆಶಯಕ್ಕೆ ವಿರೋಧವಾಗಿ ನಡೆದಿದ್ದೇನೆಂಬ ಭಾವವನ್ನಾಗಲೀ ವ್ಯಕ್ತಪಡಿಸಿದ್ದಿಲ್ಲ. ಹೆಣ್ಣು ಮಾತ್ರ ಪೊರೆವ ಗುಣವನ್ನು ಉಳಿಸಿಕೊಳ್ಳಬೇಕು.[34]

ಮಹಿಳೆಯರ ಜೊತೆ ಲಂಕೇಶ್ ಅವರು ಉದ್ಧಟರಾಗಿ ನಡೆದುಕೊಂಡ ಘಟನೆಗಳು ಉಲ್ಲೇಖಿತವಾಗಿವೆ. ಅವರ ಲಂಪಟತನ ದಾಖಲಾಗಿದೆ. ಅವರಿಗೆಲ್ಲ ಹೋಲಿಸಿದರೆ, ಈಚೆಗೆ ಬಂಧನಕ್ಕೊಳಗಾದ ಪತ್ರಿಕೋದ್ಯಮಿ ತರುಣ್ ತೇಜ್‌ಪಾಲ್ ಮುಗ್ಧ ಎನ್ನಬಹುದು. ಅಂಥ ಲಂಕೇಶರೂ ಸ್ತ್ರೀವಾದಿಯಾಗಿ ಪ್ರಗತಿ ಪರರಾಗಿ ಕಾಣುತ್ತಾರೆ. ನಮ್ಮ ಸ್ತ್ರೀವಾದಿ ಚಿಂತಕಿಯರಿಗೂ ಲಂಕೇಶರ ವರ್ತನೆಗಳು ಗಂಡಸಿನ ದೌರ್ಬಲ್ಯವಾಗಿಯಷ್ಟೇ ಕಾಣುತ್ತವೆ ಹೊರತು ಆಕ್ಷೇಪಾರ್ಹ ವಾಗಿ ಕಾಣುವುದಿಲ್ಲ.[35] ಪ್ರೇಮ ಎನ್ನುವುದು ಮದುವೆಯಲ್ಲಿ ಮುಕ್ಕಾಗಿ ಸಂಸಾರದ ವಿವರಗಳಲ್ಲಿ ಕಮರಿ ಹೋಗುತ್ತದೆ ಎಂದು ಹೇಳುವ ಲಂಕೇಶರಿಗೆ ವ್ಯಭಿಚಾರವೆನ್ನುವುದು ಡ್ಯೂಯಾಲಟಿ ಆಗುತ್ತದೆ ಹೊರತು ನಿಂದನೀಯವಾಗುವುದಿಲ್ಲ.[36] ಸ್ತ್ರೀ ಪುರುಷ ಸಮಾನತೆ, ಸಮಾನ ಅವಕಾಶಗಳ ಬಗ್ಗೆಯೆಲ್ಲಾ ಬೋಧಿಸುವ ಇವರು ತಮ್ಮಂತೆಯೇ ಲಂಪಟತನದ ಸ್ವಾತಂತ್ರ್ಯ ಮಹಿಳೆಯರಿಗೂ ಇದೆಯೆಂದು ಪರಿಗಣಿಸುತ್ತಾರೆಯೆ? ನಮ್ಮನ್ನು ಮೆಚ್ಚಿದ ಮಹಿಳೆಯರ ಜೊತೆ ಸಂಗ ಮಾಡುವುದರಲ್ಲಿ ತಪ್ಪೇನಿದೆ? ಅದು ವೈಯಕ್ತಿಕ ಸ್ವಾತಂತ್ರ್ಯ ಎಂದು ಸುಲಭವಾಗಿ ವಾದಿಸಬಹುದು. ಆದರೆ, ಅನಂತಮೂರ್ತಿ, ಲಂಕೇಶರಂಥವರು ಹೊಂದಿದ್ದ ಸ್ಥಾನ–ಮಾನ,

ಪ್ರಭಾವಗಳೂ ಪರೋಕ್ಷವಾಗಿ ಅವರ ಸಂಪರ್ಕಕ್ಕೆ ಬರುವವರ ಮೇಲೆ ಒತ್ತಡ ಹೇರುವ ಸಾಧ್ಯತೆ ಇದ್ದೇ ಇರುತ್ತದೆ. ತಮ್ಮ ಎಷ್ಟೋ ನಿಂದನೀಯ ನಡವಳಿಕೆಗಳ ಬಗ್ಗೆ ಯಾವ ವಿಷಾದವೂ ಇಲ್ಲದ ಇಂಥವರು ನಾಡಿನ ಸಾಕ್ಷಿಪ್ರಜ್ಞೆಗಳಾಗಿ ಎಲ್ಲ ವಿಷಯಗಳಲ್ಲೂ ಆದರ್ಶ ಚಿಂತಕರಾಗಿ ನಮಗೆ ಕಾಣುತ್ತಾರೆ ! ಅದು ಪರಿಸರ ಚಳುವಳಿಯಿರಲಿ, ರಾಜಕೀಯವಿರಲಿ, ಅಣುಒಪ್ಪಂದ ವಿರಲಿ, ಮಹಿಳಾ ದೌರ್ಜನ್ಯವಿರಲಿ, ಕೋಮುವಾದವಿರಲಿ, ಇನ್ನೇನೇ ಇರಲಿ.

ಬಹಳ ಬಾರಿ ಗಣ್ಯರ ವ್ಯಕ್ತಿಗತ ಬದುಕಿನ ನೈತಿಕತೆ ಅಥವಾ ಸನ್ನಡತೆ ಮತ್ತು ಸಾರ್ವಜನಿಕ ಬದುಕಿನ, ಅಂದರೆ ಉದ್ಯೋಗ ಇತ್ಯಾದಿ ಕ್ಷೇತ್ರಗಳಲ್ಲಿ ನೈತಿಕತೆ ಅಥವಾ ಸನ್ನಡತೆ ಇವೆರಡನ್ನು ಪ್ರತ್ಯೇಕವಾಗಿ ಪರಿಗಣಿಸಲಾಗುತ್ತದೆ. ನೈತಿಕವಾಗಿ ಸರಿಯಲ್ಲದ ಎಷ್ಟೋ ನಡವಳಿಕೆಗಳನ್ನು ಮೊದಲ ವಿಭಾಗಕ್ಕೆ ಸೇರಿಸಲಾಗುತ್ತದೆ. (ಉದಾಹರಣೆಗೆ ಕುಡಿತದಂಥ ಚಟಗಳು ಇತ್ಯಾದಿ) ಆ ಮೂಲಕ ಅಂಥ ಗಣ್ಯರ ಸಾರ್ವಜನಿಕ ವ್ಯಕ್ತಿತ್ವಕ್ಕೆ ಕುಂದು ಬರುವುದಿಲ್ಲವೆಂದು ಅಂದುಕೊಳ್ಳ ಲಾಗುತ್ತದೆ. ಅದೇನೋ ಸರಿ. ಆದರೆ ಪ್ರಾಮಾಣಿಕತೆ, ಸತ್ಯ ಮುಂತಾದ ಮೂಲಭೂತ ಮೌಲ್ಯ ಗಳಿಗೇ ಬೆಲೆ ಕೊಡದ ಗಣ್ಯರು ಸಾಮಾನ್ಯ ಜನರ ನಂಬಿಕೆಯನ್ನು ಕ್ರಮೇಣ ಕಳೆದುಕೊಳ್ಳುತ್ತಾರೆ ಅಷ್ಟೇ ಅಲ್ಲ; ಅಂಥವರು ನಿಜವಾಗಿ ಪ್ರಾಮಾಣಿಕರಾಗಿದ್ದಾಗಲೂ ಶಂಕಿಸಲ್ಪಡುತ್ತಾರೆ. ಈ ನಿಟ್ಟಿನಲ್ಲಿ ನಮ್ಮ ನಾಡಿನ ಸಾಕ್ಷಿಪ್ರಜ್ಞೆಗಳು ಆತ್ಮಾವಲೋಕನ ಮಾಡಿಕೊಳ್ಳಬೇಕಾದ ಅಗತ್ಯವಿದೆ.

**ಟಿಪ್ಪಣಿಗಳು**

11. ಪ್ರಜಾವಾಣಿ, ಮಂಗಳೂರು, 5–9–2013
12. ಕನ್ನಡ ಪ್ರಭದಲ್ಲಿ (ದಿನಾಂಕ 22–9–2013) ಎಚ್. ಎಸ್. ದೊರೆಸ್ವಾಮಿ, ಗಿರೀಶ್ ಕಾರ್ನಾಡ್,ಜಿ.ಕೆ. ಗೋವಿಂದರಾವ್ ಮೊದಲಾದವರು ಪ್ರಕಟಿಸಿದ ಪತ್ರ.
13. ನೋಡಿ : ಅರುಣ್ ಶೌರಿ, ಮಹಾನ್ ಇತಿಹಾಸಕಾರರು, ಅನು : ಮಂಜುನಾಥ ಅಜ್ಜಂಪುರ, ರಾಷ್ಟ್ರೋತ್ಥಾನ ಸಾಹಿತ್ಯ, ಬೆಂಗಳೂರು, 2013, ಪು. 41–50
14. ಉದಾಹರಣೆಗೆ ನೋಡಿ : ವಾರ್ತಾಭಾರತಿ 23–9–13 ಮತ್ತು ಗೌರಿ ಲಂಕೇಶ್ ಪತ್ರಿಕೆ, 2–10–2013
15. ಜೋಗಿಯವರೊಡನೆ ಸಂದರ್ಶನ, ಉದಯವಾಣಿ, ಮಣಿಪಾಲ, 19–9–2013
16. ಉದ್ಧೃತ : ನೋಮ್ ಚಾಮ್‌ಸ್ಕಿ; (ಅನು: ಫಣಿರಾಜ್), "ಬರಹಗಾರನ ಬೌದ್ಧಿಕ ಜವಾಬ್ದಾರಿ", ಸಂ. ಬಸವರಾಜ ಕಲ್ಗುಡಿ, ಸುವರ್ಣ ವಿಚಾರ ಸಾಹಿತ್ಯ, ಕ. ಸಂ. ಇಲಾಖೆ, ಬೆಂಗಳೂರು, 2006, ಪು.123
17. ನೋಡಿ: ಯು.ಆರ್.ಅನಂತಮೂರ್ತಿ,ಸುರಗಿ, ಅಕ್ಷರ, ಹೆಗ್ಗೋಡು,2012,ಪು.167–168
18. ಜೋಗಿಯವರೊಡನೆ ಸಂದರ್ಶನ, ಪೂರ್ವೋಕ್ತ.
19. ಟೈಮ್ಸ್ ಆಫ್ ಇಂಡಿಯಾ ಜಾಲತಾಣ ವರದಿ, ಕೊನೆಯ ಬಾರಿ ನೋಡಿದ್ದು 30–10–2013
20. ನೋಡಿ : ಜೋಗಿಯವರೊಡನೆ ಸಂದರ್ಶನ, ಪೂರ್ವೋಕ್ತ ಮತ್ತು ಬಿ.ಎಸ್. ಜಯಪ್ರಕಾಶ್ ನಾರಾಯಣ್ ಅವರೊಂದಿಗೆ ಸಂದರ್ಶನ; ವಿಜಯ ಕರ್ನಾಟಕ, 20–9–2013.
21. ಪ್ರಜಾವಾಣಿ, ಮಂಗಳೂರು, ವರದಿಗಳು, 16–5–2013 & 1–10–2013
22. ನೋಡಿ : "ಕಲ್ಪಿತ ಧಾರ್ಮಿಕ ಸಮುದಾಯಗಳು" (ಅನು : ಎಚ್ ಎಸ್ ರಾಘವೇಂದ್ರರಾವ್) ಸಂ: ಬಸವರಾಜ ಕಲ್ಗುಡಿ, ಸುವರ್ಣ ವಿಚಾರ ಸಾಹಿತ್ಯ, ಕ. ಸಂ. ಇಲಾಖೆ, ಬೆಂಗಳೂರು,

2006 ಪು. 417

23. ಮುರಳೀಧರ ಖಜಾನೆಯವರೊಂದಿಗೆ ಸಂದರ್ಶನ, ಹಿಂದೂ ಪತ್ರಿಕೆ, ಮಂಗಳೂರು, 3–10–2013.
24. ನೋಡಿ: ಡಿ.ಎಸ್.ನಾಗಭೂಷಣ, "ಮುಸ್ಲಿಂ ಬುದ್ಧಿ ಜೀವಿಗಳೇ ಎಚ್ಚೆತ್ತುಕೊಳ್ಳಿ!", ವಿಕ್ರಾಂತ ಕರ್ನಾಟಕ, ಮಾರ್ಚ್ 6, 2009 ಪು. 13.
25. ಎಚ್. ಟಿ. ಪೋತೆ (ಸಂ), ವಿಚಾರ ಸಾಹಿತ್ಯ –2006, ಕ. ಸಾ. ಅಕಾಡೆಮಿ, ಬೆಂಗಳೂರು, 2007. ಪು–328–336.
26. ಜೋಗಿಯವರೊಡನೆ ಸಂದರ್ಶನ, ಪೂರ್ವೋಕ್ತ.
27. ನೋಡಿ : ವಿಜಯವಾಣಿ, ಮಂಗಳೂರು 17–11–2013
28. ಪ್ರಜಾವಾಣಿ, ಮಂಗಳೂರು, 10–11–2013
29. ಸುರಗಿ, ಪು. 393.
30. ನೋಡಿ : ಪ್ರಜಾವಾಣಿ ಮಂಗಳೂರು, 21–12–2013, 25–12–2013, ಕನ್ನಡಪ್ರಭ, ಮಂಗಳೂರು 23–12–2013
31. ಈ ಭಾಗದಲ್ಲಿ ಹೇಳಿದ ವಿಚಾರಗಳಿಗೆ ಸಂಬಂಧಿಸಿದಂತೆ ನೋಡಿ: ಜೋಗಿಯವರೊಡನೆ ಸಂದರ್ಶನ, ಪೂರ್ವೋಕ್ತ ಮತ್ತು ಸುರಗಿ, ಪು. 229, 281, 392 ಇತ್ಯಾದಿ.
32. ಅನಂತಮೂರ್ತಿಯವರು ವ್ಯವಸ್ಥೆಗೆ ಹತ್ತಿರವಾಗಿ ನಡೆದುಕೊಂಡುದರ ಬಗ್ಗೆ ಜಿ.ಎಸ್. ಆಮೂರ ಸಣ್ಣ ಟೀಕೆಯನ್ನು ಮಾಡುತ್ತಾರೆ. ನೋಡಿ: ಯು.ಆರ್. ಅನಂತಮೂರ್ತಿ: ವೈಚಾರಿಕತೆ ಹಾಗೂ ಸಾಹಿತ್ಯ, ಮನೋಹರ ಗ್ರಂಥಮಾಲಾ, ಧಾರವಾಡ, 2013, ಪು. 160–161
    ಅನಂತಮೂರ್ತಿಯವರ ಆತ್ಮ ಕಥನ 'ಸುರಗಿ'ಯಲ್ಲಿ ಇಂಥ ಸನ್ನಿವೇಶಗಳು ಕಾಣುತ್ತವೆ.
33. ಸಂಸತ್ ಭವನದ ಮೇಲೆ ದಾಳಿ ಮಾಡಿದ ಆರೋಪಿಯಾಗಿದ್ದು ಅಪರಾಧಿಯೆಂದು ಘೋಷಿಸಲ್ಪಟ್ಟ ಅಫ್ಜಲ್‌ಗುರುವಿಗೆ ಗಲ್ಲುಶಿಕ್ಷೆಯಾದ ಸಂದರ್ಭದಲ್ಲಿ ಅವನ ಪರವಾಗಿ ಸಾಕಷ್ಟು ಮಾನವಹಕ್ಕು ಪ್ರತಿಪಾದಕರು ಮಾತನಾಡಿದರು. ಸಂಸತ್ ದಾಳಿ ಬಗ್ಗೆ ಅಫ್ಜಲ್‌ಗುರು ಹೆಮ್ಮೆಪಟ್ಟು ಪತ್ರ ಬರೆದಿದ್ದುದು ಅನಂತರ ಬಹಿರಂಗವಾಯಿತು. ಅವನ ಗಲ್ಲುಶಿಕ್ಷೆಯನ್ನು ವಿರೋಧಿಸಿದವರು ಪ್ರಧಾನವಾಗಿ ಮುಂದಿಟ್ಟದ್ದು ಭಾರತೀಯ ದಂಡಸಂಹಿತೆಯ ಕೆಲವು ತಾಂತ್ರಿಕ ಕಾರಣಗಳನ್ನು ಅಷ್ಟೆ. ಇಂಥ ನ್ಯೂನತೆಗಳನ್ನೇ ಮುಂದಿಟ್ಟು, ಅವನನ್ನು ಶಿಕ್ಷಿಸುವುದು ಅನೈತಿಕ ಎಂದು ಬಿಂಬಿಸುವ ಯತ್ನ ನಡೆಯಿತು. ಉದಾಹರಣೆಗೆ ನೋಡಿ : ಅಗ್ನಿಶ್ರೀಧರ್, ಕನ್ನಡಪ್ರಭ, 15–2–2013
34. ನೋಡಿ : ಯು ಆರ್ ಅನಂತಮೂರ್ತಿ, ಸುರಗಿ ಪು. 421
35. ನೋಡಿ : ಇಂದಿರಾ ಲಂಕೇಶ್, ಹುಳಿಮಾವು ಮತ್ತು ನಾನು, ಲಂಕೇಶ್ ಪ್ರಕಾಶನ, ಬೆಂಗಳೂರು, 2013, ಪು. 60, 168, ix.
    ಮಹಾಬಲಮೂರ್ತಿ ಕೊಡ್ಲೆ ಕೆರೆ, ಲಂಕೇಶ್ ಅಲ್ಲ ಮೇಷ್ಟ್ರು, ಐಬಿಎಚ್ ಪ್ರಕಾಶನ, ಬೆಂಗಳೂರು, 2012, ಪು. 56, 88.
36. ಪಿ. ಲಂಕೇಶ್, ಹುಳಿಮಾವಿನ ಮರ, ಲಂಕೇಶ್ ಪ್ರಕಾಶನ, ಬೆಂಗಳೂರು, ಪು.327, 328

# ಚಿಗುರಿದ ಕನಸು; ವಸ್ತು ವಿನ್ಯಾಸ, – ಪ್ರಸ್ತುತತೆ

**ಶ್ರೇಯಾಂಕ ಎಸ್. ರಾನಡೆ**
ಕೇರಾಫ್ ಮಹಾಲಸ ಟ್ರೇಡರ್ಸ್, ವೇಣೂರು
ಬೆಳ್ತಂಗಡಿ ತಾಲೂಕು, ದಕ್ಷಿಣ ಕನ್ನಡ

ಬದುಕನ್ನು ಕುರಿತಂತೆ, ಅದರ ಸಮಸ್ಯೆಗಳನ್ನು ಕುರಿತಂತೆ ಕಾರಂತರಿಗೆ ತಮ್ಮದೇ ಆದ ನಂಬಿಕೆಗಳಿದ್ದವು ಮತ್ತು ನಿರ್ದಿಷ್ಟ ಧೋರಣೆಗಳಿದ್ದವು. ಆಚರಣೆಯ ಪ್ರಾಮಾಣಿಕತೆ, ಅನುಭವಗಳ ಮೇಳೈಕೆಯಿಂದ ತಮ್ಮ ನಿಲುವುಗಳಿಗೆ ಕಾರಂತರು ಕಟ್ಟುನಿಟ್ಟಾಗಿ ಬದ್ಧರಾಗಿದ್ದರು. ಸಾಮಾಜಿಕ ಕಳಕಳಿ ಮತ್ತು ಹಳ್ಳಿಯ ಕೃಷಿ ಬದುಕಿನ ಕುರಿತ ಗ್ರಾಮೀಣತೆಯ ಕಾಳಜಿ ಕಾರಂತರಲ್ಲಿ ತೀವ್ರವಾಗಿ ಕಾಣಬಹುದಾಗಿದೆ. ಆ ನೆಲೆಯಲ್ಲೇ 'ಕೃಷಿ ಜೀವನದ ಚಿತ್ರಣವನ್ನೇ ಪ್ರಧಾನ ವಸ್ತುವನ್ನಾಗಿರಿಸಿಕೊಂಡ, ಪ್ರಜ್ಞಾಪೂರ್ವಕ ವ್ಯಕ್ತಿಯು ಕಟ್ಟುವ ಕನಸುಗಳಿಗೆ ಸಂಬಂಧಿಸಿದ ವಿಚಾರವನ್ನೊಳಗೊಂಡಿರುವ' ಕಾರಂತರ ಪ್ರಮುಖವಾದ ಕೃತಿಯೇ 'ಚಿಗುರಿದ ಕನಸು'.

**ವಸ್ತು ವಿನ್ಯಾಸ**

ಕಾರಂತರ ಬದುಕು–ಬರಹಗಳೆರಡರಲ್ಲೂ ಕನಸುಗಳಿಗೆ ವಿಶೇಷವಾದ–ಪ್ರತ್ಯೇಕವಾದ ಸ್ಥಾನಗಳಿವೆ. ಇವು ಜಾಗೃತ ಚಿತ್ತದಲ್ಲಿ ಮೂಡಬಲ್ಲ ಭವಿಷ್ಯದ ಚಿತ್ರಗಳಾಗಿ ಹಾಗೂ ನಿದ್ರಾವಸ್ಥೆಯಲ್ಲಿ ಜಾಗೃತಗೊಳ್ಳುವ ಸ್ವಪ್ನ ಪ್ರಪಂಚಗಳಾಗಿ ಕಾಣಸಿಗುತ್ತವೆ. 'ಚಿಗುರಿದ ಕನಸು' ಅವರ ಇತರ ಬರಹಗಳಂತೆ ಕನ್ನಡ ಜಿಲ್ಲೆಯ ಒಂದು ವಿಶಿಷ್ಟವಾದ ಚಿತ್ರಣವನ್ನು ಕೊಡುತ್ತದೆ. ಕಾರಂತರೇ ಮುನ್ನುಡಿಯಲ್ಲಿ ಹೇಳಿಕೊಂಡಿರುವಂತೆ "ಇದು 'ಅಸಾಧ್ಯ'ದ ಚಿತ್ರವಲ್ಲ; ನಿರಾಶೆಯ ಚಿತ್ರವಲ್ಲ, ಸಾಧ್ಯದ ಚಿತ್ರ–ತಕ್ಕ ಕಾಲ, ತಕ್ಕ ಸನ್ನಿವೇಶ, ತಕ್ಕ ವ್ಯಕ್ತಿ, ತಕ್ಕ ಸಾಹಸಗಳು ಕೂಡಿ ಒಂದಾಗಿ–ಒದಗಿ ಬರುವ ಒಂದು ಆಶಾದಾಯಕ ಪರಿಸ್ಥಿತಿಯನ್ನು ಚಿತ್ರಿಸಲು ಯತ್ನಿಸಿದ್ದೇನೆ." ಈ ಮೇಲಿನ ಮಾತುಗಳಲ್ಲಿ ಕಾರಂತರು ಈ ಕಾದಂಬರಿಯ ಆಶಯವನ್ನು ಸ್ಪಷ್ಟವಾಗಿ ಹೇಳುತ್ತಾರೆ ಮತ್ತು ಮೂಲ ಆಶಯಕ್ಕೆ ಚ್ಯುತಿ ಬಾರದ ರೀತಿಯಲ್ಲಿ ಕಾದಂಬರಿಯನ್ನು ಕಟ್ಟಿಕೊಟ್ಟಿದ್ದಾರೆ. ಮಾನವರು ಮನಸ್ಸು ಮಾಡಿದರೆ ಅಸಾಧ್ಯವನ್ನೂ ಸಾಧ್ಯ ಮಾಡಬಹುದೆಂಬ ದೃಢ ನಂಬಿಕೆಯನ್ನು ಸಾರುತ್ತಾರೆ. ಎಲ್ಲವೂ ಸಾಧ್ಯವಾಗುತ್ತದೆ; ಆದರೆ ಅದಕ್ಕಾಗಿ (ಸರಿಯಾದ ಸಮಯಕ್ಕಾಗಿ) ಕಾಯಬೇಕಷ್ಟೇ ಎಂಬ ತತ್ವವನ್ನೂ ಹೇಳುತ್ತಾರೆ.

1951ರಲ್ಲಿ ಪ್ರಕಟವಾದ ಕೃತಿಯು ಮೇಲ್ನೋಟಕ್ಕೆ ಎಲ್ಲಿಯೋ ಹುಟ್ಟಿ,

ಎಲ್ಲಿಯೋ ಬೆಳೆದ ಶಂಕರನೆಂಬ ಒಬ್ಬ ಯುವಕನ ಕಥೆಯಾಗಿ ಕಂಡರೂ ವಾಸ್ತವವಾಗಿ ತನಗೊಂದು 'ಹುಟ್ಟೂರಿಲ್ಲವಲ್ಲ' ಎನ್ನುವ ಹಸಿವು ಅವನಲ್ಲಿ ಮೊಳೆಯುವ ಪ್ರಕ್ರಿಯೆ ಇದಾಗಿದೆ. ಕಾಲದ ಸ್ಮೃತಿಪಟಲದೊಂದಿಗೆ ಕಳೆದುಹೋದ, ಕಡೆದುಹೋದ ತನ್ನ ಪೂರ್ವಜರ ಬೇರುಗಳನ್ನು ಹುಡುಕಿ, ಅವುಗಳನ್ನು ತಿಳಿಯಲೇಬೇಕೆನ್ನುವ ಕುತೂಹಲದ ಅದಮ್ಯ ಮತ್ತು ಅಚಲವಾದ ಆಸೆಯ ಕ್ಷಣಗಳು ಅವನೊಳಗಿನ ಕನಸುಗಳನ್ನೇ ಎಚ್ಚರಿಸುತ್ತವೆ. ಇಲ್ಲಿ ಶಂಕರ 'ವರ್ತಮಾನದ' ಸಂದರ್ಭದಲ್ಲಿ ತನ್ನ ಗತಿಸಿದ ನಿನ್ನೆಗಳನ್ನು ಹುಡುಕುತ್ತಾ ಅವುಗಳನ್ನು ತನ್ನ ಭವಿಷ್ಯದ ನಾಳೆಗಳಿಗೆ ಜೋಡಿಸುವ ಕ್ರಮದಲ್ಲಿಯೇ ಅವನ ಕನಸುಗಾರಿಕೆಯ ಪರಾಕಾಷ್ಠೆಯಿದೆ. ತನ್ನ ಅಮೂರ್ತ ಚಿಂತನೆಗಳಿಗೆ ಮೂರ್ತರೂಪ ಕೊಡುವ ಪ್ರಯತ್ನವೆಂಬಂತೆ ಕೃಷಿಯನ್ನೇ ಮಾಡಬೇಕೆಂಬ ದೃಢ ಸಂಕಲ್ಪಕ್ಕೆ ಬರುವುದು, ಬಂಜರು ಭೂಮಿಯೂ ಅವನ ಸೃಷ್ಟಿಶೀಲ ಹಟಕ್ಕೆ ಮತ್ತು ಪ್ರಯತ್ನಕ್ಕೆ ಸೋತು, ತನ್ನೊಡಲ ಫಲವತ್ತತೆಯನ್ನೂ, ಸತ್ವವನ್ನೂ ಬಿಟ್ಟುಕೊಡುವ ಸಾಧ್ಯತೆಗಳು ಕಾದಂಬರಿಯಲ್ಲಿ ಪ್ರತಿಮೆಗಳಾಗಿ ನಿಲ್ಲುತ್ತವೆ. ಇದು ಒಂದು ಹಂತದ ಕನಸಿನ ಸಾಕಾರತೆಯ ಸಾಧ್ಯತೆಯಾದರೆ, ಅವನು ಕಲ್ಪಿಸಿಕೊಂಡಂತಯೇ ವಾಸ್ತವದಲ್ಲೂ ಕಂಡುಕೊಳ್ಳುವ ಹಳೆಯ, ಮರೆವೆಗೆ ಸರಿದುಹೋದ ಸಂಬಂಧಗಳ ಮರುಜೋಡಣೆಯ ಕಾರ್ಯಗಳೂ ಸ್ಥಾನ ಪಡೆಯುತ್ತವೆ.

ಮುಂಬಯಿ ಅಥವಾ ದೆಹಲಿಯಂತಹ ದೊಡ್ಡ ಜನಸಂದಣಿಯ ನಗರಗಳನ್ನು ಹುಟ್ಟೂರೆಂದು ಒಪ್ಪಿ ಸಂತಸಗೊಳ್ಳಲಾರದ ಶಂಕರನ ಜೀವನ ಅವನಲ್ಲಿ 'ತಾನೆಲ್ಲಿಯವನು, ಎಲ್ಲಿದ್ದೇನೆ' ಎಂಬಂತಹ ತನ್ನ ಅಸ್ತಿತ್ವದ ಮೂಲವನ್ನು ಕಂಡುಕೊಳ್ಳುವ ನೆಲೆಯಲ್ಲಿ ಚಿಂತಿಸುವಂತೆ ಮಾಡುತ್ತದೆ. ಆದ್ದರಿಂದಲೇ ಶಂಕರ ಪ್ರಾರಂಭದಿಂದಲೂ ಅಂತರ್ಮುಖಿಯಾಗುತ್ತಾ ಸಾಗುತ್ತಾನೆ. ಆ ಧ್ಯಾನಸ್ಥ ಮನಸ್ಥಿತಿಯ ಏಕಾಗ್ರತೆಗೆ ಒಲಿಯುವ ನಿಯತಿಯೇ ಅವನಿಗೆ ತನ್ನ ಪೂರ್ವಜರ ಕೊಂಡಿಯಂತಿದ್ದ, ಕೊನೆಯ ಬೇರಿನಂತಿದ್ದ ಮುತ್ತತ್ತೆಯನ್ನು ತೋರಿಸಿಕೊಡುತ್ತದೆ. ಅಲ್ಲದೆ ತನ್ನ ಮುಂದಿನ ಪೂರ್ವನಿಯೋಜಿತ ಗುರಿ ಸಾಧಿಸಲು ಕಾರ್ಯಪ್ರವೃತ್ತನಾಗುವಂತೆ ಮಾಡುತ್ತದೆ. ಆ ದಾರಿಯಲ್ಲಿಯೂ ಆತ ತನ್ನ ಕನಸಿನ ಚಿಗುರನ್ನು ಕಂಡುಕೊಳ್ಳುವುದನ್ನು ಕಾಣಬಹುದಾಗಿದೆ. ಈ ಕಾದಂಬರಿಯ ಉದ್ದಕ್ಕೂ ಚಿಗುರುವ ಕನಸಿನ ಜೊತೆಗೆ ಅವಿಶ್ರಾಂತ ದುಡಿಮೆಯ ಕಥೆಯನ್ನೂ ಕಾಣಬಹುದಾಗಿದೆ. 'ಕನಸು ಚಿಗುರಿ ನನಸಾಗಬಹುದೆಂಬ ಅಭಯದ ಕಥೆಗೆ ಸಮನಾಂತರವಾಗಿ ಕಡಿದುಹೋದ ಹಳೆಯ ಮಾನವೀಯ ಸಂಬಂಧಗಳು ಚಿಗುರಿ ನಿಲ್ಲುವ ಕಥೆಯೂ ಆಗಿ ಬೆಳವಣಿಗೆಯನ್ನು ಹೊಂದುತ್ತದೆ'. ಪ್ರಮುಖವಾದ ಈ ಎರಡೂ ನೆಲೆಗಳಲ್ಲಿಯೂ ಕಾದಂಬರಿಯನ್ನು ಅವಲೋಕಿಸಬಹುದಾಗಿದೆ. ಈ ಎರಡೂ ನೆಲೆಗಳು ಸಾಧ್ಯತೆಯ ಸಂಕಲ್ಪದ ಜೊತೆಗೆ ಸಾಕಾರತೆಯ ಸ್ವರೂಪವನ್ನು ಒದಗಿಸಿಕೊಡುತ್ತವೆ.

ಕಾದಂಬರಿಯಲ್ಲಿ ಪ್ರಾರಂಭದಿಂದಲೂ ಲೇಖಕರ ಸಹಜ ಸೃಜನಶೀಲತೆ ಮತ್ತು ತಂತ್ರಗಾರಿಕೆಯ ಶೈಲಿಯನ್ನೂ ಕಾಣಬಹುದಾಗಿದೆ. ಅದು ವಸ್ತು ಮತ್ತು ಕಾದಂಬರಿಯ ವಿನ್ಯಾಸದ ಸ್ವರೂಪದಲ್ಲೂ ಕಾಣುತ್ತದೆ. ಮೂಲ ಕಥೆಗೆ ಪೂರಕವಾಗಿ ಬರುವ ಇನ್ನಿತರ ಕಥೆಗಳು, ಉಪಕಥೆಗಳು ಮೂಲಕಥೆಗೆ ಯಾವುದೇ ತೊಂದರೆಯನ್ನುಂಟುಮಾಡುವುದಿಲ್ಲ ಅಥವಾ ಕಾದಂಬರಿಯ ಮೂಲ ಆಶಯಕ್ಕೆ ಯಾವುದೇ ಧಕ್ಕೆಯನ್ನು ತರುವುದಿಲ್ಲ. ಇಲ್ಲಿ ಬರುವ ಉಪಕಥೆಗಳೆಲ್ಲವೂ ಕೂಡಾ ಮೂಲಕಥೆಯ ಮುಂದುವರಿಕೆಗೆ ಸಹಾಯಮಾಡುತ್ತವೆ. ಪ್ರಾರಂಭದಿಂದ ಕೊನೆಯವರೆಗೂ ಕಾದಂಬರಿಯು ಕಾರಂತರ ಎಂದಿನ ಶೈಲಿಯಂತೆ ಸಹಜತೆ ಮತ್ತು ಸರಳತೆಯನ್ನು ಹೊಂದಿದೆ.

ಕಾದಂಬರಿಯಲ್ಲಿ ಕಂಡು ಬರುವ ಎಲ್ಲಾ ಪಾತ್ರಗಳು ಮನುಷ್ಯರ ಮನೋಸಹಜವಾದ ಗುಣಗಳನ್ನು ಪ್ರತಿನಿಧಿಸುತ್ತವೆ. ಪಾತ್ರಗಳ ಪೋಷಣೆಯಲ್ಲಿ ಒಂದು ತೆರನಾದ ಪ್ರಜ್ಞಾಪೂರ್ವಕತೆಯಿದೆ. ಇಲ್ಲಿ ಬಂದಿರುವ ಎಲ್ಲಾ ಪಾತ್ರಗಳಲ್ಲಿಯೂ ಹೊಸ ಬಗೆಯ ಕನಸಿನ ಹಪಹಪಿಕೆಯಿದೆ. ಕನಸನ್ನು ನನಸಾಗಿಸಿಕೊಳ್ಳುವ ತವಕವಿದೆ. 'ಶಂಕರನ ತಂದೆ ಸುಂದರರಾಯರಿಗೆ ದೊಡ್ಡಹುದ್ದೆಗೆ ಏರಬೇಕೆನ್ನುವ ಕನಸು, ಮಂಜುನಾಥನಿಗೆ ವರಲಕ್ಷ್ಮಿಯನ್ನು ವರಿಸುವ ಕನಸು, ಮುತ್ತಯ್ಯ ಗೌಡರಿಗೆ ತನ್ನ ಧನಿಯರ ಮನೆಯ ಒಕ್ಕಲು ಭೂಮಿಯಲ್ಲಿ ಮತ್ತೆ ಬೆಳೆಯಬೇಕೆಂಬ ಆಸೆ ಮತ್ತು ಶಂಕರನನ್ನು ಕಂಡ ಮೇಲೆ ಇನ್ನೂ ಹತ್ತು ವರ್ಷ ಬಾಳಬೇಕೆಂಬ ಆಲೋಚನೆಯ ಆಶಾವಾದದ ಕನಸು, ಸೀತಾರಾಮನಿಗೆ ಒಳ್ಳೆಯ ಕೆಲಸಗಳಿಸಿಕೊಳ್ಳುವ ಆಗತ್ಯತೆಯ ಆಸೆ. ಅಜ್ಜಿಗೆ ಸಂಕರನೊಂದಿಗೆ ಮೂಲನೆಲದಲ್ಲಿ ಇರಬೇಕೆಂಬ ಆಸೆ. ಶ್ಯಾನುಭೋಗರಿಗೆ ಶಂಕರನಂತೆಯೇ ಅಥವಾ ಅವನಿಗಿಂತಲೂ ಉತ್ತಮವಾದ ಕೃಷಿ ಮಾಡಬೇಕೆನ್ನುವ ಆಸೆ, ಶ್ರೀಮತಿಗೆ ಶಂಕರನನ್ನು ವರಿಸುವ ಬಯಕೆಯ ಕನಸು. ಹೀಗೆ ಕಾದಂಬರಿಯುದ್ದಕ್ಕೂ ಎಲ್ಲಾ ಪಾತ್ರಗಳೂ ಕನಸು ಕಾಣುವುದನ್ನು ಕಾಣಬಹುದಾಗಿದೆ'. ಇವುಗಳಲ್ಲಿ ಕೆಲವು ಕನಸುಗಳು ಚಿಗುರೊಡೆದರೆ ಹೆಚ್ಚಿನವು ನನಸಾಗದೆ ಹಾಗೆಯೇ ಉಳಿಯುತ್ತವೆ. ಅಂತೆಯೇ ಇವರ ಆಸೆ- ಕನಸುಗಳೆಲ್ಲವೂ ಎಲ್ಲರಲ್ಲೂ ಇರುವಂಥಹ ಸಾಮಾನ್ಯವಾದ ಕನಸುಗಳಾಗಿವೆ ಎಂಬ ಕಾರಣಕ್ಕೊ ಏನೋ ಕಾರಂತರು ಇವರ ಕನಸುಗಳ ಚಿಗುರುವಿಕೆಗೆ ಹೆಚ್ಚಿನ ಪ್ರಾಧಾನ್ಯವನ್ನು ಕೊಟ್ಟಿಲ್ಲವೆಂದೇ ಹೇಳಬಹುದು. ಅಂತೆಯೇ 'ಚಿಗುರಿನ ಕನಸು' ನಿಜಾರ್ಥದಲ್ಲಿ ಶಂಕರನ ಅಥವಾ ಶಂಕರನಂಥವರ ಕನಸಿನ ಚಿಗುರುವಿಕೆಯಾಗಿದೆ. ಅಲ್ಲದೆ ಶಂಕರನ ಕನಸುಗಳು ಕೂಡ ಇತರ ಪಾತ್ರಗಳ ಕನಸಿಗೆ ಹೋಲಿಸಿದರೆ ವಿಶೇಷತೆಯನ್ನು, ವೈಶಿಷ್ಟ್ಯವನ್ನು ಮತ್ತು ವಿಭಿನ್ನತೆಯನ್ನು ಒಳಗೊಂಡಿದೆ ಎಂದೇ ಹೇಳಬಹುದು. ಈ ಕಾದಂಬರಿಯ ಕೇಂದ್ರ ಆಶಯವೂ ಅದೇ ಆಗಿದೆ. ಇದಕ್ಕೆ ಕಾರಂತರ ದೇಶಪ್ರೇಮ, ಕೃಷಿಯ ಬಗೆಗಿನ ಪ್ರಾಮಾಣಿಕ ಕಾಳಜಿ, ಗ್ರಾಮೀಣ ಕಳಕಳಿ ಮತ್ತು ಮೇಲಾಗಿ ವಿಭಜಿತ ಕುಟುಂಬ ವ್ಯವಸ್ಥೆಯ ಬಗೆಗಿನ ಬೇಸರವೂ ಕಾರಣ ವಿರಬಹುದು.

ಪ್ರಾರಂಭದಿಂದಲೂ ಶಂಕರನ ಪಾತ್ರದಲ್ಲಿ ಏನೋ ಒಂದು ನಿರಾಸೆ, ಅತೃಪ್ತಿಯನ್ನು ಗುರುತಿಸಬಹುದು. ಅಲ್ಲದೇ ತಂದೆ-ತಾಯಿಯರು ಆತನ ಬಗೆಗೆ ತೋರಿದ ಅನಾದಾರ ಆತನನ್ನೂ ಅಂತರ್ಮುಖಿಯನ್ನಾಗಿಸುತ್ತದೆ. ದೆಹಲಿಯಂತಹ (ಆಧುನಿಕ ಜನರು ಬಯಸುವ) ಊರಿಗೆ ಒಗ್ಗಿಕೊಳ್ಳದಂತಹ ಮನೋಭಾವದ ಚಿತ್ರಣವಾಗಿದೆ. ಮುಂದೆ ಶಂಕರನ ಪಾತ್ರವು 'ಬುದ್ಧಿ-ಭಾವಗಳ ಸಮತೋಲನ ಸಾಧಿಸಿದ ವ್ಯಕ್ತಿತ್ವವಾಗಿದೆ. ಮಿದುವಾಗಬಲ್ಲ, ಹಿಗ್ಗಬಲ್ಲ ಗುಣವು ಹೇಗೋ ಹಾಗೆಯೇ ವಿವೇಕವನ್ನು ಹೊಂದಿರುವುದನ್ನೂ ಕಾಣಬಹುದಾಗಿದೆ. ಬದುಕಿನ ಅರ್ಥಪೂರ್ಣತೆಯನ್ನು ಕಂಡುಕೊಳ್ಳುವ ನೆಲೆಯಲ್ಲಿ ಸಮಷ್ಟಿಯ ದುಡಿಮೆಯ ಹಾದಿಯಲ್ಲಿ ಸಾಗುವ, ಸ್ವಾವಲಂಬಿ ಬದುಕಿನ ಕಡೆಗಿನ ತುಡಿತವನ್ನೂ ಕಾಣಬಹುದಾಗಿದೆ. ಆತನ ಮನಸ್ಸು ನೌಕರಿಗೆ ಜೋತುಬೀಳದೆ ಎಲ್ಲಾದರೊಂದು ಕಡೆ ನೆಲದ ಮಗುವಾಗಿ ಸ್ವತಂತ್ರವಾಗಿ ಬಾಳಬೇಕೆಂಬುದು ಶಂಕರನ ಒಟ್ಟಾರೆ ಕನಸಾಗಿದೆ.'. ಒಂದರ್ಥದಲ್ಲಿ ಕಾರಂತರ ಧೋರಣೆಯೂ, ಕನಸೂ ಇದೇ ತೆರನಾದದ್ದು ಎಂದರೆ ತಪ್ಪಾಗುವುದಿಲ್ಲ. ಆವರ ಅಲೋಚನೆಗಳಿಗೆ, ಕನಸುಗಳಿಗೆ, ಚಿಂತನೆಗಳಿಗೆ ಶಂಕರ ಒಂದು ಮಾಧ್ಯಮವಾಗಿದ್ದಾನೆ ಎಂದೂ ಹೇಳಬಹುದಾಗಿದೆ. ಶಂಕರನ ವ್ಯಕ್ತಿತ್ವದ ಪಾತ್ರದ ಸಂಕೀರ್ಣತೆಯು ನೆಲೆಯುನ್ನು ಕಾದಂಬರಿಯು ಉದ್ದಗಲಕ್ಕೂ ಕಾಣಬಹುದಾಗಿದೆ. ಶಂಕರನ ಪಾತ್ರದಂತೆಯೇ ಉಳಿದ ಪಾತ್ರಗಳು ಸಮರ್ಥವಾಗಿ

ಮೂಡಿಬಂದಿದ್ದು ಕಥೆ ಹೇಳುವ ಕಲೆಗಾರಿಕೆಗೆ ಹಿಡಿದ ಕೈಗನ್ನಡಿಯಾಗಿದೆ. ಹೀಗೆ ಕೃಷಿ ಜೀವನದ ಚಿತ್ರಣವನ್ನೇ ಪ್ರಧಾನ ವಸ್ತುವಾಗಿಸಿಕೊಂಡ ಕಾದಂಬರಿಯು ಪ್ರಜ್ಞಾಪೂರ್ವಕ ತಂತ್ರ, ಸಂದರ್ಭಕ್ಕಾನುಸಾರವಾಗಿ ಸಾಗುವ ಸಹಜ ಲಯಬದ್ಧ ಕಥೆ, ಪಾತ್ರಗಳ ಬೆಳವಣಿಗೆಗಳಿಂದಾಗಿ ತಾಂತ್ರಿಕವಾಗಿಯೂ, ವಿನ್ಯಾಸದ ದೃಷ್ಠಿಯಿಂದಲೂ ಮಹತ್ವಪೂರ್ಣವಾಗಿದೆ ಎನ್ನಬಹುದು.

**ಪ್ರಸ್ತುತತೆ**

ಶಿವರಾಮ ಕಾರಂತರ ಕಾದಂಬರಿಗಳು ವಾಸ್ತವತೆಯ ನೆಲೆಗಟ್ಟಿನಲ್ಲಿ ರಚಿತವಾಗಿವೆ. ಅವುಗಳು ವರ್ತಮಾನದೊಂದಿಗೆ ಸಂವಹನ ನಡೆಸುತ್ತವೆ. ಚೋಮನ ದುಡಿ, ಅಳಿದ ಮೇಲೆ, ಬೆಟ್ಟದ ಜೀವ, ಮೈಮನಗಳ ಸುಳಿಯಲ್ಲಿ ಇತ್ಯಾದಿ ಕಾದಂಬರಿಗಳು ಇದಕ್ಕೆ ಉತ್ತಮ ಸಾಕ್ಷಿಯಾಗಿವೆ. ಅದೇ ಸಾಲಿನಲ್ಲಿ 'ಚಿಗುರಿದ ಕನಸು' ಕಾದಂಬರಿಯೂ ನಿಲ್ಲುತ್ತವೆ. ಇಲ್ಲಿ ದಕ್ಷಿಣಕನ್ನಡದ ಒಂದು ನಿರ್ದಿಷ್ಟ ಪರಿಸರದ ಕುರಿತಾಗಿ ಹೇಳುತ್ತಿದ್ದರೂ ಅದಕ್ಕೆ ಅದಕ್ಕಷ್ಟೇ ಸೀಮಿತವಾಗುವುದಿಲ್ಲ. ಬದಲಾಗಿ ಅದು ಇಡೀ ಮಾನವ ಜೀವನಕ್ಕೆ ಸಂಬಂಧಿಸಿದ್ದಾಗಿದೆ. ಕೃಷಿ ಪದ್ಧತಿ, ಗ್ರಾಮೀಣ ಪರಿಸರ, ಅಸಾಧ್ಯತೆಯ ಸಾಧ್ಯತೆಗಳ ಬಗೆಗೆ, ಮನುಷ್ಯರ ಪೂರ್ವಾಪರಗಳ ಬಗೆಗೆ, ಕನಸುಗಳ ಸಾಕಾರಿಕೆಯಂತಹ ಸಾರ್ವಕಾಲಿಕ ಮೌಲ್ಯಗಳನ್ನು ಪ್ರತಿಪಾದಿಸುತ್ತದೆ. ಮನುಷ್ಯ ಸ್ವಭಾವ–ಕನಸುಗಾರಿಕೆ ಇಡೀ ಮಾನವ ಕುಲಕ್ಕೆ ಸಂಬಂಧಿಸಿದುದಾಗಿದೆ. ಹಾಗೆಯೇ ಬಂಗಾಡಿ ಯೆಂಬ ಹಳ್ಳಿಯನ್ನು ಸಾಂಕೇತಿಕವಾಗಿ ಬಳಸಲಾಗಿದೆ. ಅಂತಹ ಅನೇಕಾನೇಕ ಹಳ್ಳಿಗಳನ್ನು ಈ ಹಳ್ಳಿ ನೆನಪಿಸುತ್ತದೆ. ಈ ಕಾದಂಬರಿಯಲ್ಲಿ ಬರುವ ಪ್ರತಿಯೊಂದು ಪಾತ್ರಗಳು, ಸನ್ನಿವೇಶಗಳು, ಸಂದರ್ಭಗಳು ಪ್ರಸ್ತುತ ಸಂದರ್ಭಗಳಿಗೆ ಹತ್ತಿರವಾಗಿ ನಿಲ್ಲುತ್ತವೆ. ಕಾದಂಬರಿ ಓದುತ್ತಾ ಸಾಗಿದಂತೆ ಈ ಹೊತ್ತಿನ ಹಲವಾರು ವಿಚಾರಗಳು ಕಾಲಕ್ಕೂ ಕಾದಂಬರಿಗೆ ಸಮಕಾಲೀನವೆಂಬಂತೆ ಭಾಸವಾಗುತ್ತದೆ. ಕಾರಂತರು ಕಾದಂಬರಿ ಬರೆಯುವ ಕಾಲಕ್ಕೂ (1951), ಇವತ್ತಿನ ಸಂದರ್ಭಕ್ಕೂ ಅರ್ಧ ಶತಮಾನದ ಅಂತರವಿದ್ದರೂ ಮನುಷ್ಯ ಸ್ವಭಾವದ ನೆಲೆಯಿಂದ, ಸಾಮಾಜಿಕ ಬದುಕಿನ ಹಿನ್ನೆಲೆಯಿಂದ ಮತ್ತು ಗ್ರಾಮೀಣ ಕೃಷಿ ಬದುಕಿನ ನೆಲೆಯ ಅವರ ಸಮಸ್ಯೆ–ಸವಾಲುಗಳ ನೆಲೆಯಿಂದ ಈ ಕಾದಂಬರಿಯು ಇಂದಿಗೂ ಪ್ರಸ್ತುತವಾಗಿದೆ.

ಕಾರಂತರು ಈ ಕಾದಂಬರಿ ಬರೆಯುವ ಹೊತ್ತಿಗೆ ಭಾರತ ಇಷ್ಟು ಮುಂದುವರೆದಿರಲಿಲ್ಲ. ಜಾಗತೀಕರಣ, ಆಧುನೀಕರಣ, ಉದಾರೀಕರಣ, ಪಾಶ್ಚಾತ್ಯೀಕರಣದಂತಹ ಸಮಸ್ಯೆಗಳು ಆ ಹೊತ್ತಿನಲ್ಲಿ ಕೃಷಿಕರನ್ನು ಅಷ್ಟಾಗಿ ಕಾಡುತ್ತಿರಲಿಲ್ಲ ಅಥವಾ ಇಂದಿನಷ್ಟು ಗಂಭೀರವಾಗಿರಲಿಲ್ಲ ವೆನ್ನಬಹುದು. ಇಂದು ಭಾರತ ಹಲವಾರು ಕ್ಷೇತ್ರಗಳಲ್ಲಿನ ಪ್ರಗತಿಯನ್ನು ಸಾಧಿಸುತ್ತಿದೆ. ವಿಜ್ಞಾನ, ಕೃಷಿ, ಸಾಮಾಜಿಕ ಕ್ಷೇತ್ರಗಳಲ್ಲಿ ಸಾಧನೆಗಳು ಹೊಸ ಹೊಸ ತಂತ್ರಜ್ಞಾನಗಳು ಅಂದಿನ ಕಾಲದಲ್ಲಿರಲಿಲ್ಲ. ಈ ನೆಲೆಯಲ್ಲಿ ಕಾಲಗಳ ಅಂತರವನ್ನು ಕಾಣಬಹುದೇ ಹೊರತು ರೈತಾಪಿ ವರ್ಗದ, ಕೃಷಿ ಪದ್ಧತಿಯ ಸಮಸ್ಯೆಗಳ–ಸಾಧ್ಯತೆಗಳ ಚಿತ್ರಣವನ್ನು ಇಂದಿಗೂ ಪ್ರಸ್ತುತವೆನಿಸುವಷ್ಟರ ಮಟ್ಟಿಗೆ ನೀಡಿದ್ದಾರೆ. ಹಾಗೂ ಆ ಕಾಲದಲ್ಲೇ ವಿದ್ಯುತ್ ಪಂಪಿನ ತಯಾರಿಕೆ, ನೀರಿನಿಂದ ವಿದ್ಯುತ್ ಅನ್ನು ಉತ್ಪಾದಿಸುವಿಕೆ, ಕಾಡಿನ ವನ್ಯ ಜೀವಿಗಳಿಂದ ರಕ್ಷಿಸಿಕೊಳ್ಳಲು ಆಧುನಿಕ ವಿಧಾನಗಳ ಬಳಕೆ, ರೋಗ–ರುಜಿನಗಳು ಬರದಂತೆ ತಡೆಗಟ್ಟಲು ಇರುವ ಆಧುನಿಕ ವಿಧಾನಗಳ ಬಗೆಗೆ, ಮಣ್ಣಿನ ಫಲವತ್ತತೆಯನ್ನು ಕಾಪಾಡಿಕೊಳ್ಳುವ ಬಗೆಗೆ, ಆ ಹೊತ್ತಿನಲ್ಲೇ ರೈತರು–ಕೃಷಿಕರು (ಹಳ್ಳಿಯ ಜನರು) ನಗರದತ್ತ ಮುಖಮಾಡಿದ್ದರ, ಮಾಡುತ್ತಿರುವುದರ ಬಗ್ಗೆಯೂ, ವಿಘಟಿತಗೊಳ್ಳುತ್ತಿರುವ ಕುಟುಂಬ ವ್ಯವಸ್ಥೆಯ ಬಗೆಗೂ ಸ್ಥೂಲವಾಗಿ ಚರ್ಚಿಸಿದೆ. ಇಂದಿಗೂ

ಇದೇ ರೀತಿಯ ಸಮಸ್ಯೆಗಳು ನಮ್ಮ ಮುಂದಿವೆ. ಅವುಗಳಿಗೆಲ್ಲಾ ಸೂಕ್ತ ಪರಿಹಾರ ಕಂಡುಕೊಳ್ಳುವ ಅಗತ್ಯತೆಯೂ ನಮ್ಮ ಮೇಲಿದೆ. ಆ ನೆಲೆಯಲ್ಲೂ ಕಾದಂಬರಿ ಪ್ರಸ್ತುತವೆನಿಸುತ್ತದೆ.

ಆಧುನಿಕ ಜಗತ್ತಿನಲ್ಲಿ ಜನರು ತಮ್ಮ ಮೂಲ ನೆಲೆಗಳನ್ನು ಕಳೆದುಕೊಂಡಿದ್ದಾರೆ ಅಥವಾ ತಮ್ಮ ಮೂಲ ನೆಲೆಗಳ ಬಗೆಗೆ, ಸಂಬಂಧಗಳ ಬಗೆಗೆ ಏನೂ ತಿಳಿಯದವರಾಗಿದ್ದಾರೆ. ತಮ್ಮ ಮೂಲವನ್ನು ಅರಿಯದೆ ಪ್ರಸ್ತುತ ಪರಿಸ್ಥಿತಿಯನ್ನೇ ವಾಸ್ತವ ಎಂದು ನಂಬಿದ್ದಾರೆ. ಇದು ವಿಘಟಿತ ಕುಟುಂಬ ವ್ಯವಸ್ಥೆಯ ಫಲವೂ ಹೌದು. ಪ್ರತಿಯೊಬ್ಬರಿಗೂ ಒಂದು ಹಂತದಲ್ಲಿ ತಮ್ಮ ಮೂಲವನ್ನು ಕಂಡುಕೊಳ್ಳುವ ಆಸೆಯಿರುತ್ತದೆ. ಶಂಕರನಂಥವರು ಅದನ್ನು ಸಾಕಾರ ಗೊಳಿಸುವ ಪ್ರಯತ್ನ ಮಾಡುತ್ತಾರೆ. ಇನ್ನೂ ಅನೇಕರಿಗೆ ಅದು ಸಾಧ್ಯವಾಗುವುದಿಲ್ಲ. ಈ ಕಾಲದ ಪರಿಸ್ಥಿತಿಯೂ ಅದೇ ಆಗಿದೆ. ಹಲವರ ಬಳಿ ಆಸ್ತಿ, ಸಂಪತ್ತು, ಐಶ್ವರ್ಯ ಎಲ್ಲವೂ ಇದೆ. ಆದರೆ ಅದನ್ನು ಹಂಚಿಕೊಳ್ಳಲು ತುಂಬು ಕುಟುಂಬವೇ ಇಲ್ಲವಾಗಿದೆ. ಇಲ್ಲದವರೊಂದಿಗೆ ಉಳ್ಳವರು ಹಂಚಿಕೊಳ್ಳುವುದಿಲ್ಲ. ಒಟ್ಟಿನಲ್ಲಿ ನೆಮ್ಮದಿಯೇ ಇಲ್ಲವಾಗಿದೆ. ಈ ಬಗೆಗೂ ಕಾದಂಬರಿ ಸೂಕ್ಷ್ಮವಾಗಿ ಬೆಳಕುಚೆಲ್ಲುತ್ತದೆ.

ಇನ್ನು ವಿದ್ಯಾವಂತರಾದ ಅನೇಕರು ಉದ್ಯೋಗವನ್ನರಸಿ ನಗರಗಳಿಗೆ ಬಂದು ಅಲ್ಲೇ ಶಾಶ್ವತವಾಗಿ ನೆಲೆಯೂರುತ್ತಾರೆ ಮತ್ತು ತಮ್ಮ ಮೂಲ ಊರು, ನೆಲೆಗಳನ್ನು ಮರೆತುಬಿಡುತ್ತಾರೆ. ಇದು ಅಂದೂ ಇತ್ತು, ಆದರೆ ಇಂದು ಅದನ್ನು ಹೆಚ್ಚು ಸ್ಪಷ್ಟವಾಗಿ ಕಾಣಬಹುದಾಗಿದೆ. ಯಾರಿಗೂ ತಾವು ಹುಟ್ಟಿ ಬೆಳೆದ, ಹಾಡಿ ನಲಿದ, ಬದುಕಿನ ಮಧುರ ಕ್ಷಣಗಳನ್ನು ಕಳೆದ ಹುಟ್ಟೂರೇ ಬೇಡವಾಗಿದೆ. ತನ್ನ ಸ್ವಂತದ ಊರಿನ ಬಗೆಗಿರುವ ಮೋಹ, ಊರನ್ನು ಕಾಣುವ ಆಸೆ ಶಂಕರ ನಿಗಿರುವ ತವಕವನ್ನು ಆತ ಸೀತಾರಾಮನೊಂದಿಗೆ ಆಡಿದ ಮಾತುಗಳಲ್ಲಿ ಗುರುತಿಸ ಬಹುದಾಗಿದೆ. "... ನಿಜವನ್ನು ಹೇಳುವುದಾದರೆ ನನಗೆ ಬಹುದಿನಗಳಿಂದ ಒಂದು ನೋವು ಬಂದಿದೆ. ಊರೇ ಇಲ್ಲದ ಪರದೇಶಿಯಂತಿದ್ದೆನಲ್ಲ ನಾನು! ದೆಹಲಿ ನನ್ನೂರಾಗಬಲ್ಲುದೇ ಇಲ್ಲವೆ ಕಾಶಿ ಆಗಬಲ್ಲುದೇ ಎಂಬ ಅನುಮಾನ ಉಂಟಾಗುತ್ತದೆ. ನಿನ್ನಲ್ಲಿ ಊರಿನ ಒಂದು ಮೋಹ ಕಾಣುತ್ತೇನೆ. ನನಗೂ ನನ್ನದೊಂದು ಊರು ಇರಲಾರದೇ – ಎಂಬ ಆಸೆಯಾದರೂ, ದಹಲಿ ಅದಲ್ಲ ಎನ್ನುತ್ತದೆ ಮನಸ್ಸು...''

ಇಲ್ಲೆಲ್ಲಾ ಆತನಿಗೆ ತನ್ನ ಮೂಲ ನೆಲೆಯನ್ನು ಕಂಡುಕೊಳ್ಳುವ ಆಸೆಯಿದೆ. ತುಡಿತವಿದೆ. ಆ ಹಿರಿಯ ಆಸೆ ಅವನನ್ನು ಹುಟ್ಟೂರಿನತ್ತ ಸೆಳೆಯುತ್ತದೆ. 'ಬಂಗಾಡಿಯೆಂಬ' ಊರು ನಮ್ಮ ಜಿಲ್ಲೆಯಲ್ಲೇ ಇರಬಹುದೆಂಬ ಸೀತಾರಾಮನ ಮಾತುಗಳಿಗೆ ಪ್ರತಿಯಾಗಿ ಶಂಕರನ ಆಡುವ ಮಾತುಗಳು ಆತನ ಕನಸು ಚಿಗುರುವಿಕೆಯ ಪ್ರಕ್ರಿಯೆಗೆ ಚಾಲನೆಯಿಟ್ಟಂತಾಗುತ್ತದೆ. "ತನಗೂ ಒಂದು ಹುಟ್ಟೂರಿದೆ. ತನ್ನ ಹಿರಿಯರು ಹುಟ್ಟಿ ಬೆಳೆದು, ನಲಿದು ನಲಿದು ಮಣ್ಣುಗೂಡಿದ ತಾವು, ತನ್ನ ಕುಲಕ್ಕೆ, ರಕ್ತಮಾಂಸಗಳ ಅಸ್ತಿತ್ವವನ್ನು ತಂದುಕೊಟ್ಟ, ಕಾಳುಕಡ್ಡಿಗಳಿಂದ ಪೋಷಿಸಿ ಬಣ್ಣದ ಬೆಡಗುಗಳಿಂದ ರಂಜಿಸಿ ಜೀವನವನ್ನು ಅರಳಿಸಿ, ಬದುಕನ್ನು ಬೆಳಗಿಸಿದ ಊರು... ಆ ಹಳ್ಳಿ ಎಂಥದೇ ಇರಲಿ, ಅದು ನನ್ನನ್ನು... ಆ ನೆಲವನ್ನು ತಾನು ಕಾಣಬೇಕು'' ಎಂಬ ಮಾತುಗಳಲ್ಲಿ ಶಂಕರನ ಆಸೆಯ ಸ್ವರೂಪ, ತನ್ನ ಹುಟ್ಟೂರನ್ನು ಕಂಡುಕೊಳ್ಳುವ ಆಸೆಯ ಕನಸಿನ ಚಿಗುರುವಿಕೆಯನ್ನು ಕಾಣಬಹುದಾಗಿದೆ.

ಮುಖ್ಯವಾಗಿ ಕೃಷಿಕರು ನಗರಗಳಿಗೆ ವಲಸೆ ಹೋಗಲು ಎರಡು ಕಾರಣಗಳನ್ನು ಗುರುತಿಸಬಹುದಾಗಿದೆ. ಮೊದಲನೆಯದು ಕೃಷಿಕರ ಮೂಲಭೂತವಾದ ಕಾರಣಗಳು ಅಂದರೆ, ಬೆಳೆಗಳು ಸರಿಯಾಗಿ ಕೈ ಸೇರದ ಸಮಸ್ಯೆ, ಬೆಳೆಗಳಿಗೆ ಸರಿಯಾಗಿ ದೊರಕದ ಬೆಲೆ,

ವಿದ್ಯುತ್ ಅಭಾವ, ಕೃಷಿ ಕೆಲಸಕ್ಕೆ ಸರಿಯಾಗಿ ಜನರು ಸಿಗದ ಸಮಸ್ಯೆಗಳು, ಮಳೆಯ ಅಭಾವ ಅಥವಾ ಹೆಚ್ಚಳ, ರೋಗ ರುಜಿನಗಳು ಇತ್ಯಾದಿ. ಎರಡನೆಯದಾಗಿ ಕೃಷಿಯ-ಕೃಷಿಕರ ಬಗೆಗೆ ಸರ್ಕಾರಗಳು ತಳೆದಿರುವ ನಿಲುವುಗಳು ಎಷ್ಟೋ ಬಾರಿ ಸರ್ಕಾರದ ಯೋಜನೆಗಳು ಕೃಷಿಕರಿಗೆ ಸಮರ್ಪಕವಾಗಿ ತಲುಪುವುದೇ ಇಲ್ಲ. ವೈಯಕ್ತಿಕ ಸ್ವಾರ್ಥಗಳಿಗಾಗಿಯೋ ಅಥವಾ ಅಭಿವೃದ್ಧಿಯ ಹೆಸರಿನಲ್ಲಿಯೋ ಕೃಷಿ ಭೂಮಿಗಳ ಒತ್ತುವರಿ ಪ್ರಕ್ರಿಯೆಗಳು, ಬಡಾವಣೆಗಳಿಗಾಗಿಯೋ, ಮಾಲ್‌ಗಳಿಗಗಾಗಿಯೋ ಅಥವಾ ಅಭಿವೃದ್ಧಿ ಹೆಸರಿನಲ್ಲಿ ಬಲವಂತವಾಗಿ ಜಮೀನುಗಳನ್ನು ರೈತರಿಂದ ಪಡೆದುಕೊಳ್ಳುತ್ತದೆ. ಆಗ ಅವರು ನಿರಾಶ್ರಿತರಾಗಬೇಕಾಗುತ್ತದೆ ಮತ್ತು ನಗರದತ್ತ ವಲಸೆ ಹೊರಡಬೇಕಾಗುತ್ತದೆ. ಇವು ಇಂದಿನ ಸಮಸ್ಯೆಗಳಾಗಿರುವುದರಿಂದ ಕಾದಂಬರಿಯಲ್ಲಿ ಇವುಗಳಿಗೆ ಯಾವುದೇ ಸ್ಥಾನವಿಲ್ಲ. ಆದರೆ ಮೊದಲನೆಯ ಅಂಶಕ್ಕೆ ಕಾದಂಬರಿಯಲ್ಲಿ 'ಸ್ವಯಂಸಿದ್ಧಿ'ಯ ಮೂಲಕವೇ ಎಲ್ಲಾ ಸಮಸ್ಯೆಗಳ ಪರಿಹಾರ ಸಾಧ್ಯ ಎಂಬುದನ್ನು ಹೇಳುತ್ತದೆ. ಮನುಷ್ಯ ಮನಸ್ಸು ಮಾಡಿದರೆ ಏನನ್ನೂ ಮಾಡಬಲ್ಲ ಎಂಬುದನ್ನು ಶಂಕರನ ಪಾತ್ರದ ಮೂಲಕ ತೋರಿಸಿಕೊಟ್ಟಿದ್ದಾರೆ. ಎಲ್ಲಾ ಸಂದರ್ಭಗಳಲ್ಲೂ ಇದು ಸಾಧ್ಯವಾಗುವುದಿಲ್ಲವಾದರೂ ಕೆಲವಾರು ಸಂದರ್ಭಗಳಲ್ಲಿ ಇಂತಹ ಧೋರಣೆಗಳೇ ರೈತರಿಗೆ ಶ್ರೀರಕ್ಷೆಯಾಗುತ್ತವೆ ಎಂಬುದಂತೂ ಸುಳ್ಳಲ್ಲ. ವಿದ್ಯುತ್ ತಯಾರಿಕೆ, ಪ್ರಾಣಿಗಳಿಂದ ರಕ್ಷಣೆ ಪಡೆಯುವಿಕೆ, ಭೂಮಿಯ ಫಲವತ್ತತೆಯನ್ನು ಕಾಪಾಡುವ ಬಗೆ ಇತ್ಯಾದಿಗಳ ಬಗೆಗೆ ಬಹಳ ಸೂಚ್ಯವಾಗಿ ಕಾದಂಬರಿಯು ದೃಷ್ಟಿಹರಿಸಿದೆ ಎಂದೇ ಹೇಳಬಹುದು.

ಶಿಕ್ಷಣದ ಉದ್ದೇಶದಿಂದ ನಗರಕ್ಕೆ ತೆರಳಿದ ವಿದ್ಯಾವಂತರು ಮತ್ತೆ ಹಳ್ಳಿಗಳಿಗೆ ಮರಳಬೇಕು. ಆ ಮೂಲಕ ಹಳ್ಳಿಗಳ ಪ್ರಗತಿಗೆ ಶ್ರಮಿಸಬೇಕು ಎಂಬ ಸಾರ್ವಕಾಲಿಕ ಸತ್ಯದ ಮಾತು ಕಾದಂಬರಿಯಲ್ಲಿ ಶಂಕರನ ಮಾತಿನ ಮೂಲಕ ಬರುತ್ತದೆ. ಸೀತಾರಾಮನಿಗೆ ಹಳ್ಳಿಗೆ ಮರಳುವಂತೆ ಹೇಳುವ ಮಾತುಗಳು ಹೀಗಿವೆ "ಇಷ್ಟೆಲ್ಲ ಸೃಷ್ಟಿಯ ಅನುಕೂಲತೆಗಳು ಸುತ್ತಲಿರುವಾಗ ನಮ್ಮ ಜನ ಇದಕ್ಕಿಂತ ಸುಖವಾಗಿ ಬಾಳಲಾರರೆ? ನೆಟ್ಟಲ್ಲಿ ಗಿಡ ಚಿಗುರುತ್ತದೆ. ಎಲ್ಲಿ ಕಂಡರಲ್ಲಿ ತೊರೆಗಳು ಹರಿಯುತ್ತವೆ. ಬೇಕಷ್ಟು ಕಾಡಿದೆ ಜನ ಜಾಗೃತಗೊಂಡರೆ ಇದನ್ನೇ ನಂದನವನವನ್ನಾಗಿ ಮಾಡಲಾರರೇ? ಇದು ಒಬ್ಬೊರಿಂದಾಗಲಾರದ ಕೆಲಸ ನಿಜ. ಏನೂ ಅರಿಯದ ಜನಗಳು ಕೈಗೊಳ್ಳುವ ಕೆಲಸವಲ್ಲ. ಆದರೆ ನನ್ನ-ನಿನ್ನಂತಹ ಓದಿದವರು, ಬಲ್ಲವರು, ಕನಸುಗಾರರು ಇಂಥ ಸ್ಥಳಗಳನ್ನು ಬಿಟ್ಟು ಓಡಿ ಹೋದರೆ, ನೌಕರಿಗಾಗಿ ಹಾತೊರೆದರೆ ಇವರ ಶ್ರೇಯಸ್ಸನ್ನೆಣಿಸುವವರಾರು?" ಎಂಬಂತಹ ಮಾತುಗಳಲ್ಲಿ ವಿದ್ಯಾವಂತರು ಮರಳಿ ತಮ್ಮ ಹುಟ್ಟೂರಿಗೆ ತೆರಳಿಹುಟ್ಟೂರನ್ನು (ಹುಟ್ಟಿದ ಹಳ್ಳಿಯನ್ನು) ಸರ್ವಾಂಗೀಣವಾಗಿ ಅಭಿವೃದ್ಧಿಪಡಿಸಬೇಕೆಂಬ ಮಹಾದಾಸೆಯ ಆಶಯವನ್ನು ಕಾಣಬಹುದಾಗಿದೆ.

ಪ್ರಸ್ತುತ ಸಂದರ್ಭದಲ್ಲಿ ಕೇವಲ ಆಧುನೀಕತೆಯನ್ನು ಜರೆಯುವುದಷ್ಟೇ ಅಲ್ಲ ಅದನ್ನು ಸಮರ್ಥವಾಗಿ ಹೇಗೆ ಬಳಸಿಕೊಳ್ಳಬೇಕೆಂಬ ಸೋದಾಹರಣೆಯನ್ನು ಕಾದಂಬರಿಯಲ್ಲಿ ಕಾಣಬಹುದಾಗಿದೆ. ಆಧುನೀಕತೆಯ ಪ್ರಭಾವದಿಂದಲೇ ಪಂಪ್ ಅನ್ನು, ವಿದ್ಯುತ್ತನ್ನು, ಡಿ.ಡಿ.ಟಿಯಂತಹ ಕ್ರಿಮಿನಾಶಕಗಳನ್ನು ಶಂಕರ ಯಶಸ್ವಿಯಾಗಿ ಬಳಸಿಕೊಳ್ಳಲು ಸಾಧ್ಯವಾಯಿತು. ಇಂದು ಅದಕ್ಕೂ ಮಿಗಿಲಾದ ಆಧುನಿಕ ಸರಕು-ಸಲಕರಣೆಗಳು ಬಂದಿವೆ ಅವನ್ನು ಸಮರ್ಥವಾಗಿ ಉಪಯೋಗಿಸಿಕೊಳ್ಳಬೇಕಷ್ಟೆ.

ಇನ್ನು ಕಾದಂಬರಿಯಲ್ಲಿ ಬರುವ ಶಂಕರನ 'ಯಶೋಗಾಥೆ' ಕೇವಲ ಕಾದಂಬರಿಯಲ್ಲಿ ಮಾತ್ರ ಬರಬಹುದಾದ ಪಾತ್ರದ ಕಾಲ್ಪನಿಕ ಚಿತ್ರಣವಲ್ಲ. ಬದಲಾಗಿ ನಮ್ಮ ಸಮಾಜದಲ್ಲಿ ವಿರಳವಾಗಿ ಕಾಣಸಿಗುವ ಪಾತ್ರ ಚಿತ್ರಣವಾಗಿದೆ. ಅಂತಯೇ ಸಾಧಿಸಿದರೆ ಅಸಾಧ್ಯವನ್ನೂ

ಸಾಧ್ಯಗೊಳಿಸುವ ಧೋರಣೆಯ ಬಗೆಗೆ ಶಂಕರನಿಗೆ ಅನ್ನಿಸುವ, ಪ್ರೇರಣಾತ್ಮಕ ಮಾತುಗಳು ಹೀಗಿವೆ "ಒಮ್ಮೊಮ್ಮೆ ಅವನಿಗೆ ಅನಿಸುತ್ತದೆ ಈ ಅವಧಿಯಲ್ಲಿ ತಾನು ಸಾಧಿಸಿದ್ದನ್ನು ನೆರೆಕರೆಯ ಜನರು ಏಕೆ ಸಾಧಿಸಬಾರದು ಎಂದು. ತನಗಿಂತ ಹೆಚ್ಚಾಗಿ ಜನಕ್ಕೆ ಕೃಷಿಯ ಅನುಭವವಿದೆ. ನಮ್ಮ ಜನ ತುಸು ಆಲಸ್ಯವನ್ನು ಬಿಟ್ಟರೆ, ಅಂಧಾನುಕರಣೆ ಬಿಟ್ಟರೆ, ಸಾಹಸ ತೋರಿದರೆ ಅದೆಲ್ಲವೂ ಸಾಧ್ಯ ಎನಿಸುತ್ತದೆ." ಈ ಮಾತುಗಳು ಶಂಕರನ ಅನುಭವದಿಂದ ಬಂದ ಮಾತುಗಳಾಗಿವೆ. ಈ ಮಾತುಗಳಲ್ಲಿ ಕಾದಂಬರಿಯ ಒಟ್ಟಾರೆ ಆಶಯವು ಕೇಂದ್ರಿಕೃತವಾಗಿರುವುದನ್ನು ಕಾಣಬಹುದಾಗಿದೆ. 'ದೇಶದ ಪ್ರಗತಿಗಾಗಿ ಪ್ರತಿಯೊಬ್ಬರೂ ಸ್ವತಂತ್ರವಾಗಿ ಅನ್ನವನ್ನು ದುಡಿಯಬೇಕು ಎನ್ನುವ ತಾತ್ವಿಕ ನೆಲೆಗಟ್ಟನ್ನೂ ಈ ಮಾತುಗಳಲ್ಲಿ ಕಾಣಬಹುದಾಗಿದೆ.' ಈ ಕಾದಂಬರಿಯು ಸಾಧ್ಯತೆಯ ಚಿಗುರನ್ನು ಚಿಗುರಿಸುವ ಮೂಲಕ ವರ್ತಮಾನದ ತುರ್ತನ್ನು ಸಾರಿ ಹೇಳುತ್ತಿದೆ. ಇದಕ್ಕೆ ಕೃಷಿಕರು ಕೃಷಿಯ ಬಗೆಗಿರುವ ತಾತ್ಸಾರ, ಕೀಳರಿಮೆ, ಭ್ರಮನಿರಸನತೆಯನ್ನು ತ್ಯಜಿಸಬೇಕಷ್ಟೆ ಎಂಬುದು ಇಲ್ಲಿನ ಸಾಲುಗಳ, ಕಾದಂಬರಿಯ ಉದ್ದೇಶವಾಗಿದೆ.

ಹಾಗೆಯೇ ಇಲ್ಲಿ ಶಂಕರನು ಮಿಶ್ರಬೆಳೆಯನ್ನು ಬೆಳೆದಿರುವ ಉಲ್ಲೇಖ ಬರುತ್ತದೆ. ಇಂದು ರೈತರು ಒಂದೇ ಬೆಳೆಯನ್ನು ನೆಚ್ಚಿ ಕುಳಿತಾಗ, ಬೆಳೆಯು ಕೈಕೊಟ್ಟಾಗ ರೈತ ಕಂಗಲಾಗಿ ಸಂಪೂರ್ಣ ನಷ್ಟ ಅನುಭವಿಸುವ ಸಾಧ್ಯತೆಯಿರುತ್ತದೆ. ಆದರೆ ಮಿಶ್ರಬೆಳೆಯನ್ನು ಬೆಳೆಯುವ ಮೂಲಕ ಒಂದು ಕೈಕೊಟ್ಟರೆ ಮತ್ತೊಂದು ಕೈ ಹಿಡಿಯುತ್ತದೆ. ಹಾಗೆಯೇ ನಿಯಮಿತ ಆದಾಯವನ್ನು ಒದಗಿಸಿ ಕೊಡುತ್ತದೆ ಎಂಬ ಅಂಶ ಎಂದೆಂದಿಗೂ ಪ್ರಸ್ತುತವೇ ಆಗಿದೆ. ಇವಿಷ್ಟೇ ಅಲ್ಲದೆ ಇನ್ನೂ ಅನೇಕಾನೇಕ ಅಂಶಗಳು ಕಾದಂಬರಿಯ ಪ್ರಸ್ತುತತೆಯನ್ನು ಪ್ರತಿಪಾದಿಸುತ್ತವೆ.

'ಬಾಳು ಬೆದರುವುದಕ್ಕಾಗಿ ಅಲ್ಲ ಬದುಕುವುದಕ್ಕಾಗಿ' ಎಂಬ ಮಹತ್ ಧೋರಣೆಯನ್ನು ಈ ಕಾದಂಬರಿಯ ಮೂಲಕ ಕಾರಂತರು ಸಾಧ್ಯ ಮಾಡಿ ತೋರಿಸಿದ್ದಾರೆ. 'ಅದ್ಭುತ' ಎನ್ನುವ ಪದ ಇದೆ ಎಂದ ಮೇಲೆ ಅದ್ಭುತಗಳು ನಡೆಯುತ್ತದೆ ಎಂಬುದು ಅಷ್ಟೇ ಸತ್ಯ. ಕಾಲ ಕೂಡಿ ಬಂದು ಹಲವಾರು ಅಂಶಗಳು ಸೇರಿದಾಗ ಪವಾಡ ಅಥವ ಅದ್ಭುತ ಸಾಧ್ಯವಿದೆ ಎಂಬುದನ್ನು ಈ ಕಾದಂಬರಿಯ ಮೂಲಕ ಕಾಣಬಹುದಾಗಿದೆ. ದೆಹಲಿಯಲ್ಲಿದ್ದ ಶಂಕರ ತನ್ನ ಮೂಲವನ್ನು ಹುಡುಕುತ್ತಾ ಬಂದು ಬಂಗಾಡಿಯಂತಹ ಒಂದು ಗ್ರಾಮದಲ್ಲಿ ಬಂಜರು ಭೂಮಿಯಿಂದ ಹೊನ್ನಿನಂತಹ ಬೆಳೆಯನ್ನು ತೆಗೆದು ತೋರಿಸುವ ರೀತಿ ನಿಜಕ್ಕೂ ಅಚ್ಚರಿ ಮತ್ತು ಬೆರಗನ್ನು ಮೂಡಿಸುತ್ತದೆ. ಪ್ರಯತ್ನಪಟ್ಟರೆ ಯಾರೂ ಇದನ್ನು ಸಾಧಿಸಬಹುದೆಂಬ ಸರಳ ತತ್ವವೂ ಇದರಲ್ಲಿ ಅಡಕವಾಗಿದೆ. ಆಶಾವಾದದ ಆದರ್ಶದ ಚಿತ್ರಣವು ಇವೆಲ್ಲವನ್ನೂ ಸಾಧ್ಯವಾಗಿಸುತ್ತದೆ. ಆ ಮೂಲಕ ಏನೂ ಮಾಡಲು ಸಾಧ್ಯವಿಲ್ಲವೆಂದು ಮೂಗು ಮುರಿಯುತ್ತಿದ್ದ ಶ್ಯಾನುಭೋಗರ ಮುಂದೆ ಶಂಕರ ಸಾಧಿಸಿ-ಸಾಧ್ಯವಾಗಿಸಿ ತೋರಿಸುವ ಬಗೆ ನಿಜಕ್ಕೂ ಗಮನಾರ್ಹವೆನಿಸುತ್ತದೆ. ಇಲ್ಲೆಲ್ಲ ಕಾರಂತರ ದೇಶಪ್ರೇಮ, ನೈತಿಕತೆಯ ಬಗೆಗಿನ ಕಾಳಜಿ, ಪ್ರಕೃತಿ ಪ್ರೇಮ, ಸಮಾಜಮುಖಿ ಕಾಳಜಿ, ಕೃಷಿ ಮತ್ತು ಕೃಷಿಕರ ಬಗೆಗಿನ ಪ್ರಾಮಾಣಿಕ ಕಳಕಳಿಯನ್ನು ಕಾಣಬಹುದಾಗಿದೆ.

ಒಟ್ಟಾರೆಯಾಗಿ ವಸ್ತು, ವಿನ್ಯಾಸ-ಪ್ರಸ್ತುತತೆಯ ದೃಷ್ಟಿಯಿಂದ ಮಾತ್ರವಲ್ಲದೆ ಧೋರಣೆಯ, 'ಅಸಾಧ್ಯ'ವನ್ನು 'ಸಾಧ್ಯ'ಗೊಳಿಸುವ ನೆಲೆಯಿಂದಲೂ ಈ ಕೃತಿ ಪ್ರಮುಖವೆನಿಸುತ್ತದೆ. ಸರಿಸುಮಾರು ಐವತ್ತು ವರ್ಷಗಳೇ ಕಳೆದರೂ ಅದರ ಜೀವಂತಿಕೆ ಮತ್ತು ಪ್ರಸ್ತುತತೆಯನ್ನು ಉಳಿಸಿಕೊಂಡಿರುವ ಈ ಕೃತಿಯು ಹೊಸಗನ್ನಡ ಸಾಹಿತ್ಯದ ಸಂದರ್ಭದ ಒಂದು ಪ್ರಮುಖ ಕೃತಿ ಎನ್ನಬಹುದು.

## ನಾನೇಕೆ ಅಯೋಧ್ಯೆಗೆ ಹೋಗುತ್ತೇನೆ?

**ಎಚ್. ಆನಂದರಾಮ ಶಾಸ್ತ್ರೀ**
1251, 4'ಎ' ಮುಖ್ಯ ರಸ್ತೆ, 3ನೇ ಹಂತ,
ಬಿ.ಇ.ಎಲ್. ಬಡಾವಣೆ, ವಿದ್ಯಾರಣ್ಯಪುರ, ಬೆಂಗಳೂರು–560097

ಕೆ. ಸತ್ಯನಾರಾಯಣ ಅವರು ನಮ್ಮ ನಡುವಿನ ಉತ್ತಮ ಕಥೆಗಾರರಲ್ಲೊಬ್ಬರು. ಪ್ರಬಂಧ, ವಿಮರ್ಶೆ ಮೊದಲಾದ ಪ್ರಕಾರಗಳ ಬರವಣಿಗೆಯಲ್ಲೂ ಇವರು ಸಿದ್ಧಹಸ್ತರು. ಶ್ರೀಯುತರು 'ನಾನೇಕೆ ಅಯೋಧ್ಯೆಗೆ ಹೋಗುವುದಿಲ್ಲ?' ಎಂಬ ಶೀರ್ಷಿಕೆಯಡಿ ಬರೆದಿರುವ ಬರೆಹವೊಂದು 'ಕನ್ನಡ ಪ್ರಭ' ದಿನಪತ್ರಿಕೆಯ ಡಿಸೆಂಬರ್ ಒಂದನೇ ತೇದಿಯ, 'ಸಾಪ್ತಾಹಿಕ ಪ್ರಭ' ಪುರವಣಿಯಲ್ಲಿ ಪ್ರಕಟಗೊಂಡಿದೆ. ಆ ಬರೆಹದ ಕೆಲ ಭಾಗಗಳು ಈ ಕೆಳಗಿನಂತಿವೆ.

'ಈಗ ಅಯೋಧ್ಯೆಯಲ್ಲಿ ಏನಿರಬಹುದು? ಒಬ್ಬ ಶ್ರೀರಾಮಚಂದ್ರನನ್ನು ಅಥವಾ ಅವನ ಮೂರ್ತಿಯನ್ನು ಕಾಯಲು ನೂರಾರು ಪೊಲೀಸರು, ಸೈನಿಕರು. ಈ ರಾಮಚಂದ್ರನ ಪುಟ್ಟ ಮೂರ್ತಿಯನ್ನು ಕೂಡ ಇನ್ನೂ ವಿಶೇಷವಾದ ಭದ್ರತೆಯಲ್ಲಿಟ್ಟು ದಿನವೂ ಆರತಿ ನಡೆಯುತ್ತದೆ. ಅದನ್ನು ನೋಡಲು ವಿಶೇಷ ಪರವಾನಗಿ ಪಡೆಯ ಬೇಕು. ಅಷ್ಟೆಲ್ಲ ಕಷ್ಟಪಟ್ಟರೂ ಅಲ್ಲೇನು ಭಜನೆಯೇ, ಸಂಗೀತವೇ, ಹರಿಕಥೆಯೇ; ಪಾನಕ ಕೋಸಂಬರಿಯೇ, ಏನೂ ಇಲ್ಲ. ಬಹುಶಃ ನಾನೇ ತೆಗೆದುಕೊಂಡು ಹೋಗಬೇಕಾದ ಬಿಸಿಲೇರಿ ಬಾಟಲಿನ ನೀರನ್ನು ಕುಡಿಯಬೇಕು, ಅಷ್ಟೇ. ಅದೂ ಭದ್ರತಾ ಸೇವೆಯವರು ಒಳಗೆ ತೆಗೆದುಕೊಂಡು ಹೋಗಲು ಬಿಟ್ಟರೆ. ಈ ಎಲ್ಲ ಕಷ್ಟಗಳಿಂದಾಗಿ ನಾನು ಅಯೋಧ್ಯೆಗೆ ಹೋಗುತ್ತಿಲ್ಲವೇ. ಹೋಗುವುದಿಲ್ಲವೇ. ಇರಬಹುದು. ಆದರೆ ಅಯೋಧ್ಯೆಯ ರಾಮಚಂದ್ರನನ್ನು ಮೀರಿಸಿದ ಶ್ರೀರಾಮಚಂದ್ರ ನನ್ನು ನಾನು ನನ್ನ ಬಾಲ್ಯದಲ್ಲಿ, ಸಣ್ಣಪುಟ್ಟ ಪಟ್ಟಣಗಳ ರಾಮಮಂದಿರಗಳಲ್ಲಿ ಕಾಣುತ್ತಲೇ ಬಂದಿದ್ದೇನೆ. ನನ್ನ ಮನಸ್ಸು ಅದಕ್ಕೆ ಒಗ್ಗಿಹೋಗಿದೆ. ಹಾಗಾಗಿ ನಾನು ಅಯೋಧ್ಯೆಗೆ ಹೋಗುವುದಿಲ್ಲ.'

'ನನ್ನಂಥವನಿಗೆ ಮಾತ್ರವಲ್ಲ ಸ್ವತಃ ತ್ಯಾಗರಾಜರಿಗೂ ಕೂಡ ಅಯೋಧ್ಯೆಯ ರಾಮಚಂದ್ರನಿಗಿಂತ ತಮ್ಮ ಮನೆಯ ಪುಟ್ಟ ರಾಮಚಂದ್ರನ ಮೂರ್ತಿಯೇ ಬಲು ಪ್ರಿಯವಾದುದಾಗಿತ್ತು... ಮೂರ್ತಿಪೂಜೆಯ ವಿರೋಧಿಯಾಗಿದ್ದ ಗಾಂಧಿ ಕೂಡ ಇಷ್ಟಪಟ್ಟದ್ದು ನಮ್ಮ ಮಂಡ್ಯದ ಆನೇಕೆರೆ ಬೀದಿಯ, ಮೈಸೂರಿನ ಕುಕ್ಕರಹಳ್ಳಿ ಬಡಾವಣೆಯ ಸಣ್ಣಪುಟ್ಟ ರಾಮ ಮಂದಿರಗಳನ್ನೇ. ಅವರಿಗೆ ಬಹುಪ್ರಿಯವಾಗಿದ್ದು ರಘುಪತಿ–ರಾಘವ–ರಾಜಾರಾಂ ಭಜನೆಗೆ ಸಣ್ಣಪುಟ್ಟ ರಾಮ ಮಂದಿರಗಳ ಹಾರ್ಮೋನಿಯಂ

ಹಿಮ್ಮೇಳವೇ ಸಾಕಾಗಿತ್ತು. ನನಗೆ ತಿಳಿದ ಮಟ್ಟಿಗೆ ಈವತ್ತಿನ ಅಯೋಧ್ಯೆಯಲ್ಲಿ ಆಧುನಿಕವಾದ ಶಸ್ತ್ರಾಸ್ತ್ರವು ಇವೆಯೇ ಹೊರತು ಸಣ್ಣ ಹಾರ್ಮೋನಿಯಂ ಇಲ್ಲ.'

'ಗೆಳೆಯರ ಪ್ರೀತಿ, ಬಲವಂತದಿಂದ ತಪ್ಪಿಸಿಕೊಳ್ಳಲಾಗದೆ ನಾನು ಅಯೋಧ್ಯೆಗೆ ಹೋಗಲೇಬೇಕಾಗಿ ಬಂದರೂ ನನಗೆ ಇನ್ನೊಂದು ಭಯವೂ ಇದೆ. ಅಯೋಧ್ಯೆಯಲ್ಲೂ ಕೂಡ ನಾನು ನಮ್ಮೂರ ಗುಡಾರವನ್ನೇ ಕಂಡುಬಿಟ್ಟರೆ ಎಂಬ ಭಯ ಅದು. ಏಕೆಂದರೆ ತಿರುಪತಿಗೆ ನಾನು ಹೋದಾಗ ಇಂತಹ ಅನುಭವವಾಗಿದೆ.'

'ಅಯೋಧ್ಯೆಯಲ್ಲಾಗಲೀ, ಕಾಶಿ, ಮಥುರಾ, ಆವಂತಿಗಳಲ್ಲಾಗಲೀ ಏನೇನಾಗಿದೆ, ಏನೇನಾಗಬೇಕು ಎಂಬುದರ ಗೊಡವೆಗೇ ಹೋಗದವನು (ನಾನು). ಆದರೆ ಅಲ್ಲೆಲ್ಲ ಏನೇನಾಗಬೇಕು, ಯಾರ ಪೂಜೆ ನಡೆಯಬೇಕು, ಯಾರು ಪೂಜೆ ಮಾಡಬೇಕು, ಮಾಡಬಾರದು ಎಂದೆಲ್ಲ ಹಗಲು ರಾತ್ರಿ ತಲೆ ಕೆಡಿಸಿಕೊಳ್ಳುವವರಲ್ಲಿ ನನ್ನದು ಒಂದೇ ವಿನಂತಿ. ಒಂದು ಸಲ, ಒಂದೇ ಒಂದು ಸಲ, ನಿಮ್ಮೂರಿನ, ನಿಮ್ಮ ಬಡಾವಣೆಯ ಗುಡಿ-ಗುಡಾರಗಳನ್ನು ನೋಡಿ, ಅಲ್ಲಿಗೆ ಹೋಗಿ.'

'ಅಯೋಧ್ಯೆಗೆ ಮಾತ್ರವಲ್ಲ, ಬಾಬಾ ಬುಡನ್‌ಗಿರಿಗೂ ಕೂಡ ನನಗೆ ಹೋಗಬೇಕೆನಿಸುವುದಿಲ್ಲ. ನಾನು ವಾಸವಾಗಿದ್ದ ಕೊಲ್ಲಾಪುರದ ನಮ್ಮ ಮನೆಯ ಹತ್ತಿರವೇ ಒಂದು ಪುಟ್ಟದಾದ ದತ್ತ ಮಂದಿರವಿದೆ... ಯಾರು ಬರಬೇಕು,ಯಾವಾಗ ಬರಬೇಕು, ಯಾರ ಪೂಜೆ, ಯಾರಿಂದ, ಯಾವಾಗ, ಯಾವುದಕ್ಕೂ ವಿವಾದವಿಲ್ಲ ..... ಹೀಗೆಲ್ಲಾ ಇರುವಾಗ ಬಾಬಾ ಬುಡನ್‌ಗಿರಿಗೆ ಹೋಗಿ ನಾನು ಮಾಡುವುದಾದರೂ ಏನು? ಪತ್ರಿಕೆಗಳಲ್ಲಿ ಫೋಟೋ ಬರಲೆಂದು ಮಾಲೆ ಧರಿಸಿಕೊಳ್ಳಬೇಕು ಅಷ್ಟೇ.'

'ನಾನು ಅಯೋಧ್ಯೆಗೆ ಹೋಗುವುದೇ ಇಲ್ಲ. ಅಷ್ಟೊಂದು ದೂರ ಅಂತಲ್ಲ. ಹತ್ತಿರದ ಬಾಬಾ ಬುಡನ್‌ಗಿರಿಗೂ ಕೂಡಾ..... ಒಂದು ಊರು, ಒಂದು ಬಡಾವಣೆಯಲ್ಲಿರುವವರೆಲ್ಲ ಅಲ್ಲಲ್ಲೇ ಇರುವ ಗುಡಿ ಗುಡಾರ, ರಾಮ ಮಂದಿರಗಳಿಗೆ ಮಾತ್ರವೇ ಹೋಗಲು ಅರ್ಹರು ಎಂಬ ಕಾನೂನಿಗೆ ಒತ್ತಾಯಿಸುವ ಆಸೆ (ನನಗೆ).

ಹಾಗಾದಾಗ ಅಯೋಧ್ಯೆಗೂ ಈಗ ಸುತ್ತಿಕೊಂಡಿರುವ ಭದ್ರತಾ ಪಡೆಗಳ ಕಪಿಮುಷ್ಟಿ ಮುಗಿದು, ರಾಮಚಂದ್ರನಿಗೆ ಬಿಡುಗಡೆಯಾಗಬಹುದು.'

ಮೇಲಿನ ಅಭಿಪ್ರಾಯಗಳಿಗೆ ಸಮರ್ಥನೆಯಾಗಿ ಸತ್ಯನಾರಾಯಣ ಅವರು ತಮ್ಮ ಆ ಲೇಖನದಲ್ಲಿ, ತಮ್ಮ ಬಾಲ್ಯದ ದಿನಗಳ 'ಸ್ಥಳೀಯ ದೇಗುಲ ಭೇಟಿ, ಆ ಕುರಿತ ಅನುಭವಗಳು-ನೆನಹುಗಳು-ಭಾವನೆಗಳು-ಕಾಣ್ಕೆ', ಸ್ಥಳೀಯ ದೇಗುಲಗಳ ಸಂಬಂಧೀ 'ಆಗುಹೋಗುಗಳು, ಜಗಳ-ರಗಳೆಗಳು' ಇತ್ಯಾದಿಗಳನ್ನೆಲ್ಲ ಕಣ್ಣಿಗೆ ಕಟ್ಟುವಂತೆ ಬಣ್ಣಿಸುತ್ತಾರೆ.

ಅಯೋಧ್ಯೆ, ಬಾಬಾ ಬುಡನ್‌ಗಿರಿ ಮೊದಲಾದ ಧಾರ್ಮಿಕ ಸ್ಥಳಗಳ ಬಗ್ಗೆ ನಡೆದಿರುವ ವಿವಾದಗಳು ಮತ್ತು ಜಟಾಪಟಿಗಳು ನಮಗೆ ಬೇಡವಾಗಿದ್ದವು ಎಂಬ ಸತ್ಯನಾರಾಯಣರ ಆಂತರ್ಯದ ಅಭಿಪ್ರಾಯಕ್ಕೆ ನನ್ನ ಆಕ್ಷೇಪವಿಲ್ಲ. ಈ ವಿವಾದಗಳನ್ನು ಒಂದು ರಾಜಕೀಯ ಪಕ್ಷವು ತನ್ನ ಏಳಿಗೆಗಾಗಿ ಬಳಸಿಕೊಳ್ಳುತ್ತಿರುವುದರ ಬಗ್ಗೆ ಸತ್ಯನಾರಾಯಣ ಅವರಿಗಿರಬಹುದಾದ ಅಸಮಾಧಾನದ ವಿಷಯದಲ್ಲೂ ನನ್ನ ತಕರಾರಿಲ್ಲ. ವಿವಾದಗಳನ್ನು ಯಾರು ಹುಟ್ಟು ಹಾಕಿದರೋ, ಯಾಕಾಗಿ ಹುಟ್ಟುಹಾಕಿದರೋ, ಯಾರು-ಯಾಕಾಗಿ ಬಳಸಿಕೊಳ್ಳುತ್ತಿದ್ದಾರೋ, ಅಂತೂ ವಿವಾದಗಳೀಗ ತಲೆಯೆತ್ತಿ ನಿಂತುಬಿಟ್ಟಿವೆ. ಅಯೋಧ್ಯೆಯಲ್ಲಿ ರಾಮಮಂದಿರವಿದ್ದ ಸ್ಥಳದಲ್ಲಿ ಅಂದು ಬಾಬ್ರಿ ಮಸೀದಿ ತಲೆಯೆತ್ತಿದ ಹಾಗೆ, ಮಥುರಾದಲ್ಲಿ ಶ್ರೀ ಕೃಷ್ಣ ಮಂದಿರಕ್ಕೆ

ತಾಗಿಕೊಂಡಂತೆಯೇ ಬೃಹತ್ತಾದ ಮುಸ್ಲಿಂ ಧಾರ್ಮಿಕ ಕಟ್ಟಡ (ನಾನು ಕಣ್ಣಾರೆ ನೋಡಿದ್ದೇನೆ) ಇರುವಂತೆಯೇ, ಇಂದು ಬಾಬ್ರಿ ಮಸೀದಿ ನೆಲಸಮ ಮಾಡಲ್ಪಟ್ಟಿದೆ, ಮಥುರೆಯ ಮುಸ್ಲಿಂ ಕಟ್ಟಡದ ಮೇಲೆಯೂ ಕಣ್ಣು ಹಾಕಲಾಗಿದೆ, ಬಾಬಾ ಬುಡನ್‌ಗಿರಿಯನ್ನು ವಿವಾದಕ್ಕೀಡು ಮಾಡಲಾಗಿದೆ. ಅದು ಅಂದಿನ ವಾಸ್ತವವಾದರೆ ಇದು ಇಂದಿನ ವಾಸ್ತವ. ಮುಂದಿನ ದಿನಗಳಲ್ಲಿ ಎರಡೂ (ಅ)ಕ್ರಮಗಳೂ ಇತಿಹಾಸ. ನೆಗಡಿ ಆಗಬಾರದಿತ್ತು, ಆದರೆ ಆಗಿಬಿಟ್ಟಿದೆ. ಈಗ ನೆಗಡಿಯನ್ನು ವಾಸಿಮಾಡುವ ಬಗೆ ಕುರಿತು ಯೋಚಿಸಬೇಕೇ ಹೊರತು, ಮೂಗನ್ನೇ ಕತ್ತರಿಸಿ ಹಾಕುವ ಯೋಚನೆ ಮಾಡುವುದಲ್ಲ. ಅಯೋಧ್ಯೆ, ಬಾಬಾ ಬುಡನ್‌ಗಿರಿಗಳಿಗೆ ಹಿಂದೂ–ಮುಸ್ಲಿಂ ಉಭಯ ಕೋಮುಗಳ ಧರ್ಮಶ್ರದ್ಧಾವಂತರೂ ಭದ್ರತೆಯ ಭಯರಹಿತರಾಗಿ ಭೇಟಿ ನೀಡಲು ಸಾಧ್ಯವಾಗುವಂಥ ವಾತಾವರಣ ಸೃಷ್ಟಿಯಾಗಬೇಕೇ ಹೊರತು, 'ಜನರು ತಂತಮ್ಮ ಊರು–ಬಡಾವಣೆಗಳಲ್ಲಿರುವ ಗುಡಿ ಗುಡಾರಗಳಿಗೆ ಮಾತ್ರವೇ ಹೋಗಲು ಅರ್ಹರು' ಎಂಬ ಕಾನೂನಿನ ಸೃಷ್ಟಿಯಲ್ಲ. ವಿಡಂಬನಾತ್ಮಕವಾಗಿಯೂ ಇಂಥ–ಕಾನೂನು ಸೃಷ್ಟಿಯ–ಪ್ರತಿಪಾದನೆ (ಸಮಾಜದ ಒಟ್ಟು ಮನಸ್ಸಿನ ಆರೋಗ್ಯೋಲ್ಲಾಸಗಳ ದೃಷ್ಟಿಯಿಂದ)ಸಲ್ಲ.

'ವಿವಾದ, ಜಗಳ, ಪೊಲೀಸು ಬಂದೂಕು, ಬಂದೋಬಸ್ತು ಇತ್ಯಾದಿ ಆವರಿಸಿಕೊಂಡಿರುವ ಅಯೋಧ್ಯೆಗೆ (ಮೊದಲಾದೆಡೆಗಳಿಗೆ) ಏಕೆ ಹೋಗಬೇಕು? ನಂನಮ್ಮ ಊರು – ಕೇರಿಗಳ ದೇಗುಲುಗಳಲ್ಲೇ ರಾಮನನ್ನು (ಮೊದಲಾದ ದೇವದೇವಿಯರನ್ನು) ಕಂಡು, ಅನುಭವಿಸಿ ಆನಂದಿಸಲು ಸಾಧ್ಯವಿಲ್ಲವೇ ಎಂಬ ಸತ್ಯನಾರಾಯಣರ ಮನದಿಂಗಿತ ನನಗೆ ಅರ್ಥವಾಗುತ್ತದೆ. ತಮ್ಮೀ ಇಂಗಿತಕ್ಕೆ ಸಮರ್ಥನೆಯೆಂಬಂತೆ ಅವರು ತಮ್ಮ ಬಾಲ್ಯದ ಅನುಭವಗಳನ್ನು ಮತ್ತು ಆ ಅನುಭವಗಳು ಅಂದು ನೀಡಿದ ಭಾವನೆಗಳನ್ನು ಬಣ್ಣಿಸಿದ್ದಾರೆ. ತಮ್ಮ ಬಾಲ್ಯದಲ್ಲಿ ಅಂಥ ಅನುಭವಗಳು ಎಲ್ಲರಿಗೂ ಆಗಿರುತ್ತದೆ; ಅಂಥ ಭಾವನೆಗಳನ್ನು ಅವು ಎಲ್ಲರಲ್ಲೂ ಹುಟ್ಟಿ ಹಾಕಿರುತ್ತವೆ. ದೇವರು–ದೇಗುಲ ಇಂಥ ವಿಷಯಗಳಷ್ಟೇ ಅಲ್ಲ, ಬಾಲ್ಯದಲ್ಲಿ ಉಂಟಾದ ಇತ್ಯಾತ್ಮಕವಾದ ಸರಿಸುಮಾರು ಎಲ್ಲಾ ಅನುಭವಗಳೂ ನಮಗೆ ಅಂದಿಗೂ ಇಂದಿಗೂ ಶ್ರೇಷ್ಠವೇ – ಸೊಗಸೇ. ಮುದುಕರಾದಾಗಲೂ ನಮಗೆ ಬಾಲ್ಯದ ಆ ಕಾಲವೇ, 'ಆ ಕಾಲವೊಂದಿತ್ತು, ದಿವ್ಯ ತಾನಾಗಿತ್ತು' ಎಂಬ ಸವಿನೆನಪು. ಅದು ಸಹಜ. ಬಾಲ್ಯದಲ್ಲಿ ನಾನು ತಿಂದ ಒಂದು ಸಕ್ಕರೆ 'ಪೆಪ್ಪರ್‌ಮಿಂಟು', ಇಂದು ನಾನು ತಿನ್ನುವ 'ಡೈರಿಮಿಲ್ಕ್' ಚಾಕೋಲೇಟ್‌ಗಿಂತ ರುಚಿ. ಹಾಗಿಲ್ಲದಿದ್ದರೆ ಅದು ಬಾಲ್ಯವೇ ಅಲ್ಲ. ಆದರೆ, ಬಾಲ್ಯದಲ್ಲಿ ಮನೆ ಪಕ್ಕದ ರಾಮ ಮಂದಿರದಲ್ಲಿ ಮುಗ್ಧವಾಗಿ ನಲಿಯುತ್ತಿದ್ದ ನನ್ನ ಮನಸ್ಸು, ಇಂದು, ಆ ರಾಮ ಹುಟ್ಟಿದ, ಬೆಳೆದ, ನಲಿದ, ನೋವನುಭವಿಸಿದ, ಆಳಿದ ಅಯೋಧ್ಯೆಯನ್ನೊಮ್ಮೆ ಕಣ್ಣಾರೆ ನೋಡಬೇಕೆಂದು ಹಂಬಲಿಸುತ್ತದೆ. ಅಲ್ಲಿ ಒಂದು ವೇಳೆ ಆರತಿಯ ದರ್ಶನಾವಕಾಶವಿಲ್ಲದಿರಲಿ, ಪೊಲೀಸ್ ಬಂದೋಬಸ್ತ್ ಇರಲಿ, ಬಂದೂಕಿರಲಿ, ಮತ್ತೊಂದಿರಲಿ, ರಾಮನ ಅರಮನೆ ಇಲ್ಲದಿರಲಿ, ಪೊಲೀಸ್ ಬಿಡಾರ – ಬ್ಯಾರಿಕೇಡ್‌ಗಳೇ ಕಣ್ಣಿಗೆ ರಾಚುತ್ತಿರಲಿ, ಆ ಸ್ಥಳಕ್ಕೆ ಹೋಗಿ ನಿಂತು, ಅಲ್ಲಿ ಹಿಂದೊಮ್ಮೆ ನಡೆದಂಥ ರಾಮಾಯಣದ ಎಲ್ಲ ಆಗುಹೋಗುಗಳನ್ನೂ ನೆನೆಯುತ್ತ, ಅಂದಿನ ಆ ದೃಶ್ಯಗಳನ್ನು 'ಅದು ಇಲ್ಲೇ, ಹೀಗೆ ನಡೆದದ್ದು, ಹೀಗೆಲ್ಲ ಇದ್ದದ್ದು' ಎಂದು ಕಣ್ಣೆದುರು ಕಲ್ಪಿಸಿಕೊಳ್ಳುವುದರಲ್ಲಿ ನನಗೆ ಮಹಾದಾನಂದವಿದೆ, ಆತ್ಮಾನಂದವಿದೆ, ಜೀವನ ಸಾರ್ಥಕ್ಯದ ಒಂದಂಶವಿದೆ. ಮನುಷ್ಯನಾಗಿ ನನಗೆ ಇದು, ಅಂದರೆ, ಈ ಆನಂದಾನುಭವಯೋಗ, ಒದಗಿರುವ ಒಂದು ಲಾಭ. ಈ ಲಾಭವನ್ನು ನನ್ನದಾಗಿಸಿಕೊಳ್ಳುವುದು ನನ್ನ ಜೀವನೋದ್ದೇಶಗಳಲ್ಲೊಂದು. ಇಂಥದೇ ಅನುಭವವನ್ನು ನನ್ನಾಕೆಯು ತನ್ನದಾಗಿಸಿಕೊಳ್ಳುವುದರ ಜೊತೆಗೆ, ತಾನು ಭಕ್ತಿಪೂರ್ವಕವಾಗಿ

ಆತನಿಗೆ ತನ್ನನ್ನು ಸಮರ್ಪಿಸಿಕೊಂಡಿರುವ ಆ ಶ್ರೀರಾಮಚಂದ್ರ ಏನಿದ್ದಾನೇ, ಆತನ ಊರು – ಕೇರಿಗಳನ್ನು ಕಂಡು ಧನ್ಯಳಾಗುವ ಮನಸ್ಥಿತಿ ಹೊಂದಿದ್ದು, ಆಕೆಯು ಜೀವನ ಸಾರ್ಥಕ್ಯದ ಈ ಹಾದಿಯಲ್ಲಿ ನನಗಿಂತ ಒಂದು ಹೆಜ್ಜೆ ಮುಂದು. ಇತಿಹಾಸಸ್ಮರಣೆಯ ಮತ್ತು ತತ್ಪಲ ದೃಶ್ಯಕಲ್ಪನೆಯ ಮನೋಭಾವ ಹೊಂದಿರದಿದ್ದರೂ, ಇವಕ್ಕಿಂತ ಮಿಗಿಲಾದ ಭಕ್ತಿಯನ್ನು 'ರಾಮದೇವರ' ಮೇಲೆ ಹೊಂದಿರುವ ನನ್ನ ವಯೋವೃದ್ಧ – ಮುಗ್ಧ ಸ್ವಭಾವಿ ತಾಯಿಯವರು, 'ಅಯೋಧ್ಯೆಗೊಮ್ಮೆ ಹೋಗಿ, ರಾಮಜನ್ಮಸ್ಥಾನವನ್ನು (ಅದು ಹೇಗೇ ಇರಲಿ) ದರ್ಶನ ಮಾಡಿ' ಪುನೀತಳಾಗಬೇಕೆಂಬ, ಜನ್ಮಸಾರ್ಥಕ್ಯ ಹೊಂದಬೇಕೆಂಬ ಬಯಕೆ ಹೊಂದಿದವರಾಗಿದ್ದಾರೆ. ನನ್ನ ಪತ್ನಿ, ತಾಯಿ ಇಬ್ಬರೂ ಅಯೋಧ್ಯಾ ಯಾತ್ರೆಯಿಂದಾಗಿ 'ಪುಣ್ಯ ಸಂಪಾದನೆ'ಯ ಖುಷಿಯನ್ನೂ ಅನುಭವಿಸುತ್ತಾರೆ. ನನ್ನ, ನನ್ನ ಪತ್ನಿಯ ಮತ್ತು ನನ್ನ ತಾಯಿಯ, ಮೂವರ ಬಯಕೆಗಳೂ ನಂನಮ್ಮ ಸ್ವಂತಕ್ಕೆ. ಅನಾರೋಗ್ಯಕರವೂ ಅಲ್ಲ, ಸಮಾಜಕ್ಕೆ ಕಂಟಕಪ್ರಾಯವೂ ಅಲ್ಲ. ಬದಲಿಗೆ, ಯೋಚನಾ ಶಕ್ತಿ, ಕಲ್ಪನಾಸಾಮರ್ಥ್ಯ ಮತ್ತು ಜೀವನ ಚಿಂತನ ಇವುಗಳನ್ನು ಹೊಂದಬಲ್ಲಂಥ ಮತ್ತು ಹೊಂದಿರುವಂಥ ಮನುಷ್ಯಕುಲಕ್ಕೆ ಸೇರಿದವರು ನಾವಾದ್ದರಿಂದ, ಅಯೋಧ್ಯೆಗೆ (ಮೊದಲಾದೆಡೆಗಳಿಗೆ) ಹೋಗಿಬರುವ ಮೂಲಕ ನಮ್ಮ ಜೀವನದ ಅರ್ಥವನ್ನು ವಿಸ್ತರಿಸಿಕೊಳ್ಳುವ ನಮ್ಮ ಬಯಕೆ, ಜೀವನದ ಉದ್ದೇಶದ ಸಾಫಲ್ಯಕ್ಕಾಗಿ ಏರಬೇಕಾಗಿರುವ ಮೆಟ್ಟಿಲುಗಳಲ್ಲಿ ಒಂದನ್ನು ಏರುವ (ಈ) ಬಯಕೆ ಅಸಾಧುವೂ ಅಲ್ಲ, ಅರ್ಥಹೀನವೂ ಅಲ್ಲ. ನಮಗೆ ಮೂವರಿಗೂ ಅಯೋಧ್ಯಾ ದರ್ಶನವು ಈ ಎಲ್ಲ ಉದ್ದೇಶ ಸಿದ್ಧಿಯಿಂದಾಗಿ ಆನಂದದಾಯಕ.

ವಿವಾದಪರಿಹಾರ, ಭದ್ರತೆ, ವ್ಯವಸ್ಥೆ ಇವು ಆಳರಸರಿಗೆ ಬಿಟ್ಟದ್ದು, ನನ್ನ ಸೇಫ್ಟಿಯನ್ನುನೋಡಿ ಕೊಂಡು ನಾನು ಅಯೋಧ್ಯೆಗೆ, ಅದು ಇಂದು ಹೇಗೇ ಇರಲಿ, ಮೇಲ್ಕಂಡ ಕಾರಣಗಳಿಂದಾಗಿ, ಹೋಗುವವನು. ನನ್ನೊಡನೆ ನನ್ನಾಕೆ, ನನ್ನ ಅಮ್ಮ ಬರುವವರು. ಅವರ ಸೇಫ್ಟಿಯೂ ನನ್ನ ಕರ್ತವ್ಯ. ನಮಗೆ ಅನುಕೂಲಕರ ವಾತಾವರಣವನ್ನು ನಿರ್ಮಿಸಿಕೊಡುವಂತೆ ಆಳರಸರ ಮೇಲೆ ಒತ್ತಡ ಹೇರುವುದೂ ನನ್ನ ಕರ್ತವ್ಯ. (ಹಿಂದು–ಮುಸ್ಲಿಂ–ಕ್ರೈಸ್ತ..... ಸಕಲರಿಗೂ, ಧಾರ್ಮಿಕ ಭಾವನೆಗಳ ಕುರಿತ ಮತ್ತು ಧಾರ್ಮಿಕ ಸ್ವಾತಂತ್ರ್ಯದ ಈ ಮಾತುಗಳು ಅನ್ವಯ.)

ನನಗೆ ನನ್ನ ಮನೆಯ ಪಕ್ಕದ ರಾಮಮಂದಿರವೂ ಬೇಕು, ಬಾಲ್ಯದ ಆ ಸವಿನೆನಪುಗಳೂ ಬೇಕು, ಅಯೋಧ್ಯೆ ಪ್ರವಾಸವೂ ಯಾತ್ರೆಯೂ ಬೇಕು. ತಪ್ಪೇನು?

ಸತ್ಯನಾರಾಯಣ ಅವರು ಅಯೋಧ್ಯೆಯಲ್ಲೂ ಕೂಡ ಅವರೂರಿನ ಗುಡಿ ಗುಡಾರವನ್ನೇ ಕಂಡು ಬಿಡುವ 'ಭಯ' ಹೊಂದಿದ್ದರೆ, ನನ್ನ ಅಜ್ಜಿಯು (ತಾಯಿಯ ತಾಯಿಯು) ತನ್ನೂರಿನ ರಾಮಮಂದಿರದಲ್ಲೇ ರಾಮಜನ್ಮಸ್ಥಳವನ್ನು (ಅರ್ಥಾತ್, ಅಯೋಧ್ಯೆಯನ್ನು) ಕಾಣುತ್ತಿದ್ದರು! ಆದಾಗ್ಯೂ ಅವರಿಗೆ ಅಯೋಧ್ಯೆಗೆ ಹೋಗಬೇಕೆನಿಸಿತ್ತು. ನಾನೋ, ಅಯೋಧ್ಯೆಯಲ್ಲಿ ಮಾತ್ರ ಅಯೋಧ್ಯೆಯನ್ನು, ಮತ್ತು, ಅಯೋಧ್ಯೆಯನ್ನು ಮಾತ್ರ ಕಾಣಬಲ್ಲವನಾಗಿದ್ದೇನೆ. ನಾವು (ಪತ್ನಿಯೂ ತಾಯಿಯೂ ಸೇರಿ) ಮೂವರೂ ಸಹಜ ಮಾನವರೇ; ಮತ್ತು ನಮ್ಮ ಮಾನವಸಹಜ– ಅನಾರೋಗ್ಯರಹಿತ ಹಂಬಲವನ್ನು ಈಡೇರಿಸಿಕೊಳ್ಳುವ ನ್ಯಾಯಬದ್ಧ ಹಕ್ಕು ನಮಗಿದೆ. ಆದ್ದರಿಂದ ನಾವು ಅಯೋಧ್ಯೆಗೆ ಹೋಗಿಯೇ ತೀರುತ್ತೇವೆ.

ಇನ್ನು, ಅಯೋಧ್ಯಾ ಯಾತ್ರೆಯಂತಹ ಪ್ರವಾಸಗಳಿಂದಾಗಿ 'ಒಟ್ಟು ನಾಡಿನಲ್ಲಿ' ವೃದ್ಧಿಗೊಳ್ಳ ಬಹುದಾದೊಂದು ಮತಧರ್ಮ ಶಕ್ತಿ, ಉಂಟಾಗಬಹುದಾದ ಧರ್ಮಜಾಗೃತಿ, ಗಟ್ಟಿಯಾಗ ಬಹುದಾದ ಸ್ವಧರ್ಮಾಭಿಮಾನ, ಹೆಚ್ಚಬಹುದಾದ ದೇಶಪ್ರೇಮ, ಇವು ಬೇರೆಯೇ ವಿಷಯ

ಗಳಾಗಿದ್ದು ಇವು ಚರ್ಚಾರ್ಹ. ಕುಟಿಲ ರಾಜಕಾರಣಿಗಳು ದುಃಸ್ವಾರ್ಥಕ್ಕಾಗಿ ಮತಧರ್ಮಗಳ ನಡುವೆ ದ್ವೇಷ ಬಿತ್ತುತ್ತಿರುವ ಇಂದಿನ ದಿನಗಳಲ್ಲಿ, 'ಜಾತ್ಯತೀತ ರಾಷ್ಟ್ರ' ವೆಂದು ಇದೇ ಕುಟಿಲ ರಾಜಕಾರಣಿಗಳಿಂದ ಹಣೆಪಟ್ಟಿ(ಮಾತ್ರ) ಅಂಟಿಸಿಕೊಂಡಿರುವ ನಮ್ಮ ಭಾರತ ದೇಶದಲ್ಲಿ ಈ ಕುರಿತ ಚರ್ಚೆಗೆ, ವಾದಕ್ಕೆ ವಿವಾದಕ್ಕೆ ವಿಪುಲ ಅವಕಾಶಗಳಿವೆ. ಮತಧರ್ಮಗಳ ನಡುವೆ ಸೌಹಾರ್ದದ ಸೇತುಗಳಾಗಿದ್ದ ಧಾರ್ಮಿಕ ಆಚರಣೆಗಳು ಮತಧರ್ಮಗಳ ನಡುವೆ ದ್ವೇಷವನ್ನು ಇಂದು ಏನಾದರೂ ಬಿತ್ತತೊಡಗಿದ್ದರೆ ಅದು ಈ ವಂಚಕ ರಾಜಕಾರಣಿಗಳಿಂದಾಗಿಯೇ. ಅದಕ್ಕೆ ರಾಮನೂ ಕಾರಣನಲ್ಲ, ಅಯೋಧ್ಯೆಯೂ ಕಾರಣವಲ್ಲ, ಸತ್ಯನಾರಾಯಣ ಅವರೂ ಅಲ್ಲ, ಈ ಆನಂದರಾಮನೂ ಅಲ್ಲ. ಆದ್ದರಿಂದ ಅಯೋಧ್ಯೆ(ಯಾತ್ರೆ)ಗೇ ಬಹಿಷ್ಕಾರ ಸಲ್ಲ.

ಚಿತ್ತವಿಲ್ಲದ ಮೂರ್ತಿಯನು
ಮತ್ತೆಷ್ಟು ಕೆತ್ತಿದರೇನು ?
ಒತ್ತಿ ತುಂಬಲು ಬಹುದೆ
ಸತ್ತ್ವ ಚೈತನ್ಯಗಳನು।

# ಶಿಶಿಲರ ಕಾದಂಬರಿಗಳು

**ಡಾ. ಮಾಧವ ಪೆರಾಜೆ**

ಈ ಲೇಖನದಲ್ಲಿ ಶಿಶಿಲರ ಕಾದಂಬರಿಗಳ ಕುರಿತು ವಿಮರ್ಶೆಯನ್ನು (ಈಗಿನ ಚಾಲ್ತಿಯ ಅರ್ಥದಲ್ಲಿ) ಮಾಡುವ ಉದ್ದೇಶ ನನಗಿಲ್ಲ. ಹಾಗೆಂದು ಇದು ಅವರ ಪರವಾದ ತುತ್ತೂರಿಯೂ ಅಲ್ಲ. ಕನ್ನಡ ಕಾದಂಬರಿ ಮತ್ತು ಅದಕ್ಕೆ ಸಂಬಂಧಿಸಿದ ವಾಗ್ವಾದಗಳು ಯಾವ ಸ್ಥಿತಿಯಲ್ಲಿವೆ ಎಂದೂ ಹಾಗೂ ಅದನ್ನು ಅರ್ಥ ಮಾಡಿಕೊಳ್ಳುವುದು ಹೇಗೆ ಎಂದೂ ಶಿಶಿಲರ ಕಾದಂಬರಿಗಳ ಮೂಲಕ ವಿವರವಾಗಿ ಮಂಡಿಸುವುದು ಈ ಬರವಣಿಗೆಯ ಉದ್ದೇಶವಾಗಿದೆ.

ಶಿಶಿಲರು ಸಮಾಜವಿಜ್ಞಾನ ಎಂದರೆ ಅರ್ಥಶಾಸ್ತ್ರದಲ್ಲಿ ಪಾಂಡಿತ್ಯ ಪಡೆದವರು. ಆದರೀಗ ಅವರಿಗೆ ಸಾಹಿತ್ಯದಲ್ಲಿ ಹೆಚ್ಚಿನ ಆಸಕ್ತಿ ಬಂದಿದೆ. ಅವರು ಅರ್ಥ ಶಾಸ್ತ್ರದಲ್ಲಿ 110ಕ್ಕೂ ಮಿಗಿಲಾಗಿ ಪಠ್ಯ ಪುಸ್ತಕಗಳನ್ನು ಬರೆದಿದ್ದಾರೆ. ಹಾಗಿದ್ದರೂ ಅವರಿಗೆ ಸಾಹಿತ್ಯ ಬರವಣಿಗೆಯಲ್ಲಿ ಪ್ರೀತಿಯಿರುವುದು ಗುಟ್ಟೇನೂ ಅಲ್ಲ. ನಾನೂ ಮೂಲತಃ ಸಾಹಿತ್ಯದ ವಿದ್ಯಾರ್ಥಿ. ಹಾಗೆ ನೋಡಿದರೆ ಸಾಹಿತ್ಯದ ಬಗೆಗಿನ ನನ್ನ ಆಸಕ್ತಿ ಶಾಲೆ ಕಲಿತುದರಿಂದ ಬಂದುದಲ್ಲ. ಅದು ಯಕ್ಷಗಾನದಿಂದ ನನಗೆ ದತ್ತವಾದುದು. ಆದರೆ ಈಗ ನನಗೆ ಸಾಹಿತ್ಯದಲ್ಲಿ ಶಿಶಿಲರಿಗೆ ಇರುವಷ್ಟು ಆಸಕ್ತಿ ಉಳಿದಿಲ್ಲ. ಇದಕ್ಕೆ ಮುಖ್ಯ ಕಾರಣ ನಾನು ಸ್ಟೀಫನ್ ಹಾಕಿಂಗ್‌ನ 'ದಿ ಬ್ರೀಫ್ ಹಿಸ್ಟ್ರಿ ಆಫ್ ಟೈಮ್'ನ್ನು ಕನ್ನಡಕ್ಕೆ ತಂದಿರುವುದಾಗಿದೆ. ಭೌತಶಾಸ್ತ್ರಕ್ಕೆ ಸಂಬಂಧಿಸಿದ ಆ ಕೃತಿಯಿಂದ ಸಾಹಿತ್ಯದ ಓದು ನಮ್ಮ ಅರಿವನ್ನು ವಿಸ್ತರಿಸುವುದಿಲ್ಲ ಎನ್ನುವ ನಿಲುವಿಗೆ ಬಂದ ನಾನು ನನ್ನ ಓದನ್ನು ವಿಜ್ಞಾನ ಮತ್ತು ಸಮಾಜ ವಿಜ್ಞಾನದ ಕಡೆಗೆ ವಿಸ್ತರಿಸಿದ್ದೇನೆ. ಹೀಗೆ ಶಿಶಿಲರು ಮತ್ತು ನಾನು (ಅವರು ನನ್ನ ಗುರು ನಾನು ಅವರ ಶಿಷ್ಯನಾಗಿದ್ದಾಗಲೂ) ತದ್ವಿರುದ್ಧ ನಡೆಯನ್ನುಳ್ಳವರು. ಬಹುಶಃ ಇದು ಸಂಧಿಸುವ ದೃಷ್ಟಿಕೋನವೇ ಅಲ್ಲ. ಆದರೂ ವ್ಯಕ್ತಿತ್ವ, ಗೌರವ ಮತ್ತು ಪ್ರೀತಿಯ ನಡುವೆ ಅದೇನೂ ಸಮಸ್ಯೆಯಾಗುವುದಿಲ್ಲ. ಮಹಾಕವಿ ಪಂಪ ಹೇಳಿರುವ ಹಾಗೆ–
'ಗರ್ವಮೇ ದೋಷಂ ಅಳ್ತಿಗಂ ದೋಷಮೇ?'

ನಾವು ಎಷ್ಟೇ ನಮ್ಮ ದೇಶ, ಸಂಸ್ಕೃತಿ ಮತ್ತು ಸಾಹಿತ್ಯಗಳನ್ನು ಅರ್ಥಮಾಡಿಕೊಂಡಿದ್ದೇವೆ; ತಿಳಿದುಕೊಂಡಿದ್ದೇವೆ ಎಂದರೂ ಬ್ರಿಟಿಷರು ಸು.200 ವರ್ಷ ನಮ್ಮನ್ನು ಆಳಿರುವುದನ್ನು ಮರೆಯುವಂತಿಲ್ಲ. ಈ ಅವಧಿಯಲ್ಲಿ ಅವರು ನಮ್ಮ ದೇಶಕ್ಕೆ ಆರ್ಥಿಕ ಬಡತನವನ್ನು ಮಾತ್ರ ತಂದುದಲ್ಲ; ಬೌದ್ಧಿಕ ಬಡತನವನ್ನೂ ತಂದಿದ್ದಾರೆ. ಸ್ವಾತಂತ್ರ್ಯೋತ್ತರದ ಈ ದಿನಮಾನಗಳಲ್ಲಿ ನಾವು ಬ್ರಿಟಿಷರಿಂದ ದತ್ತವಾದ ವಿದ್ಯಾಭ್ಯಾಸದಿಂದ, ಅವರು ಬರೆದಿರುವ

ಪುಸ್ತಕಗಳಿಂದ ಜ್ಞಾನವನ್ನು ಪಡೆಯುತ್ತಿದ್ದೇವೆ. ಇಲ್ಲಿಯವರಗೂ ಅದನ್ನು ಓದುತ್ತ ಬಂದಿದ್ದೇವೆ. ಅದಕ್ಕೆ ಸಾಕ್ಷಿಯಾಗಿ ವಿಶ್ವ ವಿದ್ಯಾಲಯಗಳ ಸಂಶೋಧನೆಗಳು, ಪಠ್ಯ ಪುಸ್ತಕಗಳು, ದಿನ ಪತ್ರಿಕೆಗಳಲ್ಲಿ ನಡೆಯುತ್ತಿರುವ ಚರ್ಚೆಗಳು, ನಮ್ಮ ದೈನಂದಿನ ಬದುಕು ಎಲ್ಲವೂ ಇವೆ. ಇತ್ತೀಚಿನವರೆಗೂ ಅವುಗಳನ್ನು ಓದಿದಾಯಿತು. ಈಗಲಾದರೂ ಅವುಗಳನ್ನು ಅರ್ಥ ಮಾಡಿಕೊಳ್ಳುವ ಪ್ರಯತ್ನಕ್ಕೆ ತೊಡಗಬೇಕು. ಸಾಹಿತ್ಯಕ್ಕೆ ಸಂಬಂಧಿಸಿದ ಚಿಂತನೆಗಳ ಸ್ಥಿತಿಯೂ ಹಾಗೆಯೇ. ಕಾದಂಬರಿ ಎನ್ನುವ ಸಾಹಿತ್ಯ ಪ್ರಕಾರವೊಂದು ನಮಗೆ ಹೊಸದಾಗಿ ಪರಿಚಯವಾಯಿತು. ಅದರ ಅಗತ್ಯ ನಮಗಿತ್ತೇ ಇಲ್ಲವೇ ಎನ್ನುವ ಪ್ರಶ್ನೆಯೇ ಆಗ ಎದುರಾಗಲಿಲ್ಲ. ನಮ್ಮಲ್ಲಿದ್ದ ಸಾಹಿತ್ಯ ಪರಂಪರೆ ಸತ್ಯಹೀನ ಎಂದುಕೊಂಡೆವು. ಹೀಗೆ ಹೊಸದಾಗಿ ಸಾಹಿತ್ಯ ಪ್ರಕಾರವನ್ನು ಸೃಷ್ಟಿ ಮಾಡಿದೆವು. ಕತೆ, ಕಾದಂಬರಿ, ಕವನ ಮೊದಲಾದುವುಗಳೆಲ್ಲಾ ಹೀಗೆ ನಮಗೆ ಪಾಶ್ಚಾತ್ಯರಿಂದ ಆಮದಾಗಿ ಬಂದವು. ನಾವು ಅದನ್ನು ಅನುಕರಿಸುತ್ತಿದ್ದೇವೆ. ಶಿಶಿಲರು ತೊಡಗಿಸಿಕೊಂಡ ಕಾದಂಬರಿ ಎನ್ನುವ ಸಾಹಿತ್ಯ ಪ್ರಕಾರದ ಬಗೆಗೆ ಹೇಳುವುದಾದರೆ ಅದು ನಮಗೆ ಅಪರಿಚಿತವಾದ ಒಂದು ಸಾಹಿತ್ಯ ಪ್ರಕಾರವಾಗಿದೆ. ಶಿಶಿಲರ ಕಾದಂಬರಿಯನ್ನು ಹಿನ್ನೆಲೆಯಾಗಿಟ್ಟೇ ಈ ವಿಷಯವನ್ನು ವಿವರಿಸುವ ಪ್ರಯತ್ನ ಮಾಡುತ್ತೇನೆ.

ಶಿಶಿಲರ ಹೆಚ್ಚಿನ ಕಾದಂಬರಿಗಳು ಪುರಾಣ ಇಲ್ಲವೇ ಇತಿಹಾಸಕ್ಕೆ ಸಂಬಂಧಿಸಿದುವು. ಇಂತಹ ಕಾದಂಬರಿಗಳಲ್ಲಿ ಶಿಶಿಲರು ತಮ್ಮತನವನ್ನು ಮೆರೆದಿದ್ದಾರೆ ಎನ್ನುವುದನ್ನು ನಾನು ಅಲ್ಲಗಳೆಯುವುದಿಲ್ಲ. 'ಮೂಗು' ಕಾದಂಬರಿಯಲ್ಲಿ ಅವರು ರಾಮಾಯಣವನ್ನು ಯಥಾವತ್ತಾಗಿ ಹೇಳಿಲ್ಲ. ಅದರಲ್ಲಿ ಅವರು ಮಾಡಿರುವ ಪಲ್ಲಟಗಳು ಆಧುನಿಕ ಕಾಲದ ದೃಷ್ಟಿಯಿಂದ ಸಮರ್ಪಕ ವಾಗಿಯೇ ಇವೆ. ಹಾಗೆಯೇ 'ಪುಂಸ್ತ್ರೀ' ಕಾದಂಬರಿಯಲ್ಲಿಯೂ ಅವರು ಕಾದಂಬರಿಕಾರನ ನೈಪುಣ್ಯವನ್ನು ಮೆರೆದಿದ್ದಾರೆ. ಕಾಶೀರಾಜನ ಮಗಳಾದ ಅಂಬೆ ಮಹಾಭಾರತದಲ್ಲಿ ತುಂಬ ನೊಂದ ಸ್ತ್ರೀಯಾಗಿ ನಮಗೆ ಕಂಡುಬರುತ್ತಾಳೆ. ಅವಳ ಮೂಲಕ ಕನ್ನಡದಲ್ಲಿ ಕಾದಂಬರಿಯೊಂದು ಬಂದಿದೆ ಎಂದರೆ ಅದು ಕನ್ನಡಿಗರಿಗೆ ಅಷ್ಟೊಂದು ಮನಸ್ಸಿಗೆ ಕಾಡುವ ಪಾತ್ರ ಎಂದೇ ಅರ್ಥ. ಹಾಗೆಯೇ ಶರಶಯ್ಯೆಯಲ್ಲಿ ಭೀಷ್ಮ ಆ ನೋವಿನ ಮಧ್ಯೆಯೂ 'ಗಂಡೂ ಅಲ್ಲದ ಹೆಣ್ಣೂ ಅಲ್ಲದ ಜೀವಿಯಾಗಿ ಜನಿಸಿ ನಿನ್ನನ್ನು ಕೊಲುತ್ತೇನೆ' ಎನ್ನುವ ಅಂಬೆಯ ಮಾತನ್ನು ಮತ್ತೆ ಮತ್ತೆ ಧ್ಯಾನಿಸುವುದು–ಆ ಮೂಲಕ ಕಥೆ ಸಾಗುವುದು–ಕಾದಂಬರಿಯ ತಂತ್ರಗಾರಿಕೆಯಿಂದ ಉತ್ತಮ ಕಲೆಗಾರಿಕೆಯೇ ಆಗುತ್ತದೆ. ಏಕೆಂದರೆ, ಪುರಾಣದ ಕಥೆಯನ್ನು ಕಾದಂಬರಿಯಾಗಿ ಪರಿವರ್ತನೆ ಮಾಡುವಾಗ, ಅದು ಮತ್ತೆ ಪುರಾಣ ಆಗದ ಹಾಗೆ ನೋಡಿಕೊಳ್ಳುವುದೇ ದೊಡ್ಡ ಸಮಸ್ಯೆ. ಪುರಾಣದ ಗುಣವೇ ಹಾಗೆ – ಅದಕ್ಕೆ ದೇಶ–ಕಾಲ ಹಾಗೂ ತರ್ಕಬದ್ಧತೆ ಬೇಕಾಗಿಯೇ ಇಲ್ಲ. 'ಒಂದಾನೊಂದು ಕಾಲದಲ್ಲಿ ಒಂದು ಊರಿನಲ್ಲಿ ಒಬ್ಬ ರಾಜ' ಎಂದಾಗ ಅದು ಪುರಾಣವಾಗುತ್ತದೆ. ಆದರೆ–– ಮುಂದಿನ ಜನ್ಮ ಅಂತನ್ನುವುದು ಒಂದು ಇರುವುದೇ ಆದಲ್ಲಿ ಗಂಡೂ ಅಲ್ಲದ, ಹೆಣ್ಣೂ ಅಲ್ಲದ ಜೀವಿಯಾಗಿ ಜನಿಸಿ ನಿನ್ನನ್ನು ಕೊಲ್ಲುತ್ತೇನೆ.

ನಿಧಾನವಾಗಿ ಕಣ್ಣು ತೆರೆದು ದಿಟ್ಟಿಸುವಾಗ ನೆನಪಾದ ಮಾತುಗಳವು. ಮಲಗಿದಲ್ಲಿಂದಲೇ ಎಡಗೈ ಎದೆಯನ್ನು ಮೃದುವಾಗಿ ನೀವತೊಡಗಿತು. ನೋವಾಗುತ್ತಿದೆ, ತುಂಬಾ ನೋವಾಗುತ್ತಿದೆ. ಹೃದಯಕ್ಕೆ ನಾಟಿದ ಬಾಣ ಹಾಗೆಯೇ ಇದೆ. ಅದು ನಾಟಿದಾಗ ಎಳೆದು ತೆಗೆಯಲು ಯತ್ನಿಸಿ ವಿಫಲವಾದರೂ ನೆನಪಿಗೆ ಬಂತು. ಈಗ ಅದನ್ನು ತೆಗೆದು ಬಿಡಲೇ ಎಂದು ಬಲಗೈಯನ್ನು ಬಾಣದತ್ತ ಸರಿಸಿದಾಗ ಅವನು ಕಳವಳದಿಂದ ಮುಂದಕ್ಕೆ ಬಂದ.

ತುಂಬಾ ನೋವಾಗುತ್ತಿದೆಯೇ ತಾತಾ? ಸ್ವಲ್ಪ ಸಹಿಸಿಕೊಳ್ಳಿ. ಬಾಣವನ್ನು ಕೀಳಬಾರದೆಂದು

ರಾಜ ವೈದ್ಯರು ಹೇಳಿದ್ದಾರೆ. ಗಾಯವಾದಲ್ಲಿ ಹಚ್ಚಲು ಲೇಪ ಸಿದ್ಧಗೊಳ್ಳುತ್ತಿದೆ.. ವೈದ್ಯರು ನಿಮಗಾಗಿ ನೋವು ನಿವಾರಕ ಗುಳಿಗೆಗಳನ್ನು ಮತ್ತು ಕಷಾಯವನ್ನು ಅಣಿಗೊಳಿಸುತ್ತಿದ್ದಾರೆ.........

ಎಂದಾಗ ಅದು ಕಾದಂಬರಿಯಾಗುತ್ತದೆ. ಅಂದರೆ ಅಲ್ಲಿ ತರ್ಕಕಬದ್ಧತೆ, ದೇಶ–ಕಾಲಗಳ ವಿವರ ಇರುತ್ತದೆ ಎಂದರ್ಥ.

ಹೀಗೆ ಶಿಶಿಲರು ಪುರಾಣದ ವಸ್ತುವನ್ನು ಕಾದಂಬರಿಯಾಗಿ ಹೇಳಬಲ್ಲರು. ಕನ್ನಡದ ಮಟ್ಟಿಗೆ ಹೇಳುವುದಾದರೆ ಈಗ ಖ್ಯಾತನಾಮಧೇಯರು ಎನಿಸಿಕೊಂಡವರಾದವರೂ ಮಾಡುವುದಾದರೂ ಏನು? ಯಾರೋ ಹೇಳಿದ ಕಥೆಯನ್ನು, ಬಾಲ್ಯದಲ್ಲಿ ಕಂಡ ಯಾವುದೋ ಘಟನೆಯನ್ನು, ಯಾರದೋ ಮನೆಯ ಸಮಸ್ಯೆಯನ್ನು ತನ್ನದೆ ಭಾಷೆಯಲ್ಲಿ ತನ್ನದೇ ರೀತಿಯಲ್ಲಿ ಜೋಡಿಸಿ ಕಾದಂಬರಿಯನ್ನಾಗಿ ಅವರು ಮಾಡುವುದು ತಾನೇ! ತನ್ನ ಸಾಕ್ಷೀ ಪ್ರಜ್ಞೆಯಿಂದ ಅದನ್ನು ಅನುಭವಿಸಿ, ದೇಶ ಹಾಗೂ ಕಾಲಾತೀತವಾಗಿ ಒಂದು ಕಥೆಯನ್ನು, ಜೀವನವನ್ನು ನಿರೂಪಿಸುವವರು ಈಗ ಯಾರಿದ್ದಾರೆ? ಆ ಅರ್ಥದಲ್ಲಿ ಶಿಶಿಲರ ಸಾಧನೆ ಸಣ್ಣದು ಎಂದು ನಾನು ಭಾವಿಸುವುದಿಲ್ಲ. ಆದರೆ ಪುರಾಣವನ್ನು ಕಾದಂಬರಿಯಾಗಿ ಹೇಳುವುದು ಎನ್ನುವುದನ್ನು ನಾವು ಅರ್ಥ ಮಾಡಿಕೊಳ್ಳುವುದು ಹೇಗೆ? ಇದುವೇ ಶಿಶಿಲರ ಕಾದಂಬರಿಗೆ ಸಂಬಂಧಿಸಿದ ಮೊದಲ ಪ್ರಶ್ನೆ. ಈಗ ಈ ಪ್ರಶ್ನೆಗೆ ಉತ್ತರ ನೀಡುವುದಲ್ಲ–ಅದನ್ನು ಅರ್ಥ ಮಾಡಿಕೊಳ್ಳೋಣ. ಇದು ಶಿಶಿಲರು ಬರೆದ ಕಾದಂಬರಿಗೆ ಮಾತ್ರವಲ್ಲ, ಇಂತಹ ಯಾವುದೇ ಕಾದಂಬರಿಗಳಿಗೂ ಸಂಬಂಧಿಸಿದ ವಿವರಣೆಯೂ ಆಗುತ್ತದೆ.

ನಮಗೆ ಪುರಾಣಗಳು ರಚನೆಗೊಂಡಿದ್ದ ಕಾಲದಲ್ಲಿ ಅವು ಜನಗಳಿಗೆ ಹೇಗೆ ಪರಿಚಯವಾಗುತ್ತಿದ್ದವು ಎಂದು ತಿಳಿಯುವುದಿಲ್ಲ. ಆದರೆ ಕಾಳಿದಾಸನ ಒಂದು ಶ್ಲೋಕದಲ್ಲಿ 'ಪುರಾಣಮಿತ್ಯೇವ ನ ಸಾಧು ಸರ್ವಂ' ಎನ್ನುವ ಮಾತು ಬರುತ್ತದೆ. ಅಂದರೆ ಪುರಾಣ ದಲ್ಲಿರುವುದನ್ನು ಒಂದು ಕಾಲಕ್ಕೆ 'ಜನ ಸತ್ಯ' ಎಂದೇ ಭಾವಿಸುತ್ತಿದ್ದರು ಎಂದು ಇದರಿಂದ ತಿಳಿಯಬಹುದು. ಕಾಳಿದಾಸನ ಕಾಲಕ್ಕೆ ಅದರ ಬಗೆಗೆ ಅನುಮಾನಗಳು ಮೂಡಿದುದರ ಪರಿಣಾಮವೇ ಈ ಶ್ಲೋಕ ಎಂದೆನ್ನಬಹುದು. ಅಂದರೆ ಆಗ ಪುರಾಣಗಳ, ಸತ್ಯಾಸತ್ಯತೆಯನ್ನು ಕಾವ್ಯಗಳು ಪ್ರಶ್ನೆ ಮಾಡತೊಡಗಿದವು ಎಂದೆನಿಸುತ್ತದೆ. ಆದರೆ ಇದು ರಾಮಾಯಣದ ಕಾಲಕ್ಕೆ ಸಲ್ಲುವ ಮಾತಲ್ಲ. ಏಕೆಂದರೆ ರಾಮಾಯಣವು ಕಾವ್ಯವೂ ಹೌದು ಪುರಾಣವೂ ಹೌದು ಅದರ ಗುಣದಲ್ಲಿ ಅಂತಹ ವ್ಯತ್ಯಾಸವೇನೂ ಕಂಡುಬರುವುದಿಲ್ಲ. ಆದರೆ ನಾವು ಕಾಳಿದಾಸನ ಕಾಲದಲ್ಲಿದ್ದೇವೆ. (ಅದು ಕ್ರಿಸ್ತಪೂರ್ವವೇ ಇರಲಿ, ಕ್ರಿಸ್ತಶಕವೇ ಇರಲಿ!) ಕವಿಗಳು ಪುರಾಣಗಳ ಬಗೆಗೆ ಭಿನ್ನ ಧೋರಣೆಗಳನ್ನು ತಳೆದಿದ್ದ ಕಾಲವದು. ಈ ಪರಂಪರೆಯನ್ನು ಹಾಗೆ ಮುಂದುವರಿಸುತ್ತ ಬಂದರೆ, ಕನ್ನಡ ಕಾವ್ಯಪರಂಪರೆಗೆ ನಾವು ಬಂದು ನಿಲ್ಲುತ್ತೇವೆ. ನಮಗೆ ದೊರೆಯುವ ಮೊದಲ ಕಾವ್ಯವೇ 'ವಿಕ್ರಮಾರ್ಜುನ ವಿಜಯಂ' ಎನ್ನುವುದಾಗಿದೆ. ಅದು ಪುರಾಣವನ್ನು ಮತ್ತು ರಾಜನನ್ನು 'ತಗುಳ್ಚಿ' ಹೇಳಿದ ಕಥೆ. ಆದರೂ ಅಲ್ಲಿ ಕಾದಂಬರಿಯ ಗುಣವಿಲ್ಲ. ಏಕೆಂದರೆ ಕೃಷ್ಣ ವಿಶ್ವರೂಪ ತೋರಿಸುತ್ತಾನೆ, ಅರ್ಜುನ ಇಂದ್ರಕೀಲಕ್ಕೆ ತಪಸ್ಸಿಗೆ ಹೋಗುತ್ತಾನೆ; ಶಿವ ಪ್ರತ್ಯಕ್ಷನಾಗುತ್ತಾನೆ; ಪುರಾಣದಲ್ಲಿರುವುದೆಲ್ಲವೂ ಇದೆ. ಎಂದರೆ ಪುರಾಣವನ್ನು ವರ್ತಮಾನದಲ್ಲಿ ಯಾವುದೇ ತೊಡಕಿಲ್ಲದೆ ಅರ್ಥಮಾಡಿ ಕೊಳ್ಳುವುದಕ್ಕೆ ಸಾಧ್ಯ ಎನ್ನುವುದೇ ಪಂಪನ ನಂಬುಗೆ. ಹಾಗಾದುದರಿಂದ ಅರಿಕೇಸರಿಯು, ಅರ್ಜುನನೂ ಅಗುತ್ತಾನೆ; ಅರ್ಜುನನು ಅರಿಕೇಸರಿಯೂ ಆಗುತ್ತಾನೆ. ನಮ್ಮ ಚರ್ಚೆಗೆ ಅನುಕೂಲವಾಗುವಂತೆ ಪುರಾಣ ಎನ್ನುವುದು ಒಂದು ಸಂಕೇತವಾದರೆ, ಅದನ್ನು ಅರ್ಥ ಮಾಡಿಕೊಳ್ಳುವುದಕ್ಕೆ ಹತ್ತನೇ ಶತಮಾನದವರಿಗೆ

ಸಮಸ್ಯೆಯಾಗಲಿಲ್ಲ ಎಂದಾಯಿತು. ಆದರೆ ಇಪ್ಪತ್ತೊಂದನೆಯ ಶತಮಾನದಲ್ಲಿ ನಾವು ಹೊಸ ಸಮಸ್ಯೆಯನ್ನು ಎದುರಿಸುತ್ತಿದ್ದೇವೆ. ಪುರಾಣಗಳಲ್ಲಿರುವ ಸಂಕೇತವನ್ನು ನಾವು ಈಗ ಅರ್ಥ ಮಾಡಿಕೊಳ್ಳುವ ಸ್ಥಿತಿಯಲ್ಲಿಲ್ಲ. ಅದಕ್ಕಾಗಿ ಅದನ್ನು ವಿವರಿಸುತ್ತಿದ್ದೇವೆ. ಗದ್ಯದ ಗುಣವೇ ವಿವರಣೆ–ಕಾದಂಬರಿ ಎಂದರೆ ಅದುವೇ. ಪುರಾಣದ ಸಂಕೇತವನ್ನು ನಾವು ಈಗ ವಿವರಿಸುವ ಸ್ಥಿತಿಯಲ್ಲಿದ್ದೇವೆ. ಶಿಶಿಲರೂ ತಮ್ಮ ಕಾದಂಬರಿಗಳಲ್ಲಿ ಅದನ್ನೇ ಮಾಡುತ್ತಿದ್ದಾರೆ. ಅವರು ಮಾತ್ರವಲ್ಲದೆ ಪುರಾಣದ ಆಧಾರದಲ್ಲಿ ಕಾದಂಬರಿಯನ್ನು ಬರೆದವರೆಲ್ಲರೂ –ಇದನ್ನೇ ಮಾಡಿದ್ದಾರೆ. ಹಾಗಾದರೆ ಈ ಸ್ಥಿತಿಯನ್ನು ಅರ್ಥ ಮಾಡಿಕೊಳ್ಳುವುದು ಹೇಗೆ?

ಅದು ಅನಿವಾರ್ಯವಾದುದೇನಲ್ಲ. ಏಕೆಂದರೆ ಶಿಶಿಲರು ಹುಟ್ಟಿ ಬೆಳೆದ ಊರಿನಲ್ಲಾಗಲೀ ನಾನು ಹುಟ್ಟಿದ ಊರಿನಲ್ಲಾಗಲೀ ಈ ಸಮಸ್ಯೆಯೇ ಇಲ್ಲ. ನಾವು ವಿದ್ಯಾವಂತರಲ್ಲದವರು ಎಂದು ಯಾರನ್ನು ಹೇಳುತ್ತಿದ್ದೇವೆಯೋ ಅವರಿಗೆ ಇದು ಸಮಸ್ಯೆಯೇ ಅಲ್ಲ. ನಮಗೆಲ್ಲ ಗೊತ್ತಿರುವ ಹಾಗೆ ಪುರಾಣವೇ ಪ್ರಧಾನವಾದ ಯಕ್ಷಗಾನದಲ್ಲಿ ಈ ಪ್ರಶ್ನೆಗಳೇ ಬರುವುದಿಲ್ಲ. ಅಮೃತಮಥನ ಸಂದರ್ಭದಲ್ಲಿ ವಿಷ್ಣು ಮೋಹಿನಿ ರೂಪವನ್ನು ಹೇಗೆ ತಾಳಿದ?, ಅವನು ವೇಷ ಬದಲಾಯಿಸಿದನೋ ಅಥವಾ ದೇಹದೊಳಗಿನ ಹಾರ್ಮೋನುಗಳು ಸಹಿತ ಬದಲಾವಣೆಯಾದನೋ ಎಂದು ಈವರೆಗೆ ಯಾವ ಯಕ್ಷಗಾನ ಪ್ರೇಕ್ಷಕನೂ ಕೇಳಿಲ್ಲ. ಆದರೆ ಈಗ ನಾವು ಈ ಪ್ರಶ್ನೆಯನ್ನು ಕೇಳುತ್ತಿದ್ದೇವೆ. ಯಕ್ಷಗಾನದ ಪ್ರೇಕ್ಷಕರು ಇಂತಹ ಎಷ್ಟೋ ಪ್ರಸಂಗಗಳನ್ನು ನೋಡಿ ಆನಂದ ಪಟ್ಟಿದ್ದಾರೆ. ಅಥವ ಅಂತಹ ಪ್ರಸಂಗಗಳು ಬೇಡ ಎಂದಾಗ, ಬೇಕೇ ಬೇಕು ಎಂದು ಹಟವನ್ನೇನೂ ಹಿಡಿದಿಲ್ಲ. ಇಂದು ಯಕ್ಷಗಾನ ಸುಳ್ಯದಲ್ಲಾಗಲೀ, ಕರಾವಳಿಯಲ್ಲಾಗಲೀ ಹಿಂದಿನಷ್ಟು ಜನಪ್ರಿಯವಾಗಿಲ್ಲ. ಸಾಮಾನ್ಯ ಜನರಿಗೆ ಅದರಿಂದ ದಿಗಿಲಾಗಿಲ್ಲ. ಆಧುನಿಕ ವಿದ್ಯಾಭ್ಯಾಸವನ್ನು ಪಡೆದ ಮಂದಿ ಪುರಾಣದ ಬಗೆಗೆ ಮತ್ತೆ ಮತ್ತೆ ಬರೆಯುತ್ತಿದ್ದಾರೆ. ದಿನ ನಿತ್ಯ ಪುರಾಣ ಪ್ರವಚನ, ಯಕ್ಷಗಾನಗಳಂತಹ ಪುರಾಣ ವಾತಾವರಣವಿರುವ ಕಡೆ ಸಾಮಾನ್ಯ ಜನ ಪುರಾಣದ ಗೊಡವೆಗೇ ಹೋಗುವುದಿಲ್ಲ. ಆದರೆ ಕಾದಂಬರಿಕಾರರು ಅದನ್ನು ಬಿಡುವುದಿಲ್ಲ, ಇದಕ್ಕೇನೆನ್ನೋಣ?

ಆಧುನಿಕ ವಿದ್ಯಾಭ್ಯಾಸ, ಬ್ರಿಟಿಷ್ ಚಿಂತನಕ್ರಮ ನಮ್ಮಲ್ಲಿ ಹೊಸ ಎಚ್ಚರವನ್ನು ಮೂಡಿಸಿರುವುದರ ಜೊತೆಗೆ, ತನ್ನದೇ ಆದ ಯೋಚನ ಕ್ರಮವನ್ನೂ ನಮಗೆ ನೀಡಿದೆ. ಆಧುನಿಕ ವಿದ್ಯಾಭ್ಯಾಸವು ನಮಗೆ ವೈಚಾರಿಕತೆಯನ್ನಷ್ಟೇ ಕೊಟ್ಟಿರುವುದಲ್ಲ, ನಮ್ಮ ಮೆದುಳಿನ ಬಹುಭಾಗವನ್ನೂ ಆಕ್ರಮಿಸಿದೆ. ಅದು ನಮ್ಮ ಮೆದುಳಿಗೆ ನೇರವಾಗಿ ಲಗ್ಗೆ ಇಟ್ಟಿರುವುದರಿಂದಲೇ ಏನೂ ಸಮಸ್ಯೆಗಳಲ್ಲದ ಪುರಾಣಗಳು, ಸಂಕೇತಗಳು ನಮಗೆ ಸಮಸ್ಯೆಗಳಾಗುತ್ತವೆ. ಅಥವ ಸಂಕೇತಗಳನ್ನು ಹಿಂದಿನವರು ಅರ್ಥ ಮಾಡಿಕೊಳ್ಳುತ್ತಿದ್ದ ಹಾಗೆ ನಾವೀಗ ಅರ್ಥ ಮಾಡಿಕೊಳ್ಳಲಾರೆವು. ಕಾದಂಬರಿ ಎನ್ನುವ ಸಾಹಿತ್ಯ ಪ್ರಕಾರದ ನಿದರ್ಶನದಲ್ಲೇ ಹೇಳಬೇಕೆಂದರೆ, ನಿಜವಾದ ಅರ್ಥದಲ್ಲಿ ಚರಿತ್ರೆ, ಪುರಾಣ ಮತ್ತು ಜಾನಪದ ಇವುಗಳು ಕಾದಂಬರಿಗೆ ವಸ್ತುವಾಗುವುದಿಲ್ಲ. ಏಕೆಂದರೆ ಯಾವ ದೇಶದಿಂದ ನಮಗೆ ಈ ಕಾದಂಬರಿ ಎನ್ನುವ ಪ್ರಕಾರ ದತ್ತ ವಾಗಿದೆಯೋ ಆ ಇಂಗ್ಲೆಂಡ್‌ಗೆ ಅಂತಹ ಪ್ರಾಚೀನ ಇತಿಹಾಸವೇ ಇರಲಿಲ್ಲ. ಇನ್ನು ಪುರಾಣವಾದರೂ ಎಲ್ಲಿಂದ ಬರಬೇಕು? ಹಾಗೆಯೇ ಕ್ರಿಶ್ಚಿಯನ್ ರಿಲಿಜನ್ ಅಲ್ಲಿ ಹಬ್ಬಿದಂತೆಲ್ಲ ಜಾನಪದ ಜೀವನ ಎನ್ನುವುದೇ ಉಳಿಯಲಿಲ್ಲ. ಹಾಗಿರುವಾಗ ಜಾನಪದ ಎಲ್ಲಿಂದ ಬರಬೇಕು? ಆದರೆ ಪ್ರಾಚೀನ ಪರಂಪರೆ ಇರುವ ನಮ್ಮಂತಹ ದೇಶಗಳಲ್ಲಿ ಪುರಾಣಗಳು, ಇತಿಹಾಸ ಮತ್ತು ಜಾನಪದ–ಎಲ್ಲವೂ ಇವೆ. ಕಾದಂಬರಿ ಪ್ರಕಾರ ನಮಗೆ ಪರಿಚಯವಾದಾಗ ನಾವು

ವೈಚಾರಿಕತೆಯ ಹೆಸರಲ್ಲಿ ಪುರಾಣಗಳನ್ನೇ ಪ್ರಶ್ನೆ ಮಾಡುವುದಕ್ಕೆ ಹೊರಟೆವು. ಅದುವೇ ಕಾದಂಬರಿಯಾಯಿತು. ಪ್ರಶ್ನೆ ಮಾಡಬಾರದೆಂದಲ್ಲಾ, ಆದರೆ ಹಾವು ಮತ್ತು ಹಗ್ಗಗಳೆರಡೂ ಉದ್ದವೂ, ತೆಳ್ಳಗೂ ಇರುತ್ತವೆ ಎನ್ನುವ ಒಂದೇ ಕಾರಣಕ್ಕೆ ಅವುಗಳು ಸಮಾನವೆಂದು ಸಾದೃಶ–ವೈದೃಶಗಳನ್ನು ಹೇಳಿದರೆ ಹೇಗಾದೀತು?

ಶಿಶಿಲರಾಗಲೀ, ಭೈರಪ್ಪರಾಗಲಿ–ಅಥವ ಇನ್ನು ಯಾರೇ ಆಗಲಿ–ಅವರ ಪೌರಾಣಿಕ ಕಾದಂಬರಿಗಳು ಎದುರಿಸುವ ಪ್ರಶ್ನೆಗಳು ಇಂತಹುದೇ ಆಗಿದೆ. ಶೂರ್ಪನಖೆಯು ಸೀತಾಪಹರಣಕ್ಕೆ ಬಹಳ ಮುಖ್ಯವಾಗಿ ಕಾರಣಗಳಾಗುತ್ತಾಳೆ ಎನ್ನುವ ಕಾರಣಕ್ಕೆ, ಆಕೆಯ ಬಗೆಗೆ ರಾಮಾಯಣದಲ್ಲಿ ಹೇಳಲಾಗಿದೆ. ಅಲ್ಲೇ ಆಕೆಯ ಕುಲ–ಗೋತ್ರ ಎಲ್ಲವೂ ಬರುತ್ತದೆ. ಅನಂತರ ಅವಳ ಬಗೆಗೆ ರಾಮಾಯಣವು ಮೌನವಾಗುತ್ತದೆ. ರಾಮಾಯಣವು ಮೌನವಾದಲ್ಲಿಂದ ಶಿಶಿಲರ ಕಾದಂಬರಿಯು ಆರಂಭವಾಗುತ್ತದೆ. ತಾರ್ಕಿಕವಾಗಿ ಹೇಳುವುದಾದರೆ, ಈ ಮೌನವೇ ಅನೇಕ ಕಾದಂಬರಿಗಳಿಗೆ ಸಮಾನವಾದುದು. ಏಕೆಂದರೆ ಬರವಣಿಗೆಯನ್ನು ಆರಂಭ ಮಾಡಿದರೆ ಅದನ್ನು ಕೊನೆಗೊಳಿಸಲೇ ಬೇಕಾಗುತ್ತದೆ. ಮೌನವಾಗಿದ್ದರೆ ಅದು ನಿರಂತರವಾಗಿರುತ್ತದೆ! ಈ ಸೂಚನೆ ವಾಲ್ಮೀಕಿ ರಾಮಯಣದಲ್ಲಿದೆ. ಮೌನಕ್ಕೆ ಮಾತಿನ ರೂಪ ಕೊಟ್ಟಷ್ಟೂ ಸಂಕೇತದ ಅರ್ಥಬಾಹುಳ್ಯ ಸೀಮಿತವಾಗುತ್ತದೆ, ಅದು ವಿವರಣೆಗೆ ಒಳಗಾಗುತ್ತದೆ. ಸಂಕೇತವನ್ನು ವಿವರಿಸಿದಷ್ಟೂ ಅದಕ್ಕಿರುವ ಮುಕ್ತತೆ ಕಡಿಮೆಯಾಗುತ್ತಲೇ ಹೋಗುತ್ತದೆ. ಇಷ್ಟಕ್ಕೂ ವಾಲ್ಮೀಕಿ ರಾಮಾಯಣದಲ್ಲಿ ಶಿಶಿಲರ ಕಾದಂಬರಿಗಳಲ್ಲಿರುವ ಅರ್ಥ ಇಲ್ಲವೆಂದು ಹೇಳುವುದು ಹೇಗೆ? ಅಥವ ಭೈರಪ್ಪನವರ 'ಪರ್ವ' ಕಾದಂಬರಿಯಲ್ಲಿ ನಿರೂಪಿಸುವ ಅರ್ಥಗಳು ವ್ಯಾಸರ ಮಹಾಭಾರತದಲ್ಲಿಲ್ಲ ಎಂದು ನಾವು ಹೇಳುವುದಕ್ಕೆ ಆಧಾರಗಳೇನು? ಅಂತಹ ಅರ್ಥಗಳು ಇಲ್ಲದಿದ್ದರೆ ಅವು ಈ ಕಾದಂಬರಿಗಳಲ್ಲಿ ಮೂಡಿ ಬಂದಿರುವುದಾದರೂ ಎಲ್ಲಿಂದ? ಬೇರೆ ಮಾತಿನಲ್ಲಿ ಹೇಳುವುದಾದರೆ 'ಪುಂಸ್ತ್ರೀ' ಕಾದಂಬರಿಯಲ್ಲಿರುವುದು ವ್ಯಾಸರ ಮಹಾಭಾರತದಲ್ಲಿ ಇಲ್ಲ ಎನ್ನುವುದಕ್ಕೆ ಖಚಿತ ಆಧಾರಗಳೇನು? ಆಧುನಿಕ ವಿದ್ಯಾಭ್ಯಾಸ ಪದ್ಧತಿಯಿಂದಾಗಿ ಪುರಾಣಗಳ ಬಗೆಗೆ ಹೀಗೆ ನಾವು ಯೋಚಿಸಲು ಆರಂಭಿಸಿದ್ದೇವೆ ಎನ್ನುವುದನ್ನು ಬಿಟ್ಟರೆ ಬೇರೆ ಯಾವ ಉತ್ತರವೂ ಇದಕ್ಕೆ ಸಮರ್ಪಕವಾಗುವುದಿಲ್ಲ. ಏಕೆಂದರೆ, ಈಗಲೂ ಶಾಲೆಯ ಮುಖವನ್ನೇ ನೋಡದ ಎಷ್ಟೋ ಜನ ಅವಿದ್ಯಾವಂತರು ನಡುಗನ್ನಡದ ಕ್ಲಿಷ್ಟ ರಚನೆಗಳಿರುವ ಯಕ್ಷಗಾನ ಸಾಹಿತ್ಯಕ್ಕೆ ಸರಿಯಾದ ಅರ್ಥ ಹೇಳುತ್ತಾರೆ. ಅವರಿಗೆ ಆ ಜ್ಞಾನ ಬಂದಿರುವುದು ಎಲ್ಲಿಂದ? ಪುರಾಣಗಳಿಂದಲೇ ಎನ್ನುವುದು ಅದಕ್ಕೆ ಉತ್ತರವಾಗುತ್ತದೆ. ಹಾಗಾದರೆ ಪುರಾಣಗಳು ಇಂದು ನಮಗೆ ಸರಿಯಾದ ಅರ್ಥ ನೀಡುವುದಿಲ್ಲ; ಆ ಕಾರಣಕ್ಕೆ ಅವುಗಳನ್ನು ಮರುವ್ಯಾಖ್ಯಾನ ಮಾಡಬೇಕು ಎನ್ನುವ ತಿಳುವಳಿಕೆಗೆ ಆಧುನಿಕ ವಿದ್ಯಾಭ್ಯಾಸವೇ ಕಾರಣವಾಗಿದೆ ಎನ್ನುವುದು ಸ್ಪಷ್ಟವಾಯಿತು.

ಇನ್ನು ಇತಿಹಾಸಕ್ಕೆ ಸಂಬಂಧಿಸಿದಂತೆಯೂ ಇದೇ ತರ್ಕ ಮುಂದುವರಿಯುತ್ತದೆ. ಪಾಶ್ಚಾತ್ಯರು ಗತವನ್ನು ನೆನಪಿಡಬೇಕು ಎಂದು ನಂಬುವವರು. ಆ ಕಾರಣಗಳಾಗಿಯೇ ದಿನ ಪತ್ರಿಕೆ, ಇತಿಹಾಸ ಮೊದಲಾದುವು ಅವರಿಗೆ ಬೇಕಾಗುತ್ತವೆ. ಏಕೆಂದರೆ ಗತಕಾಲದಿಂದ ಭವಿಷ್ಯತ್ ಕಾಲವನ್ನು ಸರಿಪಡಿಸಿಕೊಳ್ಳಬಹುದು ಎನ್ನುವ ತಿಳುವಳಿಕೆಯವರದು. ಆಶ್ಚರ್ಯವೆಂದರೆ ಕನ್ನಡದಂತಹ ದೇಶ ಭಾಷೆಗಳಲ್ಲಿ ಭೂತಕಾಲ ಸೂಚಕ ಪದವೇ ಖಚಿತವಾಗಿಲ್ಲ! ಉದಾ: 'ಮುನ್ನ' ಎನ್ನುವ ಪದವು ಭೂತಕಾಲ ಸೂಚಕ ಪದವೂ ಹೌದು; ಭವಿಷ್ಯತ್ ಕಾಲ ಸೂಚಕ ಪದವೂ ಹೌದು! ಆದರೆ ಯುರೋಪಿನ ಭಾಷೆಗಳಲ್ಲಿ ಹಾಗಿಲ್ಲ, ಭೂತ–ಭವಿಷ್ಯತ್

ಕಾಲಗಳ ಬಗೆಗೆ ಖಚಿತತೆ ಇದೆ. ಕಾಲದ ಬಗೆಗೆ ನಮಗೆ ಚಕ್ರಾಕಾರದ ಕಲ್ಪನೆ ಇದೆ. ಜನರು ಒಂದು ಯುಗ ಕಳೆದು–ಇನ್ನೊಂದು ಯುಗ ಬರುವಾಗ ಪ್ರಳಯವಾಗುತ್ತದೆ ಎಂದು ನಂಬುತ್ತಾರೆ. ಎಂದರೆ ಹಿಂದಿನದನ್ನು ಮರೆಯಬೇಕು ಎಂದರ್ಥ. ಅದಕ್ಕಾಗಿಯೇ ನಾವು ಗತಿಸಿದ ಘಟನೆಗಳನ್ನು ದಾಖಲಿಸುವುದಿಲ್ಲ. ಇದು ದ್ವೇಷವನ್ನು, ವೈರವನ್ನು ಮರೆಯುವುದಕ್ಕೆ ನಿಜವಾಗಲೂ ಉತ್ತಮವಾದ ವಿಧಾನವಾಗಿದೆ. ಹಾಗಾದುದರಿಂದ ಭಾರತೀಯರಿಗೆ ಇತಿಹಾಸ ಪ್ರಜ್ಞೆ ಇಲ್ಲ ಎಂದಾಗ ನಾವು ನಿಜವಾಗಿಯೂ ಸಂತೋಷಪಡಬೇಕು. ಏಕೆಂದರೆ ಒಂದು ಸಂಸ್ಕೃತಿಯಲ್ಲಿ ಇರುವುದೆಲ್ಲವೂ ಇನ್ನೊಂದು ಸಂಸ್ಕೃತಿಯಲ್ಲಿ ಇರಬೇಕೆಂದೇನಿಲ್ಲ. ಆದರೆ ಆಧುನಿಕ ವಿದ್ಯಾಭ್ಯಾಸದಿಂದ ನಮಗೆ ನಮ್ಮ ಬಗೆಗೆ ಕೀಳರಿಮೆಯುಂಟಾಗಿದೆ. ಬ್ರಿಟಿಷರ ಮಾತಿಗೆ ಮರುಳಾದ ನಾವು ಇತಿಹಾಸವನ್ನು ಕಟ್ಟುತ್ತಿದ್ದೇವೆ. ರಾಮಜನ್ಮ ಭೂಮಿ–ಬಾಬ್ರಿ ಮಸೀದಿಯ ವಿವಾದವನ್ನು ಮೈಮೇಲೆ ಹಾಕಿಕೊಂಡಿದ್ದೇವೆ. ರಾಮನು ಅಯೋಧ್ಯೆಯಲ್ಲಿ ಹುಟ್ಟಿದನೇ ಎನ್ನುವ ಪ್ರಶ್ನೆ ಬ್ರಿಟಿಷರು ಬರುವ ತನಕ ನಮಗೆ ಮುಖ್ಯವಾಗಿರಲಿಲ್ಲ. ಬ್ರಿಟಿಷರು ಬಂದಮೇಲೆಯೇ ಏಕೆ ಮುಖ್ಯವಾಯಿತು. ಏಕೆಂದರೆ ಬ್ರಿಟಿಷರು ನೀಡಿದ ವಿದ್ಯಾಭ್ಯಾಸ, ಅವರು ಹುಟ್ಟು ಹಾಕಿದ ಶಾಸ್ತ್ರಗಳು ಕೂಡ ಜ್ಞಾನವನ್ನು ವಿಸ್ತರಿಸುವಂತವಲ್ಲ. ಅವು ನಮ್ಮ ಯೋಚನೆಯ ದಿಕ್ಕನ್ನು ತಪ್ಪು ದಾರಿಗೇ ಎಳೆಯುವಂಥವಾಗಿದ್ದವು. ಅವರು ಕಲಿಸಿದ ಇತಿಹಾಸ ಕೂಡ ಅಂತಹುದೇ ಒಂದು ಜ್ಞಾನಶಾಸ್ತ್ರವಾಗಿದೆ. ರಾಮ ಜನ್ಮ ಭೂಮಿ–ಬಾಬ್ರಿ ಮಸೀದಿ ಪ್ರಕರಣವು ಬ್ರಿಟಿಷರ ಇತಿಹಾಸಶಾಸ್ತ್ರ ನಿರ್ಮಿಸಿದ, ಇತಿಹಾಸ ಅಧ್ಯಾಪಕರು ನಿರ್ಮಿಸಿದ, ಈ ದೇಶದ ವಿಶ್ವವಿದ್ಯಾಲಯಗಳ ಇತಿಹಾಸ ವಿಭಾಗಗಳು ನಿರ್ಮಿಸಿದ ಸಮಸ್ಯೆಗಳಾಗಿವೆ, ಇರಲಿ, ಈಗ ಶಿಶಿಲರ ಕಾದಂಬರಿಗಳ ಹಿನ್ನೆಲೆಯಲ್ಲಿ ಈ ಸಮಸ್ಯೆಯನ್ನು ಅರ್ಥ ಮಾಡಿಕೊಳ್ಳೋಣ.

ಶಿಶಿಲರ ಕಾದಂಬರಿಗಳಲ್ಲಿ ಇತಿಹಾಸವನ್ನು ಪುನರ್‌ವ್ಯಾಖ್ಯಾನ ಮಾಡುವ ಪ್ರಯತ್ನ ನಡೆಯುತ್ತದೆ. 'ನದಿ ಎರಡರ–ನಡುವೆ' ಮತ್ತು 'ಮೂಡಣದ ಕೆಂಪು ಕಿರಣ' ಕಾದಂಬರಿಗಳು ಈ ರೀತಿಯ ಪ್ರಯತ್ನಗಳಾಗಿವೆ. ಒಂದುವೇಳೆ ಮಾಸ್ತಿಯವರ 'ಚಿಕವೀರ ರಾಜೇಂದ್ರ' ಇತಿಹಾಸ ವಸ್ತುವಾಗಿಯೂ ಕನ್ನಡದ ಮುಖ್ಯ ಕಾದಂಬರಿಯಾಗುವುದಾದರೆ, ಶಿಶಿಲರ 'ನದಿ ಎರಡರ ನಡುವೆ' ಕೂಡ ಅದೇ ಕಾರಣಕ್ಕೆ ಕನ್ನಡದ ಮುಖ್ಯಕಾದಂಬರಿಯಾಗುತ್ತದೆ. ಶಿಶಿಲರ 'ನದಿ ಎರಡರ ನಡುವೆ' ಕಾದಂಬರಿ ಲವಲವಿಕೆಯಿಂದ ಆರಂಭವಾಗುವುದು ಹೀಗೆ:

ಲಂಡನ್ನಿನ ಆರ್ಕ್ಸ್‌ಫರ್ಡ್ ಬೀದಿಯ ಆ ಮನೆಯ ಕಾಂಪೌಂಡು ಗೇಟಿನ ಬಳಿ ಕಪ್ಪು ಚಂದ್ರಕಾಂತ ಶಿಲೆಯ ನಾಮ ಫಲಕವೊಂದು ಎಲ್ಲರ ಗಮನ ಸೆಳೆಯುತ್ತಿತ್ತು.

ಶ್ರೀ ಶ್ರೀ ಚಿಕ್ಕವೀರರಾಜೇಂದ್ರ ಒಡೆಯರ್ ಬಹಾದ್ದೂರ್

ರಾಜ ಆಫ್ ಕೂರ್ಗ್, ಇಂಡಿಯಾ.

ಆ ಹೆಸರು ಬೀದಿ ನಿವಾಸಿಗಳ ಚರ್ಚೆಯ ವಸ್ತುವಾಗಿತ್ತು. ಈಸ್ಟ್ ಇಂಡಿಯಾ ಕಂಪೆನಿ ಇಂಡಿಯಾವನ್ನು ಆಳುತ್ತಿದೆ. ಅಲ್ಲಿಯ ರಾಜನೊಬ್ಬ ಇಲ್ಲಿ ವಲಸಿಗನಾಗಿ ಬದುಕುತ್ತಿದ್ದಾನೆ! ಇಷ್ಟು ದೊಡ್ಡ ಮನೆ ಇರಬೇಕಾದರೆ ಹಣ ಎಷ್ಟಿದೆಯೋ? ರಾಜನನ್ನು ಮಾತಾಡಿಸಬಹುದೋ? ಬಾರದೋ? ಎಂದು ಮೂಗುತೂರಿಸಬಾರದು ಎಂದುಕೊಂಡರೂ ಅವರಿಗೆ ರಾಜನ ಮನೆಯ ವಿಷಯ ತಿಳಿಸಲು ಒಬ್ಬ ಬಿಳಿಯರವ ಸಿಕ್ಕಿದ.

ಕ್ಯಾಪ್ಟನ್ ಕ್ಯಾಂಪ್ ಬೆಲ್ಲ್!

ಹೀಗೆ ಶಿಶಿಲರ ಕಾದಂಬರಿ ಸಲಿಲವಾಗಿ ಸಾಗುತ್ತದೆ. ಹಾಗೆಯೇ ಇತಿಹಾಸದಲ್ಲಿ ಇಲ್ಲದ ದೃಶ್ಯ ನಿರ್ಮಾಣ ಕೌಶಲ್ಯವೂ ಈ ಕಾದಂಬರಿಯಲ್ಲಿ ಚೆನ್ನಾಗಿ ಬಂದಿದೆ. ಉದಾ:

ಕೊಡಗಿನ ಉತ್ತರ ಭಾಗದ ಹಾವೇರಿ ಗ್ರಾಮದ ಹೊರಗಿನ ಆಲದ ಮರದ ಕಟ್ಟೆಯಲ್ಲಿ ಆ ಜಂಗಮ ಪದ್ಮಾಸನ ಹಾಕಿ ಕುಳಿತಿದ್ದ. ಅವನು ಕಣ್ಣು ಮುಚ್ಚಿ ಧ್ಯಾನಾಸಕ್ತನಾಗುವಂತೆ ಹೊರ ನೋಟಕ್ಕೆ ತೋರುತ್ತಿತ್ತು. ಸೂಕ್ಷ್ಮವಾಗಿ ಗಮನಿಸಿದರೆ ಅವನು ಸುತ್ತಮುತ್ತ ನಡೆಯುವ ಕ್ರಿಯೆಗಳಿಗೆ ನಿರ್ಲಿಪ್ತವಾಗಿಲ್ಲ ಎನ್ನುವುದು ವೇದ್ಯವಾಗುತಿತ್ತು.

ಅವನ ಮುಖದಲ್ಲೊಂದು ವೀರ ಕಳೆಯಿತ್ತು. ಅದು ಜಂಗಮರ ಸಾತ್ವಿಕ ಕಳೆಗಿಂತ ಭಿನ್ನವಾದದ್ದು. ಸಾಮುಗರಡಿಯಿಂದ ಆತನ ತೋಳುಗಳ ಮಾಂಸಖಂಡಗಳು ಉಬ್ಬಿ ಕೊಂಡಿದ್ದವು. ಜಂಗಮರಿಗೆ ಹಾಗಿರಲು ಸಾಧ್ಯವಿಲ್ಲ. ಅವನು ಯಾವುದೋ ಸಂದರ್ಭ ತಾನಾಗಿ ಬರಲಿ ಎಂದು ಕಾಯುವಂತಿದ್ದ. ಸಾಮು ಜತೆ ಯೋಗವನ್ನು ಅವನು ಮಾಡುತ್ತಿದ್ದಿರ ಬೇಕು. ಇಲ್ಲದಿದ್ದರೆ ಹಾಗೆ ಪದ್ಮಾಸನದಲ್ಲಿ ಅಷ್ಟು ಹೊತ್ತು ಕುಳಿತಿರಲು ಸಾಧ್ಯವಿರಲಿಲ್ಲ.... (ಪು.11)

ಹಾಗೆಯೇ ಚಿಕವೀರರಾಜೇಂದ್ರ ಮತ್ತು ಜೆ.ಎಸ್. ಮಿಲ್ಲರ ನಡುವೆ ಈ ಕಥೆ ಸಾಗುತ್ತದೆ. ಆ ತಂತ್ರಗಾರಿಕೆಯೂ ಚೆನ್ನಾಗಿಯೇ ಇದೆ. ನಿರೂಪಣೆಯಲ್ಲಿ ಏಕತಾನತೆಯನ್ನು ಮುರಿಯುವುದಕ್ಕೆ, ಇತಿಹಾಸವನ್ನು ಕಥೆಯ ರೂಪದಲ್ಲಿ ತರುವುದಕ್ಕೆ–ಮಧ್ಯೆ ಮಧ್ಯೆ ಸಂಭಾಷಣೆಯನ್ನು ಬಳಸುವುದಕ್ಕೆ– ಎಲ್ಲದಕ್ಕೂ ಈ ತಂತ್ರಗಾರಿಕೆ ಪ್ರಯೋಜನವಾಗಿದೆ. ಅದರ ಲಾಭವೂ ಕಾದಂಬರಿಗಾಗಿದೆ. ಆದರೆ ಇತಿಹಾಸ ಪ್ರಜ್ಞೆಯೇ ಇಲ್ಲದ ನಾವು (ಬ್ರಿಟಿಷರ ಪ್ರಕಾರ) ಇತಿಹಾಸವನ್ನು ಕಾದಂಬರಿಗಾಗಿ ಬರೆದಾಗ ಏನಾಗುತ್ತದೆ? ಇತಿಹಾಸ ಯಾವುದು ಕಾದಂಬರಿ ಯಾವುದು ಎನ್ನುವ ಖಚಿತ ವ್ಯತ್ಯಾಸವೇ ಗೊತ್ತಾಗುವುದಿಲ್ಲ. ನಕ್ಷೆ, ಗ್ರಂಥಋಣ ಎಲ್ಲವೂ ಬಂದು ಸೇರುತ್ತವೆ. ಆದರೆ ಕಾದಂಬರಿಗೆ ಗ್ರಂಥಋಣ ಬೇಕಿಲ್ಲ. ಏಕೆಂದರೆ ಅದು ಕಲ್ಪನೆಯಿಂದ ಸೃಷ್ಟಿಸುವುದಾಗಿರುತ್ತದೆ. ಇತಿಹಾಸದಲ್ಲಿ ಘಟನೆಯನ್ನು ಕಾಲ–ದೇಶದಲ್ಲಿಟ್ಟು ನೋಡಿದರೆ ಕಾದಂಬರಿಯಲ್ಲಿ ಘಟನೆಯನ್ನು ಕಾಲ–ದೇಶಾತೀತವಾಗಿ ನೋಡಲಾಗುತ್ತದೆ. ಆ ಕಾಲ–ದೇಶಾತೀತ ಗುಣವೇ ಕಾದಂಬರಿಗಿರುವ ದೊಡ್ಡ ಸಾಮರ್ಥ್ಯವಾಗಿದೆ. ಇತಿಹಾಸಕ್ಕೆ ಹಾಗಿಲ್ಲ. ನಕ್ಷೆ, ಹಾಗೂ ಗ್ರಂಥಋಣ ಕೊಟ್ಟಾಗ, ಇದಕ್ಕಿಂತಲೂ ಹೆಚ್ಚಿನ ಮಾಹಿತಿ ಗೊತ್ತಿರುವವರು ಈ ಪುಸ್ತಕವನ್ನು ಏಕೆ ಓದಿಲ್ಲ ಎಂದೋ ಈ ಪುಸ್ತಕ ಕೊಡಗಿನ ಬಗೆಗೆ ಅಧಿಕೃತವಾದ ಪುಸ್ತಕ ಅಲ್ಲವೆಂದೋ ವಾದಕ್ಕಿಳಿಯ ಬಹುದು. ಅದರ ಮುಂದುವರಿದ ಭಾಗವಾಗಿ ಇದು ಆಧಾರ ರಹಿತವಾದ ಬರವಣಿಗೆ ಎಂದೂ ಹೇಳಬಹುದು. ಭೈರಪ್ಪನವರ 'ಆವರಣ' ಕಾದಂಬರಿಯ ಕುರಿತ ವಿವಾದ ಈ ತೆರನದು. ಸದ್ಯಕ್ಕೆ ಶಿಶಿಲರ ಕಾದಂಬರಿ ಹಾಗೆ ವಿವಾದಕ್ಕೆ ಸಿಲುಕಿಲ್ಲ, ಅದಕ್ಕೆ 'ಮಾಸ್ತಿ ಕಾದಂಬರಿ ಪುರಸ್ಕಾರ' ಸಿಕ್ಕಿದೆ. ಅದು ಒಳ್ಳೆಯ ಸುದ್ದಿ.

ವಿಷಯ ಅದಲ್ಲ. ಕಾದಂಬರಿ ಎನ್ನುವ ಸಾಹಿತ್ಯ ಪ್ರಕಾರ ಇಂದು ಎದುರಿಸುವ ಸಮಸ್ಯೆಯ ಮೂಲ ಎಲ್ಲಿದೆ ಎನ್ನುವುದನ್ನು ಶಿಶಿಲರ ಕಾದಂಬರಿಗಳ ಅಧ್ಯಯನದಿಂದಲೂ ತಿಳಿಯಬಹುದಾಗಿದೆ. ಅವರ ಕಾದಂಬರಿಗಳು ಸಣ್ಣ ಪುಟ್ಟ ಕೊರತೆಗಳ ನಡುವೆಯೂ ಉತ್ತಮ ಕಾದಂಬರಿಗಳಾಗಿವೆ ಎನ್ನುವುದರ ಬಗೆಗೆ ನನ್ನ ತಕರಾರುಗಳೇನೂ ಇಲ್ಲ. ಅದಕ್ಕೆ ನಾನು ಕೊಡುವ ಕಾರಣವೆಂದರೆ ಚಿಕವೀರ ರಾಜೇಂದ್ರ, (ಮಾಸ್ತಿ) ಪರ್ವ, (ಭೈರಪ್ಪ) ಇವೆಲ್ಲಾ ಕನ್ನಡದ ಉತ್ತಮ ಕಾದಂಬರಿಗಳೆಂದಾದರೆ, ಶಿಶಿಲರ ಕಾದಂಬರಿಗಳೂ ಉತ್ತಮ ಕಾದಂಬರಿ ಗಳೆಂದು ಹೇಳಲು ಯಾವ ತಾಂತ್ರಿಕ ಸಮಸ್ಯೆಗಳೂ ಇಲ್ಲ ಎನ್ನುವುದೇ ಆಗಿದೆ. ಆದರೆ ಆ ರೀತಿಯ ಕಾದಂಬರಿಗಳು ಎದುರಿಸುವ ಸಮಸ್ಯೆ, ಅಥವಾ ಲೇಖಕರ ಅಂತಹ ಕಾದಂಬರಿಗಳನ್ನು ಬರೆಯುತ್ತಿರುವ ಸನ್ನಿವೇಶ ಎಂತಹುದು? ಅದನ್ನು ಅರ್ಥ ಮಾಡಿಕೊಳ್ಳುವ ಪರಿ ಏನು

ಎನ್ನುವುದು ನಮ್ಮ ಮುಂದಿರುವ ಸಮಸ್ಯೆಯಾಗಿದೆ. ಈವರೆಗಿನ ವಿಶ್ಲೇಷಣೆಯಿಂದ ನಾವೀಗ ಈ ತೀರ್ಮಾನಗಳಿಗೆ ಬಂದಿದ್ದೇವೆ;

ಮೊದಲನೆಯದು, ಕಾದಂಬರಿ ಎನ್ನುವ ಸಾಹಿತ್ಯ ಪ್ರಕಾರ ನಮಗೆ ಏಕೆ ಬೇಕು, ಪಾಶ್ಚಾತ್ಯರಲ್ಲಿ ಅದು ಯಾವ ಸಂದರ್ಭದಲ್ಲಿ ಕಾಣಿಸಿಕೊಂಡಿತು ಎನ್ನುವುದನ್ನು ಅರ್ಥ ಮಾಡಿಕೊಳ್ಳದೆಯೇ ನಾವು ಆ ಪ್ರಕಾರವನ್ನು ಎರವಲು ಪಡೆದಿರುವುದು.

ಎರಡನೆಯದು, ಇತಿಹಾಸ ಪ್ರಜ್ಞೆ ನಮಗಿದೆ ಅಥವಾ ಇಲ್ಲ ಎನ್ನುವ ಆಧುನಿಕ ವಿದ್ಯಾಭ್ಯಾಸದ ಮೂಲಕ ದತ್ತವಾದ ದೃಷ್ಟಿಕೋನದಿಂದ ನಾವು ಇತಿಹಾಸವನ್ನು ಕಾದಂಬರಿಯ ರೂಪದಲ್ಲಿ ಬರೆಯುವುದಕ್ಕೆ ತೊಡಗಿರುವುದು.

ಕಾದಂಬರಿ ಎನ್ನುವ ಪ್ರಕಾರವೊಂದು ನಮಗೆ ಪರಿಚಿತವಾಗದಿರುತ್ತಿದ್ದರೆ, ಅಥವ ಬ್ರಿಟಿಷರೇ ಹೇಳುವ ಹಾಗೆ ಇತಿಹಾಸ ಪ್ರಜ್ಞೆ ನಮಗೆ ಇಲ್ಲದೇ ಹೋದರೆ ಏನಾಗುತ್ತಿತ್ತೋ ಗೊತ್ತಿಲ್ಲ. ಅದರಿಂದ ನಷ್ಟವಂತೂ ಆಗುತ್ತಿರಲಿಲ್ಲ. ಆದರೆ ಇವೆರಡೂ ಸಂಗತಿಗಳು ನಮಗೆ ತಿಳಿದಿರುವುದರಿಂದ ಲಾಭಕ್ಕಿಂತ ನಷ್ಟವೇ ಆಗಿದೆ. ಇತಿಹಾಸ ನಮಗೆ ಇದೆ ಅಥವಾ ಇಲ್ಲ ಎನ್ನುವ ಕಾರಣಕ್ಕಾಗಿ ಅಯೋಧ್ಯೆಯ ರಾಮಜನ್ಮಭೂಮಿ–ಬಾಬ್ರಿ ಮಸೀದಿಯಂತಹ ಶಾಶ್ವತ ಸಮಸ್ಯೆಗಳುಂಟಾಗಿವೆ. ಪುರಾಣವನ್ನು ಇತಿಹಾಸವೆಂದು ತಿಳಿಯುವುದರಿಂದಲೇ, ಅಥವ ಮರುವ್ಯಾಖ್ಯಾನ ಮಾಡುವುದರಿಂದ 'ಡುಂಢಿ'ಯಂತಹ ಕಾದಂಬರಿಗಳು ಬರೆಯಲ್ಪಡುತ್ತವೆ. ಕೆಲವರು ಅವುಗಳ ಪರ ಮಾತಾಡುತ್ತಾರೆ, ಇನ್ನು ಕೆಲವರು ವಿರುದ್ಧ ಮಾತಾಡುತ್ತಾರೆ, ಸೃಜನಶೀಲತೆ ಎನ್ನುವುದು ಅ ಕಡೆ ತಲೆ ಹಾಕಿ ಕೂಡ ಮಲಗುವುದಿಲ್ಲ–ಹೀಗೆ ಒಂದು ಗಂಭೀರ ಸಮಸ್ಯೆಯತ್ತ ನಾವು ಸಾಗುತ್ತಿದ್ದೇವೆ.

ಶಿಶಿಲರ ಕಾದಂಬರಿಗಳಲ್ಲಿ ಸೃಜನಶೀಲತೆಗೆ ಸಂಬಂಧಿಸಿದಂತೆ ಅಂತಹ ಕೊರತೆಗಳೇನೂ ಇಲ್ಲ. ನಾನು ಅವರ 'ಇರುವುದೆಲ್ಲವೂ ಬಿಟ್ಟು' ಮತ್ತು 'ಮತ್ಸ್ಯಗಂಧಿ' ಕಾದಂಬರಿಗಳನ್ನು ಓದಿಲ್ಲ. ಅದರ ಹೊರತು ಹೆಚ್ಚಿನ ಕಾದಂಬರಿಗಳನ್ನು ಓದಿದ್ದೇನೆ. ಇದು ವಿಮರ್ಶೆಯಲ್ಲ. ಇಂತಹ ಕಾದಂಬರಿಗಳನ್ನು, ಅದಕ್ಕೆ ಕಾರಣವಾಗುವ ಹಿನ್ನೆಲೆಗಳನ್ನು ಅರ್ಥ ಮಾಡಿಕೊಳ್ಳುವ ತಾತ್ವಿಕತೆಗೆ ಸಂಬಂಧಿಸಿರುವ ಚರ್ಚೆಯಾಗಿದೆ. ಹಾಗಾದುದರಿಂದ ಕೇವಲ ವಿಮರ್ಶೆ ಮಾಡುವುದಕ್ಕಿಂತ ಹೆಚ್ಚಿನ ಜವಾಬ್ದಾರಿಯನ್ನು ಈ ಲೇಖನ ನಿರ್ವಹಿಸಿದೆ ಎಂದೂ ಭಾವಿಸುತ್ತೇನೆ.

ಪಥವಿಲ್ಲದೆ ಪಥಿಕನಿಲ್ಲ
ಪಥಿಕನಿಂದಲೆ ಪಥಗಳೆಲ್ಲ।

# ದೇವುಡು ಮತ್ತು ಡಿ.ವಿ.ಜಿ. ಚಿಂತನೆಗಳು

**ದೇವುಡು ಅವರ ದೊಡ್ಡ ಮಾತು**

ದೇವುಡು ನರಸಿಂಹ ಶಾಸ್ತ್ರಿಯವರನ್ನು ಸಾಮಾನ್ಯವಾಗಿ ಸಂಪ್ರದಾಯ ವಾದಿ ದೃಷ್ಟಿಯವರು ಎಂದು ಪರಿಗಣಿಸುವುದಿದೆ. ಆದರೆ ಅವರು ಸುಮಾರು ತೊಂಬತ್ತು ವರ್ಷಗಳಷ್ಟು ಹಿಂದೆ, ಒಂದು ಸಾಮಾಜಿಕ ಸನ್ನಿವೇಶಕ್ಕೆ ಯಾವರೀತಿ ಪ್ರತಿಕ್ರಿಯಿಸಿದ್ದರು ಎಂಬುದು ಕುತೂಹಲಕರ ಸಂಗತಿ. ಹಿಂದೂ ಸಮಾಜ, ಅದರಲ್ಲೂ ಬ್ರಾಹ್ಮಣರು ಅಥವಾ 'ವರ್ಣೋತ್ತಮರು' ಯಾವ ರೀತಿಯ ಮನೋಭಾವವನ್ನು ತೋರಿಸಬೇಕು ಎಂಬುದನ್ನು ದೇವುಡು ನಿಷ್ಠುರವಾಗಿಯೇ ಹೇಳುತ್ತಾರೆ. ಬ್ರಾಹ್ಮಣ್ಯವನ್ನು ಅಥವಾ ಜಾತಿಯನ್ನು ನಿರ್ಮೂಲನ ಮಾಡಬೇಕೆಂದು ಅವರು ಹೇಳುವುದಿಲ್ಲ. ಅದು ಕೇವಲ ಸಿದ್ಧಿಯ ಹಾದಿಯ ಘಟ್ಟ ಎಂದು ಹೇಳುವ ಮಾತು ಕುತೂಹಲಕರವಾಗಿದೆ. ನಿಮ್ನ ವರ್ಣದವರನ್ನು ಕೀಳಾಗಿ ಕಾಣುವುದೆಂದರೆ, ಸಮಾಜವನ್ನೇ ಸಂಹಾರ ಮಾಡಿದಂತೆ ಎಂದು ಹೇಳುವ ಅವರ ಮಾತು ಮನನೀಯವಾಗಿದೆ. ತಮ್ಮ ವಾದಕ್ಕೆ ಬಲವನ್ನು ನೀಡಿ ಬ್ರಾಹ್ಮಣರಿಗೆ ಮನದಟ್ಟು ಮಾಡಲು, ಹೋಲಿಕೆಗಾಗಿ ಕ್ರೈಸ್ತರನ್ನು, ಮುಸಲ್ಮಾನರನ್ನು ಮತ್ತು ಯುರೋಪಿಯನ್ನರನ್ನು ಮಾತ್ರವೇ ಅಲ್ಲ, ಹೋಟೆಲುಗಳನ್ನು ಇಟ್ಟು ಎಂಜಲು ಬಳಿಯುವವರನ್ನು ಕೂಡಾ (ಇದು ಹೋಟೆಲಿಟ್ಟು ಬ್ರಾಹ್ಮಣರನ್ನು ಕುರಿತಾಗಿಯೇ ಹೇಳಿದ ಮಾತಿರಬೇಕು) ತರುತ್ತಾರೆ ಎಂಬುದು ಗಮನಾರ್ಹ. ದೊಡ್ಡವರು ಯಾರು, ಸಣ್ಣವರು ಯಾರು ಎಂಬ ಒಂದು ಜಿಜ್ಞಾಸೆಯೂ ಇಲ್ಲಿ ನಡೆಯುತ್ತದೆ. ಒಟ್ಟಿನಲ್ಲಿ ದೇವುಡು ಅವರು ಈ ಕಿರು ಲೇಖನದಲ್ಲಿ ಹೇಳುವ ಅಂಶಗಳು ಇಂದಿಗೂ ವಿಚಾರಯೋಗ್ಯವಾಗಿವೆ (–ಅಜಕ್ಕಳ)

**ದೇವುಡು ಅವರ "ದೊಡ್ಡ ಸಣ್ಣವರಿಗೆ ಒಂದು ಪುಟ್ಟ ದೊಡ್ಡ ಮಾತು"**

ಪಾಲಘಾಟಿನಲ್ಲಿ, ಕಾಳಪಟ್ಟಿ ಬ್ರಾಹ್ಮಣರ ಸಾಮಾಜಿಕ ಅತ್ಯಾಚಾರವು ಎಜೋವರೆಂಬ ನಿಮ್ನ ವರ್ಣದ 60 ಮನೆಯವರನ್ನು ಕ್ರಿಸ್ತಮತಾವಲಂಬಿ ಗಳಾಗುವಂತೆ ಮಾಡಿದೆ. ಎಜೋವರು ಅಗ್ರಹಾರದ ಬೀದಿಗಳಲ್ಲಿ ನಡೆದಾಡುವ ಹಕ್ಕನ್ನು ಪಡೆಯಬೇಕೆಂಬುದೇ ಪರಜಾತಿಯನ್ನು ಸೇರುವುದರ ಕಾರಣವಾಗಿದೆ. ನಮ್ಮ ದೇಶದಲ್ಲಿಯೂ ಇಂತಹ ಸಂದರ್ಭಗಳು ಪ್ರಾಪ್ತವಾಗಿಯೂ ಪ್ರಾಪ್ತವಾಗುವುದರಲ್ಲಿಯೂ ಇದೆ ಮುಖಂಡರಾದವರು ಈ ವಿಚಾರವನ್ನು ಗಮನಕ್ಕೆ ತಂದು ತಮ್ಮ ಅತ್ಯಾಚಾರವನ್ನು ನಿಲ್ಲಿಸುವರೆಂದು ನಾವು ನಂಬುತ್ತೇವೆ. ನಮ್ಮ ದೇವರಲ್ಲಿ ಭಕ್ತಿ ಇಲ್ಲ. ನಮ್ಮ ಆಚಾರ್ಯರ

ಮಾತಿನಲ್ಲಿ ಪ್ರೀತಿಯಿಲ್ಲ. ನಮ್ಮ ಸಂಪ್ರದಾಯದಲ್ಲಿ ಶ್ರದ್ಧೆಯಿಲ್ಲ. ಇಂತಹ ಮುಸಲ್ಮಾನರೂ, ಕ್ರಿಸ್ತರೂ, ಯಾವ ರೀತಿಯಿಂದಲೂ ನಮ್ಮಲ್ಲಿ ಗೌರವವನ್ನು ಇಟ್ಟುಕೊಳ್ಳದ ಯುರೋಪಿಯನ್ನರೂ, ನಮ್ಮ ಅಗ್ರಹಾರಗಳಲ್ಲಿ ನಡೆದಾಡಿದರೆ ಆಗಬಹುದು. ಹೋಟಲುಗಳನ್ನಿಟ್ಟು ಕಂಡ ಕಂಡವರ ಎಂಜಲು ಬಳಿಯುವವರೆಲ್ಲರೂ, ನಮ್ಮೊಡನೆ ಸವ್ಯವಹಾರದಲ್ಲಿರಬಹುದು. ನೈತಿಕಪತನದಿಂದ ಅಧಮಾಧಮರಾಗಿ ಮಾನವ ವರ್ಗಕ್ಕೆ ಸೇರಿದವರೆಂದು ಹೇಳುವುದಕ್ಕೂ ಅರ್ಹರಲ್ಲದವರು ನಮ್ಮ ನಡುವೆ ಇದ್ದರೂ ಇರಬಹುದು. ನಮ್ಮ ದೇವರಲ್ಲಿ ಭಕ್ತಿಯಿಟ್ಟುಕೊಂಡು, ನಮ್ಮ ಆಚಾರ್ಯರ ಮಾತುಗಳನ್ನು ನಂಬಿ, ನಮ್ಮ ಸಂಪ್ರದಾಯಕ್ಕೆ ಶರಣರಾಗಿ, ಉತ್ತಮರಾಗಬೇಕೆಂಬ ಹಂಬಲದಿಂದ ಪರಿತಪಿಸುತ್ತಿರುವ, ನಿಮ್ಮ ವರ್ಣದವರನ್ನು, ಹಿಂದೂ ಸಮಾಜದ ಅಡಿಗಲ್ಲುಗಳನ್ನು, ಉತ್ತಮವರ್ಗದವರೆಂದು ಹೆಮ್ಮೆ ಕೊಚ್ಚಿಕೊಳ್ಳುವ ಡಂಭಾಚಾರಿಗಳ ಹೊಟ್ಟೆ ಬಟ್ಟೆಗೆ ಗೇದು ಹಾಕುವರನ್ನು ನಮ್ಮ ಅತ್ಯಾಚಾರದಿಂದ ಹೊರದೂಡುವುದೆಲ್ಲಿಯ ನ್ಯಾಯ? ನಿತ್ಯವೂ ಕಾಗೆಗಳಿಗೂ ಕೂಳನ್ನೆರಚಬೇಕೆಂದು ಬೋಧಿಸಿದ ಬ್ರಾಹ್ಮಣಧರ್ಮವು ಇಂದು ಸಮಾಜವನ್ನು ಸಂಹಾರಮಾಡುವುದೇನು? ಅಣುರೇಣುತೃಣಕಾಷ್ಟಗಳಲ್ಲಿಯೂ, ಪರಮಾತ್ಮನು ತುಂಬಿರುವನೆಂದು ಉದ್ಘೋಷಿಸುವ ಉಪನಿಷದ್ವಾಕ್ಯಗಳನ್ನು ಪಾಠ ಪ್ರವಚನಮಾಡುವ ಬ್ರಾಹ್ಮಣೋತ್ತಮರು ಕಣ್ಣು ಬಿಟ್ಟು ನೋಡಿ, ನಿಮ್ಮ ವರ್ಣದವರನ್ನೂ ಪರಮಾತ್ಮನೇ ಸೃಷ್ಟಿಸಿದನೆಂದು ಕಾಣಬಲ್ಲರೇನು? ಹುಟ್ಟು ಬಗೆವುದಕ್ಕೆ ಬರದ ಅಂಬಿಗನಂತೆ ವರ್ಣಾನಾಂ ಬ್ರಾಹ್ಮಣೋ ಗುರುಃ ಎಂದು ಮಾತ್ರ ಹೇಳಿಸಿಕೊಳ್ಳುತ್ತ, ನೇತೃತ್ವದಲ್ಲಿ ನಿಂತ ವರ್ಣೋತ್ತಮರೇ! ಈ ಬೂತಾಟದ ಬಯಲಾಟವು ಸಾಕು. ದೇಶದ ಸ್ಥಿತಿಯನ್ನು ಕಂಡು, ಕರಗದಷ್ಟೂ ಕಠಿಣವಾಗಿರುವುದೇ ನಿಮ್ಮ ಮನಸ್ಸು? ಮನೆಗೆ ಬೆಂಕಿ ಹೊತ್ತಿಕೊಂಡಿರುವಾಗಲೂ, ಮೂಗು ಹಿಡಿದು ಕುಳ್ಳಿರಲು ಸಾಧ್ಯವೇ? ಜಾತಿಯು ಅನರ್ಥಕಾರಿಗಳಲ್ಲದ ನಿಷೇಧ ನಿಯಮಗಳ ಆಚರಣೆಯಲ್ಲಿ ಸಾಧನೆಗಾಗಿ ಕಲ್ಪಿಸಿದ ಸಿದ್ಧಿಯ ಹಾದಿಯಫಟ್ಟ; ಸಿದ್ಧಿಯ ಮೇಲೆ ಹಗಲಿರಳೂ ಕಣ್ಣಿಡದವರಿಗೆ ಜಾತಿಯ ಹಂಬಲವೆಂದರೆ ನಂಬುವುದಕ್ಕಾಗದ, ವಿಡಂಬನ. ಇನ್ನಾದರೂ ಕರ್ತವ್ಯ ಪರರಾಗಿ, ಭೂಋಣವು ತೀರುವ ಮುಂಚೆಯೇ ದೇಶ ಸಮಾಜಗಳ ಋಣವನ್ನೂ ತೀರಿಸಿ.

**ಡಿ.ವಿ.ಜಿ.ಯವರ ಪ್ರಕಾರ ವೋಟರುಗಳ ಕರ್ತವ್ಯ**

ಡಿ.ವಿ. ಗುಂಡಪ್ಪನವರು ಮಂಕುತಿಮ್ಮನ ಕಗ್ಗದ ಕರ್ತೃವಾಗಿ ಕನ್ನಡಿಗರಿಗೆಲ್ಲ ಪರಿಚಿತರು. ಆದರೆ ಅವರ ರಾಜಕೀಯ ಚಿಂತನೆ ತುಂಬ ಉತ್ಕೃಷ್ಟ ಮಟ್ಟದ್ದಾಗಿತ್ತಾದರೂ ಆ ಬಗ್ಗೆ ಸಾಕಷ್ಟು ಗಮನವನ್ನು ನಾವು ಹರಿಸಿಲ್ಲ. ಅರ್ಹತೆ, ಯೋಗ್ಯತೆಗಳ ಕಾರಣದಿಂದಾಗಿಯೇ ಒಲಿದು ಬಂದಿದ್ದ ದಿವಾನಗಿರಿಯ ಹುದ್ದೆಯನ್ನು ತಿರಸ್ಕರಿಸಿದ್ದವರು ಡಿ.ವಿ.ಜಿ. ರಾಜಕೀಯ ವಿಚಾರಗಳು ಮತ್ತು ಆಡಳಿತಕ್ಕೆ ಸಂಬಂಧಿಸಿದಂತೆ ದೊಡ್ಡ ದೊಡ್ಡವರೆಲ್ಲ ಡಿ.ವಿ.ಜಿ.ಯವರ ಸಲಹೆ ಸೂಚನೆಗಳನ್ನು ಪಡೆಯುತ್ತಿದ್ದರಂತೆ.

ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಜನರು ಮಂದೆಗಳಂತೆ ಮತ ನೀಡಿ ಅಯೋಗ್ಯರನ್ನು ಚುನಾಯಿಸುವ ಸಂಭವ ಇದೆಯೆಂಬುದನ್ನು ಮತ್ತೆ ಮತ್ತೆ ಮತದಾರರೇ ನಮ್ಮ ದೇಶದಲ್ಲಿ ಖಾತ್ರಿ ಪಡಿಸುತ್ತಾ ಬಂದಿದ್ದಾರೆ. ಪರಮ ಭ್ರಷ್ಟರು, ಜೈಲಿನಿಂದಲೇ ಸ್ಪರ್ಧಿಸಿದವರು ಗಣನೀಯವಾಗಿ ಮತಗಳನ್ನು ಪಡೆಯುವ ಮತ್ತು ಜಯಿಸುವ ಪರಿಸ್ಥಿತಿ ನಮ್ಮ ದೇಶದಲ್ಲಿ ಇಂದೂ ಇದೆ. ಸ್ವಾತಂತ್ರ್ಯ ಬಂದು ಇಷ್ಟು ವರ್ಷಗಳಾದ ಬಳಿಕ ಹಾಗೂ ಸಾಕ್ಷರತೆಯ ಪ್ರಮಾಣ ಇಷ್ಟು ವೃದ್ಧಿಸಿದ ಬಳಿಕ ಇಂಥಾ ಪರಿಸ್ಥಿತಿಯಿದೆ ಎಂಬುದು ಚಿಂತಿಸಬೇಕಾದ ವಿಷಯ. ಈ

ಹಿನ್ನೆಲೆಯಲ್ಲಿ ಮತದಾರರ ಜವಾಬ್ದಾರಿ ಏನು ಎಂಬುದನ್ನು ಬಹಳ ಸ್ಪಷ್ಟವಾಗಿ ಡಿ.ವಿ.ಜಿ.ಯವರು ನಿರೂಪಿಸುವುದನ್ನು ನಾವು ಗಮನಿಸಬೇಕು. 1920ರ ದಶಕದ ಈ ಲೇಖನದಲ್ಲಿ ಜಾತಿ, ಪಂಗಡ, ಕೋಮು ಅಭಿಮಾನಗಳ ಬಗ್ಗೆ ಅವರು ಎಚ್ಚರಿಸಿದ ಬಗೆಯನ್ನು ವಿಶೇಷವಾಗಿ ನಾವು ಗಮನಿಸಬೇಕು. ಎಲ್ಲಕ್ಕಿಂತ ಮುಖ್ಯವಾಗಿ ಮತದಾನದ ಅಧಿಕಾರವನ್ನು ತನ್ನೊಬ್ಬನ ಹಿತದೃಷ್ಟಿಯಿಂದ ಚಲಾಯಿಸುವುದಲ್ಲ, ಬದಲಾಗಿ, ಆ ಅಧಿಕಾರವನ್ನು ಪ್ರತಿಯೊಬ್ಬನೂ ಸಮಸ್ತ ಪ್ರಜಾಸಮುದಾಯದ ಪರವಾಗಿ ಉಪಯೋಗಿಸಬೇಕು ಎಂದು ಹೇಳುವ ಅಂಶವೂ ತುಂಬ ಮುಖ್ಯವಾದುದು. ಅಭ್ಯರ್ಥಿಗಳಿಗೆ ಯೋಗ್ಯತೆಯಿರಬೇಕು ಎಂದಷ್ಟೇ ಅಲ್ಲ; ಅಭ್ಯರ್ಥಿಗಳನ್ನು ಆಯ್ಕೆ ಮಾಡುವವರಿಗೂ ಸರಿಯಾದವರು ಕೂಡ ಆಯ್ಕೆ ಮಾಡುವ ಯೋಗ್ಯತೆಯನ್ನು ಬೆಳೆಸಿಕೊಳ್ಳಬೇಕು ಎಂದು ಸೂಚಿಸುವ ಈ ಕಿರುಲೇಖನ ತುಂಬ ಪ್ರಸ್ತುತವೆನಿಸುತ್ತದೆ. (– ಅಜಕ್ಕಳ).

**ಡಿ.ವಿ.ಜಿ.ಯವರ ''ಸಭಾ ನಿಯೋಜಕರು (ವೋಟರು)ಗಳ ಕರ್ತವ್ಯ''**

**ಸಮ್ಮತ ಎಂಬುದು ಒಂದು ಆಯುಧ :** "ವೋಟ್" ಅಥವಾ "ಸಮ್ಮತ" ಎಂಬುದು ಒಂದು ದೊಡ್ಡ ಅಧಿಕಾರ. ಆದರೆ ಅದು ನಮ್ಮ ನಮ್ಮ ಸ್ವಂತ ಕಷ್ಟಕ್ಕೆ ಮಾತ್ರವೇ ಒಳಪಟ್ಟ ಅಧಿಕಾರವಲ್ಲ. ಅದು ಒಂದು ಪವಿತ್ರವಾದ ಕರ್ತವ್ಯ– ಒಂದು ಭಾರೀ ಜವಾಬ್ದಾರಿ. ಅದು ರಾಜ್ಯದಲ್ಲಿರುವ ಸಮಸ್ತರ ಯೋಗಕ್ಷೇಮಗಳನ್ನೂ ವಿಚಾರ ಮಾಡಿ ತೀರ್ಮಾನಪಡಿಸುವ ಕಾರ್ಯಕ್ಕೆ ಸಂಬಂಧಪಟ್ಟುದು. ಆದಕಾರಣ ಆ ಅಧಿಕಾರದ ವಿನಿಯೋಗದಲ್ಲಿ ಸಮಸ್ತ ದೇಶೀಯರಿಗೂ ಬಾಧ್ಯತೆಯುಂಟು. ಅದು ನಮ್ಮೊಬ್ಬರ ಸ್ವಂತದ ಸ್ವತ್ತಲ್ಲ. ಅದನ್ನು ಸಮಸ್ತ ಪ್ರಜಾ ಸಮುದಾಯದ ಪರವಾಗಿ ನಾವು ಉಪಯೋಗಿಸಬಹುದೇ ವಿನಾ, ನಮ್ಮ ಮನಸ್ಸಿಗೆ ತೋರಿದಂತೆ ನಡೆಯಿಸಲಾಗದು. ಅದನ್ನು ಇಷ್ಟಬಂದಂತೆ ಇನಾಮಾಗಿ ಕೊಡುವುದಕ್ಕೂ ಅಥವಾ ಮಾರುವುದಕ್ಕೂ ಯಾರಿಗೂ ಸ್ವಾತಂತ್ರ್ಯವಿಲ್ಲ.

**ಅದನ್ನು ಉದಾಸೀನ ಮಾಡಬಾರದು :** ಈ ಅಧಿಕಾರವನ್ನು ಪಡೆದಿರತಕ್ಕವರು ಅದನ್ನು ಉಪಯೋಗಿಸದೆ ಬಿಡಬಾರದು. ಪ್ರಜಾಪ್ರತಿನಿಧಿಗಳನ್ನಾರಿಸುವ ವಿಷಯದಲ್ಲಿ ತಮ್ಮ ಸಮ್ಮತವೇನೆಂಬುದನ್ನು ತಿಳಿಸದೆ ಸುಮ್ಮನೆ ಇರುವವರು ದೇಶದ ವಿಷಯದಲ್ಲಿ ಉದಾಸೀನತೆಯನ್ನು ತೋರಿಸಿದ ದೋಷಕ್ಕೆ ಗುರಿಯಾಗಬಹುದು.

**ಮನಸ್ವೀ ಕೊಡಬಾರದು :** ಅಪೇಕ್ಷರಾಗಿ (ಕ್ಯಾಂಡಿಡೇಟ್) ನಿಂತಿರತಕ್ಕ ಎಲ್ಲ ಜನರ ಯೋಗ್ಯತಾಯೋಗ್ಯತೆಗಳನ್ನೂ ನೋಡುವುದಕ್ಕೆ ಮುಂಚೆ ನಮ್ಮ ಸಮ್ಮತವನ್ನು ಯಾರಿಗೂ, ಯಾವ ಕಾರಣದಿಂದಲೂ ವಾಗ್ದಾನ ಮಾಡಬಾರದು. ನಮ್ಮ ಜನರು ಹಂಗು, ದಾಕ್ಷಿಣ್ಯಗಳಿಗೆ ಒಳಗಾಗಿ, ಮೊದಲೇ ಮಾತುಕೊಟ್ಟು ಬಿಡುವುದುಂಟು. ಆದರೆ ಸಮ್ಮತವೆಂಬುದು ದೇಶಕ್ಕೆಲ್ಲ ಸೇರಿದ ಒಂದು ನಿಧಿಯಾದುದರಿಂದ, ಅದನ್ನು ವಿಚಾರಮಾಡದೆ ಕೊಟ್ಟುಬಿಡುವುದು ಧರ್ಮವಲ್ಲ.

1. **ಯೋಗ್ಯತೆ ನೋಡಬೇಕು**. ಜನಾಭಿಮಾನ: ನಿಮ್ಮ ಸಮ್ಮತವನ್ನು ಅಪೇಕ್ಷಿಸುವವರ ಯೋಗ್ಯತೆಯನ್ನು ನಿಶ್ಚಯಿಸುವುದು ಹೇಗೆ? ಮೊದಲು ಅವರು ಪ್ರಜಾಭಿಮಾನವುಳ್ಳವರೆ, ಜನರ ಕಷ್ಟ ನಿವಾರಣೆಗಾಗಿ ಅವರು ಎಷ್ಟು ಮಾತ್ರವಾದರೂ ಶ್ರದ್ಧೆ ತೋರಿಸಿದ್ದಾರೆಯೇ, ಸಮ್ಮತ ಸಂಪಾದನೆಯ ಕಾಲದಲ್ಲಿ ಮಾತ್ರವೇ ಅಲ್ಲದೆ ಇತರ ಕಾಲಗಳಲ್ಲಿ ಅವರು

ಪ್ರಜಾಸೇವೆಗಾಗಿ ಶ್ರಮಪಟ್ಟಿದ್ದಾರೆಯೆ ಎಂದು ವಿಚಾರಿಸಿ ನೋಡಬೇಕು.

2. **ನಡೆನುಡಿಯಲ್ಲಿ ನಿಯಮ:** ಆಮೇಲೆ, ಅವರು ಮಾನಿಷ್ಠರೆ–ಮರ್ಯಾದೆಯುಳ್ಳವರೆ–ನಡೆನುಡಿಗಳ್ಲ್ಲಿ ನಿಯಮವುಳ್ಳವರೆ ಎಂಬುದನ್ನು ನೋಡಬೇಕು. ತನ್ನ ಕಸಬಿನಲ್ಲಿ ಅಥವಾ ವ್ಯಾಪಾರದಲ್ಲಿ, ಪ್ರಾಮಾಣಿಕತೆಯಿಂದಲೂ, ದೂರ ದೃಷ್ಟಿಯಿಂದಲೂ, ಶ್ರದ್ಧೆಯಿಂದಲೂ, ವಿಚಕ್ಷಣೆಯಿಂದಲೂ ಜಯ ಗೌರವಗಳನ್ನು ಸಂಪಾದಿಸಿಕೊಂಡಿರುವ ಮನುಷ್ಯನು ಸಭೆಗಳಲ್ಲಿಯೂ ಅದೇ ಗುಣಗಳನ್ನು ತೋರಿಸಿ ಪ್ರಜಾ ಕಾರ್ಯಗಳನ್ನು ಸಾಧಿಸಲು ಶಕ್ತನಾಗುವನೆಂದು ನಾವು ನಂಬಬಹುದು.
3. **ರಾಜ್ಯಕಾರ್ಯ ಜ್ಞಾನ:** ಬಳಿಕ, ಅವರು ರಾಜಕೀಯ ಪರಿಜ್ಞಾನವುಳ್ಳವರೆ ಎಂಬುದನ್ನೂ ವಿಚಾರಿಸಬೇಕು. ಸಭೆಗಳಲ್ಲಿ ಕೆಲಸ ಮಾಡುವವರಿಗೆ ಮಾನ, ಉತ್ಸಾಹ ಇಷ್ಟುಮಾತ್ರವೇ ಇದ್ದರೆ ಸಾಲದು. ಅವುಗಳ ಜೊತೆಗೆ ಅನೇಕ ವಿಷಯಗಳ ತಿಳಿವಳಿಕೆ, ಲೋಕಾನುಭವ, ತಕ್ಕ ಮಟ್ಟಿಗೆ ಗ್ರಂಥ ಪರಿಚಯ, ಮನಸ್ವೀ ವಾದಿಸದೆ ಕಕ್ಷಿ ಪ್ರತಿಕಕ್ಷಿಗಳ ಹೇಳಿಕೆಗಳನ್ನು ತೂಕಮಾಡಿ ನೋಡಿ, ಅವುಗಳಲ್ಲಿರುವ ಗುಣಾಂಶಗಳಾನ್ನು ಕಂಡುಹಿಡಿದುಕೊಳ್ಳುವಷ್ಟು ತಾಳ್ಮೆ ಮತ್ತು ಕುಶಲತೆ – ಇವೆಲ್ಲವೂ ನಮ್ಮ ಪ್ರತಿನಿಧಿಗಳಿಗೆ ಇರಬೇಕು.
4. **ಸಾರ್ವಜನಿಕ ಬುದ್ಧಿ:** ಎಲ್ಲಕ್ಕಿಂತ ಹೆಚ್ಚಾಗಿ, ನಮ್ಮ ಪ್ರತಿನಿಧಿಗಳು ಸಭೆಯಲ್ಲಿ ಕುಳಿತಾಗ ತಮ್ಮ ತಮ್ಮ ಜಾತಿ ಮತಗಳನ್ನು ಮರೆತು, ದೇಶವೆಲ್ಲವೂ ಒಂದೇ–ದೇಶೀಯರೆಲ್ಲರೂ ಒಂದೇ – ಎಂಬ ಭಾವನೆಯಿಂದ ತುಂಬಿರತಕ್ಕವರಾಗಬೇಕು. ನಮ್ಮಲ್ಲಿ ಜಾತಿಕಲಹ ಮತಕಲಹಗಳು ಪ್ರಬಲಿಸಿ, ಪ್ರಜಾ ಸಮುದಾಯವನ್ನು ಛಿನ್ನಭಿನ್ನವಾಗಿ ಒಡೆದಿವೆ. ಜನರಲ್ಲಿ ರಾಜ್ಯೈಕ್ಯತೆಯ ಜ್ಞಾನವು ಹುಟ್ಟದೆ, ಒಗ್ಗಟ್ಟಿಲ್ಲದೆ ಇರುವುದೋ, ಅದುವರೆಗೂ ನಮ್ಮ ದೇಶದಲ್ಲಿ ಪ್ರಜಾಸಮ್ಮತ ಪ್ರಭುತ್ವವು ಸಿದ್ಧಿಸಲಾರದು. ನಮ್ಮ ಕುಲಬೇಧ ಮತಬೇಧಗಳು ಮನೆಗಳಲ್ಲಿಯೂ ಮಠಗಳಲ್ಲಿಯೂ ಮಾತ್ರ ಇರುವುದು ಉಚಿತ. ರಾಜಕೀಯ ವಿಚಾರಗಳಲ್ಲಿಯಾದರೋ, ಸಾರ್ವಜನಿಕ ಭಾವನೆಯೇ ಎಲ್ಲರಿಗೂ ಇರಬೇಕು.

**ಜಾತಿ ಮತ ಪಕ್ಷಪಾತಗಳ ನಿರಾಕರಣೆ:** ರಾಜ್ಯವೆಂಬುದು ದೇಹದಂತೆ. ದೇಹದ ಅಂಗಾಂಗಗಳ ಪೈಕಿ ತಲೆಗೂ ಹೊಟ್ಟೆಗೂ ನೋವು ಬಂದರೆ, ಅದು ಕೈಕಾಲುಗಳನ್ನೂ ಬಾಯನ್ನೂ ಪೀಡಿಸದೆ ಹೋಗುವುದೇ? ಅಥವಾ ಕೈಕಾಲುಗಳಿಗೆ ಅಪಾಯವಾದರೆ, ಅದು ತಲೆ ಹೊಟ್ಟೆಗಳನ್ನು ಬಾಧೆಪಡಿಸುವುದಿಲ್ಲವೆ? ಅದೇ ರೀತಿ, ಊರಿನಲ್ಲಿ ಈ ದಿನ ಧನಿಕರ ಮನೆಗೆ ತುಂಟರು ನುಗ್ಗಿದರೆಂದು ಇತರರು ಸಂತೋಷಪಟ್ಟರೆ, ನಾಳೆ ಅದೇ ತುಂಟರೇ ಇತರರ ಮನೆಗೂ ನುಗ್ಗಲಾರರೆ? ಬಡವರ ಮನೆಯ ಬಳಿ ಕಶ್ಮಲ ತುಂಬಿ, ಅದರಿಂದ ರೋಗಬಂದಾಗ ಧನಿಕರು ನಿಶ್ಚಿಂತೆಯಿಂದ ಇದ್ದರೆ ಆ ರೋಗದ ಸೋಂಕು ಧನಿಕರವರೆಗೂ ಹರಡದೆಹೋದೀತೆ? ಹೀಗೆ ನೋಡಿದರೆ ದೇಶದ ಜೀವನವೆಲ್ಲವೂ ಒಂದೇ. ಅದರಲ್ಲಿ ಭೇದಗಳನ್ನೆಣಿಸುವುದು ಸರ್ವಥಾ ಕ್ಷೇಮವಲ್ಲ–ಎಂದು ಸ್ಪಷ್ಟವಾಗಿ ಗೊತ್ತಾಗುತ್ತದೆ. ಆದಕಾರಣ ನಿಮ್ಮ ಸಮ್ಮತವನ್ನು (ವೋಟ್) ಅಪೇಕ್ಷಿಸುವವರು ತಮ್ಮ ಜಾತಿ, ಅಥವಾ ತಮ್ಮ ಪಂಗಡ, ಅಥವಾ ತಮ್ಮ ಕೋಮು ಎಂಬ ಅಲ್ಪವಾದ ಅಭಿಮಾನಕ್ಕೆ ಒಳಗಾದವರೆ, ಅಥವಾ ದೇಶವೆಲ್ಲವೂ ತಮ್ಮದೇ ಎಂಬ ಉದಾರ ಭಾವನೆಯಿಂದ ತುಂಬಿದವರೆ–ಎಂಬುದನ್ನು ನೀವು ವಿಚಾರಮಾಡಿ, ಯಾರು ನಮ್ಮ ಒಳಜಗಳಗಳನ್ನು ಹೆಚ್ಚಿಸದೆ, ಸಾರ್ವಜನಿಕ ದೃಷ್ಟಿಯಿಂದಲೇ ಕೆಲಸಮಾಡುವವೆಂದು ಭರವಸೆ ಕೊಡುವವರೋ ಅಂಥವರಿಗೇ ನಿಮ್ಮ ಸಮ್ಮತಿ ಸಹಾಯಗಳನ್ನು ಕೊಡಬೇಕು.

**ಪ್ರಜಾಧರ್ಮದ ಸಾರ:** ಅಪೇಕ್ಷಕರ ಅರ್ಹತೆಯನ್ನು ಈ ರೀತಿ ವಿಮರ್ಶೆ ಮಾಡಿ ನೀವು ನಿಮ್ಮ ಸಮ್ಮತಗಳನ್ನು (ವೋಟ್)ಕೊಟ್ಟರೆ, ಆಗ ನಮ್ಮ ಪ್ರತಿನಿಧಿಸಭೆ ಶಾಸನ ಸಭೆಗಳು ಜವಾಬ್ದಾರಿಯುಳ್ಳ ಬುದ್ಧಿಯಿಂದಲೂ, ವಿಚಕ್ಷಣೆಯಿಂದಲೂ, ಈಗಿಗಿಂತ ಹೆಚ್ಚಾದ ಶಕ್ತಿಯಿಂದಲೂ ಕೆಲಸಮಾಡುವುದು ಸಾಧ್ಯವಾಗುತ್ತದೆ. ಆ ಸಭೆಗಳಲ್ಲಿ ಕೂತುಕೊಳ್ಳುವವರು ಧೈರ್ಯಶಾಲಿಗಳೂ, ವಿವೇಕಶಾಲಿಗಳೂ, ದೇಶದ ಐಕಮತ್ಯದಲ್ಲಿ ದೃಷ್ಟಿಯುಳ್ಳವರೂ, ನಿಷ್ಪಕ್ಷಪಾತಿಗಳೂ, ಶ್ರದ್ಧಾವಂತರೂ ಆದಹೊರತು ಅವರುಗಳಿಂದ ದೇಶಕ್ಕೆ ಉಪಕಾರವು ಆಗಲಾರದು. ಆದಕಾರಣ, ತಾವು ತಮ್ಮ ವಿವೇಚನೆಯನ್ನು ಉಪಯೋಗಿಸಿ, ಯೋಗ್ಯರಾದವರಿಗೆ ಸಮ್ಮತಗಳನ್ನು ಖಂಡಿತವಾಗಿ ಕೊಟ್ಟು, ಅದರಿಂದ ತಮ್ಮ ಊರಿಗೂ ದೇಶಕ್ಕೂ ಪ್ರಯೋಜನವನ್ನೂ ಯಶಸ್ಸನ್ನೂ ಸಂಪಾದಿಸಿಕೊಳ್ಳಬೇಕು.

ಆಕರಗಳು : ವಿಶ್ವ ಕರ್ಣಾಟಕ 7ನೇ ನವೆಂಬರ್ 1926 ಮತ್ತು 20ನೇ ಫೆಬ್ರವರಿ 1927. (ಕೃಪೆ: ಫೌಂಡೇಶನ್ ಫಾರ್ ಇಂಡಿಕ್ ರೀಸರ್ಚ್ ಸ್ಟಡೀಸ್)

(ದೇವುಡು ಮತ್ತು ಡಿ.ವಿ.ಜಿ.ಯವರ ಲೇಖನಗಳನ್ನು ಆರಿಸಿಕೊಟ್ಟ ಡಾ. ಜಿ. ಬಿ. ಹರೀಶ್ ಅವರಿಗೆ ಕೃತಜ್ಞತೆಗಳು ಸಲ್ಲುತ್ತವೆ.)

ಮಳೆಗಾಗಿ ಕಾಯುತಿರುವ
ಹಳೆಯ ಒಣಗಿದ ಗರಿಕೆ
ಹೊಳೆವ ಮಿಂಚು ಸಿಡಿವ ಸಿಡಿಲುಗಳಿಗೆ
ಇಳೆಯದೇ ತಪ್ತ ಬಯಕೆ.

# ಮೌಲಿಕ ಕೃತಿ 'ನಿಜಗುಣ'

**ಡಾ. ಜಿ. ಎನ್. ಉಪಾಧ್ಯ**
ಮುಖ್ಯಸ್ಥರು, ಕನ್ನಡ ವಿಭಾಗ
ವಿದ್ಯಾನಗರಿ, ಮುಂಬಯಿ ವಿಶ್ವವಿದ್ಯಾಲಯ
ಮುಂಬಯಿ – 400 098

ಕಳೆದ ಮೂರು ದಶಕಗಳಿಂದ ಕನ್ನಡ ವಿಮರ್ಶೆಯ ಲೋಕದಲ್ಲಿ ಹೆಸರು ಮಾಡಿರುವ ಎಸ್.ಆರ್. ವಿಜಯಶಂಕರ ಅವರ ಪ್ರತಿಭೆ, ವಿಚಾರ ಸಾಮರ್ಥ್ಯ ಮೇಲ್ಮಟ್ಟದ್ದು. 'ಮನೋಗತ', 'ಒಳದನಿ' ಅವರ ಮಹತ್ವದ ವಿಮರ್ಶಾ ಕೃತಿಗಳು. ಈ ಸಾಲಿಗೆ ಸೇರಿದ ಇನ್ನೊಂದು ಕೃತಿ 'ನಿಜಗುಣ'. ಕನ್ನಡ ಲೇಖಕರ ಕಾಣ್ಕೆಯನ್ನು ಸಮದಂಡಿ ಯಾದ ಕಣ್ಕಸುವಿನಿಂದ ನೋಡಿ ವಿಶ್ಲೇಷಿಸುವುದು ಅವರ ಬರವಣಿಗೆಯ ವೈಶಿಷ್ಟ್ಯ. ಕನ್ನಡದ ಕ್ರಿಯಾತ್ಮಕ ವಿಮರ್ಶೆಗೆ ವಿಜಯಶಂಕರ ಅವರ ಕೊಡುಗೆ ಮಹತ್ವದ್ದು. ವ್ಯಾಪಕವಾದ ಓದು, ಅಧ್ಯಯನ, ತೌಲನಿಕ ಚಿಂತನೆ, ಗುಣ ಅವಗುಣಗಳನ್ನು ನೇರವಾಗಿ ಹೇಳಬಲ್ಲ ಖಚಿತ ವಿಮರ್ಶೆ ಜೊತೆಗೆ ವಿಮರ್ಶೆಯನ್ನು ಸಾಂಸ್ಕೃತಿಕ ಹೊಣೆಗಾರಿಕೆಯಾಗಿ ಸ್ವೀಕರಿಸಿರುವುದು ಅವರ ಹೆಚ್ಚುಗಾರಿಕೆ. ವಾಙ್ಮಯ ಪ್ರಪಂಚದ ಒಳ್ಳೆಯದನ್ನು ತಿಳಿದುಕೊಳ್ಳುವ ಪ್ರೀತಿಸುವ ಅನುಭವ ಭೇದಗಳನ್ನು ಗುರುತಿಸುವ ಮನಸ್ಸು ಅವರಿಗಿದೆ.

ಸಾಹಿತ್ಯ ವಿಮರ್ಶೆ ಅವರಿಗೆ ಸಾರಸ್ವತ ಲೋಕದ ಆಗುಹೋಗುಗಳ ಕಾರ್ಯವೂ ಹೌದು. ನಮ್ಮ ಸಾಹಿತ್ಯಾಭಿರುಚಿಯನ್ನು ಪರಿಷ್ಕರಿಸಬಲ್ಲ ತಾಕತ್ತು, ನಿಜಗುಣ ಕೃತಿಯಲ್ಲಿದೆ. 'ವಿಮರ್ಶಕನು ಸಾಹಿತ್ಯವಿಮರ್ಶೆಯಲ್ಲಿ ನಿಜಗುಣ ಗ್ರಾಹಿಯಾಗಿರಬೇಕು' ಎನ್ನುವ ಅವರು "ಸಾಹಿತ್ಯದ ನಿಜವಾದ ಗುಣ ಯಾವುದು ಎಂಬುದು ಶಾಶ್ವತವಾದೊಂದು ಪ್ರಶ್ನೆ. ಸಾಹಿತ್ಯವನ್ನು ಗಂಭೀರ ವಾಗಿ ಓದುತ್ತಾ ಬಂದಂತೆ ಕೃತಿಗಳ ನಿಜದಲ್ಲಿ ವಿಮರ್ಶೆಯ ಗುಣ ಬೆಳೆಯಬಲ್ಲದು ಎಂಬ ವಿಶ್ವಾಸ ಬೆಳೆಯಿತು. ಈ ನಂಬುಗೆಯಿಂದ ಹೊರಟ ನನಗೆ ಸಾಹಿತ್ಯ ಕೃತಿಗಳ ಒಳಗಿನ ಅನುಭವಲೋಕ ಹಾಗೂ ಓದುಗನಾಗಿ ಕಾಣುವ ನಿತ್ಯ ಬದುಕಿನ ಗುಣಾವಗುಣಗಳನ್ನು ವಿಮರ್ಶೆ ಹೇಗೆ ಸಂಧಿಸಿ ಯಾವ ಹದದಲ್ಲಿ ಏನನ್ನು ಸಾಧಿಸಬೇಕು ಎಂಬುದು ಸಂಸ್ಕೃತಿ ವಿಮರ್ಶೆಯ ಸಂದರ್ಭದಲ್ಲಿ ಚಿಂತಿಸಬೇಕಾದ ಮುಖ್ಯ ಪ್ರಶ್ನೆ" ಎಂಬ ಮನೋಗತವನ್ನು ಅಭಿವ್ಯಕ್ತಪಡಿಸಿದ್ದಾರೆ.

'ನಿಜಗುಣ' ಎಸ್.ಆರ್. ವಿಜಯಶಂಕರ ಅವರ ಇತ್ತೀಚಿನ ವಿಮರ್ಶಾ ಕೃತಿ. ಇದರಲ್ಲಿ ಕಾವ್ಯ, ಕಥನ, ವಿಮರ್ಶೆ ಎಂಬ ಮೂರು ಒಳತೆನೆಗಳಿದ್ದು

ಒಟ್ಟು ಇಪ್ಪತ್ತೇಳು ವಿಮರ್ಶಾ ಲೇಖನಗಳಿವೆ. ಆಚಾರ್ಯ ಅಲ್ಲಮ, ಕುಮಾರವ್ಯಾಸರ ಕುರಿತ ಎರಡು ಲೇಖನಗಳನ್ನು ಬಿಟ್ಟರೆ ಉಳಿದವುಗಳು ಆಧುನಿಕ ಕನ್ನಡ ಸಾಹಿತ್ಯ–ಸಂಸ್ಕೃತಿಗೆ ಸಂಬಂಧಿಸಿದವುಗಳು. ವಿಜಯಶಂಕರ ಅವರ ಸಾಹಿತ್ಯಿಕ ಸಾಂಸ್ಕೃತಿಕ ನಿಲುವುಗಳು ಗಂಭೀರ ಸಾಹಿತ್ಯದ ಆಲೋಚನೆಗಳೇ ಆಗಿವೆ ಎಂಬುದಕ್ಕೆ ಇಲ್ಲಿನ ಲೇಖನಗಳೇ ಸಾಕ್ಷಿ. ಅವರು ಜೀವನ, ಸಾಹಿತ್ಯ ಹಾಗೂ ಶಾಸ್ತ್ರಗಳ ಸತತಾಭ್ಯಾಸಿಯೂ ಹೌದು ಎಂಬುದನ್ನು ಇಲ್ಲಿನ ಲೇಖನಗಳು ಶ್ರುತಪಡಿಸುತ್ತವೆ. ಕನ್ನಡ ಸಾಹಿತ್ಯದ ಒಳಗೂ ತುಲನಾತ್ಮಕ ವಿಮರ್ಶೆ, ಸಂವಾದ ನಡೆಯಬೇಕಾದ ಅಗತ್ಯವನ್ನು ಅವರಿಲ್ಲಿ ಮನಗಾಣಿಸಿಕೊಟ್ಟಿದ್ದಾರೆ. 'ಹೊಸ ಸಾಹಿತ್ಯವನ್ನು ಅರಿಯುವಲ್ಲಿ ವಿಮರ್ಶೆಯ ಸವಾಲುಗಳು ಸಂಕೀರ್ಣವಾಗಿರುತ್ತವೆ' ಎಂಬ ಎಚ್ಚರಿಕೆ ವಿನಯದಿಂದಲೇ ಅವರು ವಿಮರ್ಶಾ ಕಾರ್ಯಕ್ಕೆ ಕೈ ಹಾಕಿರುವುದು ಇಲ್ಲಿ ಎದ್ದು ಕಾಣುತ್ತದೆ.

ಈ ಕೃತಿಯ ಮೊದಲ ಮೂರು ಲೇಖನಗಳು ತೌಲನಿಕ ಅಧ್ಯಯನ ವಿಶ್ಲೇಷಣೆಯನ್ನು ಒಳಗೊಂಡಿದೆ. ಶಂಕರಾಚಾರ್ಯರ 'ದಶಶ್ಲೋಕಿ'ಯ ವ್ಯಾಖ್ಯಾನವಾದ ಮಧುಸೂದನ ಸರಸ್ವತಿಯವರ 'ಸಿದ್ಧಾಂತ ಬಿಂದು'ವಿನ ಅನುವಾದದ ಮಹತ್ವವನ್ನು ಬಣ್ಣಿಸುತ್ತಾ ಭಕ್ತಿ ಪರಂಪರೆಗೆ ತಿರುಗುತ್ತಿದ್ದ ಶೈವರ ವಚನ ಚಳುವಳಿಯಲ್ಲದ್ದುಕೊಂಡೇ ಶೈವ ಪರಂಪರೆಯ ಜೊತೆ ಅಲ್ಲಮ ತಳೆದ ಅದ್ವಯದ ನೆಲೆಯತ್ತ ನಮ್ಮ ಗಮನಸೆಳೆಯುತ್ತಾರೆ. "ಭಕ್ತಿಯ ಆವೇಗದ ಕಾಲದಲ್ಲೂ ಅರಿದು ಕಾಣಬೇಕು ಎಂಬುದು ಭಕ್ತಿ ಹಾಗೂ ಜ್ಞಾನದ ನೆಲೆಗಳಲ್ಲಿ ಅಲ್ಲಮ ವಿಹರಿಸಿದ ಕ್ರಮ. ಜ್ಞಾನ ಹಾಗೂ ಭಕ್ತಿಯ ನೆಲೆಗಳ ನಡುವಿನ ಕಂದರವನ್ನು ನೀಗಿಕೊಂಡ ಕ್ರಮ. ಬುದ್ಧಿ ಭಾವಗಳನ್ನು ಅದ್ವಯವಾಗಿ ಪರಿಹರಿಸಿಕೊಂಡ ಕ್ರಮ. ಭಕ್ತಿ–ಜ್ಞಾನ ಈ ಹಿನ್ನೆಲೆಯಲ್ಲಿಯೂ ಅಲ್ಲಮ ಶಂಕರರಿಂದ ಭಿನ್ನವಾಗುತ್ತಾರೆ. ಶೈವ ಪರಂಪರೆಯ ಪ್ರಧಾನ ಧಾರೆಯಲ್ಲಿದ್ದೂ ಅಲ್ಲಮ ಶಂಕರರಿಂದ ಬೇರಾಗುವ ಕ್ರಮದ ಅಧ್ಯಯನಕ್ಕೆ ಸಿದ್ಧಾಂತ ಬಿಂದುವಿನಂತಹ ಕೃತಿಯ ಅನುವಾದ ಕಾರಣವಾಗಬಲ್ಲದು" ಎಂಬ ಕುತೂಹಲಕರ ಸಂಗತಿಗಳತ್ತ ಸಹೃದಯರ ಗಮನಸೆಳೆದಿದ್ದಾರೆ. 'ಕುಮಾರವ್ಯಾಸನು ವ್ಯಾಸಕುಮಾರನೆ' ಎಂಬ ಲೇಖನದಲ್ಲಿ ಭಾಗವತ ಸಂಪ್ರದಾಯದ ಈ ಕವಿ ಭಕ್ತಿಗೆ ಬದ್ಧನಾಗಿದ್ದೂ, ಕಾವ್ಯದೊಳಗೆ ಎದುರಿಸಿದ ಅನೇಕ ಸವಾಲುಗಳನ್ನು ಹೊಸ ದೃಷ್ಟಿಯಿಂದ ವಿಶ್ಲೇಷಿಸಿದ್ದಾರೆ.

ಪುರಂದರದಾಸರ ಕಾಲದಲ್ಲಿ ಭಾಗ್ಯಲಕ್ಷ್ಮಿಯಾಗಿದ್ದ 'ಸಿರಿ' ದ.ರಾ ಬೇಂದ್ರೆಯವರ ಕಾಲದಲ್ಲಿ 'ಕಾಂಚಾಣ'ವಾದ ಹಿನ್ನೆಲೆಯಲ್ಲಿ ವಿತ್ತ ಪ್ರಬಂಧದ ಲಕ್ಷ್ಮಿ ಹಾಗೂ ಕಾಂಚಾಣ ಕಲ್ಪನೆಗಳನ್ನು ಎದುರುಬದುರಾಗಿಟ್ಟು ಓದುವುದರಿಂದ ಕಾವ್ಯನೀಡುವ ಸಾಂಸ್ಕೃತಿಕ ಪ್ರತಿಕ್ರಿಯೆಗಳನ್ನು ಸೊಗಸಾಗಿ ಅನಾವರಣಗೊಳಿಸಿದ್ದಾರೆ. "ಬದಲಾದ ಹಣದ ಲೋಕದ ಕೇವಲ ಮಾಹಿತಿ ನೀಡುವುದು ಮಾತ್ರ ತಮ್ಮ ಜವಾಬ್ದಾರಿ ಎಂದು ಬಹುತೇಕ ಮಾಧ್ಯಮಗಳು ತಿಳಿದಿರುವ ಈ ಕಾಲದಲ್ಲಿ ಸೂಕ್ಷ್ಮವಾದ ಈ ಕಾವ್ಯದ ಓದು ಹಣದ ಈ ಬದಲಾದ ರೂಪವನ್ನು ಅದು ತನ್ನೊಡನೆ ಸೃಷ್ಟಿಸಿಕೊಳ್ಳುವ ಕಾರ್ಯದೊಂದಿಗೆ ನಮ್ಮ ಸಾಂಸ್ಕೃತಿಕ ಅನುಭವವಾಗಿ ಪಡೆಯಲು ಸಹಕಾರಿ" ಎಂಬ ಮಾತು ಗಮನೀಯವಾಗಿದೆ. ಸ್ಥಿತ್ಯಂತರಗೊಂಡ ಸಾಂಸ್ಕೃತಿಕ ಸಂದರ್ಭವನ್ನು ತೂಗಿನೋಡುವ ಪರಿ ಹಾಗೂ ವಿತ್ತ ಪ್ರಪಂಚವನ್ನು ಹೊಸದಾಗಿ ಅರ್ಥೈಸಿದ ರೀತಿಯಿಂದಾಗಿ ಹೊಸ ಹೊಸ ಅರ್ಥದ ನೆಲೆಗಳು ಇಲ್ಲಿ ಬಹುಹೃದ್ಯವಾಗಿ ದಾಖಲಾಗಿವೆ. ಅಡಿಗ, ಎಚ್.ಎಸ್. ವೆಂಕಟೇಶಮೂರ್ತಿ, ಮೊಗಳ್ಳಿ ಗಣೇಶ್, ಎಸ್ ಮಂಜುನಾಥ ಅವರ ಕಾವ್ಯದ ವಿಭಿನ್ನ ನೆಲೆಗಳ ಮೇಲೆ ಹೊಸಬೆಳಕು ಹಾಯಿಸುವ ಕಾರ್ಯವಿಲ್ಲಿ ಚೆನ್ನಾಗಿ ನೆರವೇರಿದೆ.

ಭಾಗ 2: ಕನ್ನಡ 'ಕಥನ' ಲೋಕದ ಅನನ್ಯತೆಯನ್ನು ಗುರುತಿಸುವ ವಸ್ತುನಿಷ್ಠ ಚಿಂತನೆ

ದಾಖಲಾಗಿದೆ. ಕನ್ನಡ ವಿಮರ್ಶೆಯಲ್ಲಿ ವಿಜಯಶಂಕರ ಅವರದು ಭಿನ್ನ ದನಿ ಎಂಬುದಕ್ಕೆ 'ಕಾರಂತ ಲೋಕದೃಷ್ಟಿ : ನಾಗರಿಕತೆಯ ಕಥನ' ಎಂಬ ಲೇಖನವೇ ಸಾಕು. ಕಾರಂತರ ಕಥನವನ್ನು ನಮ್ಮ ವಿಮರ್ಶಾ ಲೋಕ ಗ್ರಹಿಸಿದ ಕ್ರಮ ಸರಿಯಾಗಿಲ್ಲ ಎಂಬುದನ್ನು ಇಲ್ಲಿ ಸಕಾರಣವಾಗಿ ತೆರೆದಿಟ್ಟಿದ್ದಾರೆ. "ಭಾರತದಲ್ಲಿ ನವನಾಗರಿಕತೆಯೊಂದು ನಿರ್ಮಾಣ ವಾಗುತ್ತಿದ್ದರೂ ನಮ್ಮ ಚಿಂತಕರು ಅದನ್ನೊಂದು ಸಮಾಜ ಪರಿವರ್ತನೆ ಎಂಬ ಮಟ್ಟದಲ್ಲೆ ಗ್ರಹಿಸಿದರು. ಕಾರಂತವಾದಿ ಚಿಂತನೆ ಎಂಬುದು ಭಾರತದ ಅಂದಿನ ಸಂದರ್ಭದಲ್ಲಿ ನವನಾಗರಿಕತೆ ಒಂದರ ಸೃಷ್ಟಿಯ ಗ್ರಹಿಕೆ ಎಂದೇ ನಾವು ಪರಿಗಣಿಸಬೇಕು" ಎಂಬುದಾಗಿ ಹೊಸ ವ್ಯಾಖ್ಯಾನವನ್ನು ನೀಡಿದ್ದಾರೆ. ಕಾರಂತರ ಕಲಾಚಿಂತನೆಯ ಹಿಂದೆ ಇದ್ದ ಹೊಸ ನಾಗರಿಕತೆಯ ತಲ್ಲಣಗಳನ್ನು ಅವರ ಕಾದಂಬರಿಗಳ ಹಿನ್ನೆಲೆಯಲ್ಲಿ ಚಿತ್ರಿಸಿರುವುದು ವಿಜಯಶಂಕರ ಅವರ ಸ್ವೋಪಜ್ಞ ಚಿಂತನೆಗೆ ಉತ್ತಮ ನಿದರ್ಶನ. "ಕಾರಂತರ ಬದುಕು ಬರೆಹಗಳೆರಡಲ್ಲೂ ಬದಲಾಗುತ್ತಿದ್ದ ಭಾರತದ ನಾಗರಿಕತೆಯನ್ನು ಕಾಣಬಹುದು. ಆದುದರಿಂದ ಡಾ. ಕಾರಂತರನ್ನು ನಾವು ನಾಗರಿಕತೆಯ ಕಥನಕಾರ ಎಂಬುದಾಗಿ ಗುರುತಿಸಬೇಕು. ಅವರ ಬದುಕು ಹಾಗೂ ಸೃಜನಶೀಲ ಕೃತಿಗಳಿಂದ ಅವರು ಬದಲಾಗುತ್ತಿರುವ ನಾಗರಿಕತೆಯ ಕಥನವನ್ನು ಹೇಗೆ ಹೇಳುತ್ತಿದ್ದರು ಎಂಬುದನ್ನು ಗಮನಿಸಬೇಕು' ಎನ್ನುತ್ತಲೇ ಕಾರಂತರ ವ್ಯಕ್ತಿತ್ವದ ಹಿರಿಮೆಯನ್ನು ಹೇಳಿದ್ದಾರೆ. ಅವರ ಕಥನ ಸಾಹಿತ್ಯವನ್ನು ಲಿಯೋ ಟಾಲ್‌ಸ್ಟಾಯ್, ರವೀಂದ್ರನಾಥ ಟಾಗೋರರ ಚಿಂತನೆಗಳೊಂದಿಗೆ ಸಮೀಕರಿಸಿ ಕಾರಂತರ ಲೋಕದೃಷಿಯನ್ನು ವಿವರಿಸಿದ್ದಾರೆ. ಅವರು ಹೇಗೆ ನಾಗರಿಕತೆಯ ಕಥನಕಾರರು ಎಂಬುದನ್ನು ಗಟ್ಟಿದನಿಯಲ್ಲಿ ಹೇಳಿ ನಮ್ಮ ದೃಷ್ಟಿ ತಿದ್ದುವ ಕೆಲಸವನ್ನೂ ಮಾಡಿದ್ದಾರೆ.

ಕನ್ನಡದ ಕೃತಿಗಳನ್ನು ಮರುಚಿಂತನೆಗೆ ಗುರಿಪಡಿಸುವ, ಸಾಂಸ್ಕೃತಿಕ ಚಿಂತನೆಯನ್ನು ಸಾಹಿತ್ಯ ಚಿಂತನೆಯೊಡನೆ ಸಮ್ಮಿಶ್ರ ಮಾಡುವ, ಕಸಿಮಾಡುವ, ತಗುಳ್ಚಿ ನೋಡುವ ನಿಟ್ಟಿನಿಂದಲೂ ವಿಜಯಶಂಕರರ ಬರವಣಿಗೆ ನಮಗೆ ಮುಖ್ಯವಾಗುತ್ತದೆ. 'ಗ್ರಾಮಾಯಣ' ರಾವಬಹಾದ್ದೂರರ ಬಹುಚರ್ಚಿತ ಕಾದಂಬರಿ, ಕುರ್ತಕೋಟಿ, ಎಂ.ಜಿ. ಕೃಷ್ಣಮೂರ್ತಿ ಆಮೂರ ಅವರು ಗ್ರಾಮಾಯಣವನ್ನು ತಂತಮ್ಮ ನೆಲೆಗಳಲ್ಲಿ ಅರ್ಥೈಸಿದ್ದಾರೆ. ಇವರೆಲ್ಲ ಸೂಚಿಸಿರುವುದಕ್ಕಿಂತ ಆಚೆ ಇಂದಿನ ಕಾಲಮಾನದಲ್ಲಿ ಯಾವ ನೆಲೆಗಳಿವೆ ಎಂಬುದನ್ನು ವಿಜಯಶಂಕರರು ವಿಸ್ತೃತವಾಗಿ ಶೋಧಿಸಿಕೊಟ್ಟಿದ್ದಾರೆ. 'ಗ್ರಾಮಾಯಣ' ಕಾದಂಬರಿಯಲ್ಲಿ ಸೂಕ್ಷ್ಮವಾಗಿ ಹುದುಗಿರುವ ಪುರಾಣ, ಇತಿಹಾಸ ಹಾಗೂ ವರ್ತಮಾನದ ಜನಜೀವನದ ಪ್ರತಿನಿಧೀಕರಣ ಇವುಗಳ ಪರಸ್ಪರ ಸಂಬಂಧಗಳನ್ನು ಪರೀಕ್ಷಿಸುವ ಕೆಲಸ ಇಲ್ಲಿ ಬಹುಸೂಕ್ಷ್ಮವಾಗಿ ನೆರವೇರಿದೆ. 'ಸಮಗ್ರ ಓದಿನ ಪರಿಕಲ್ಪನೆ ಇಂದಿನ ಬಹುಮುಖ್ಯ ಸಾಂಸ್ಕೃತಿಕ ಅಗತ್ಯವಾಗಿದೆ' ಎಂಬುದಾಗಿ ಬಲವಾಗಿ ಪ್ರತಿಪಾದಿಸುತ್ತಾ ಬಂದವರು ಡಾ. ನರಹಳ್ಳಿ ಬಾಲಸುಬ್ರಹ್ಮಣ್ಯ. ಇಡಿಯಾದ ಓದಿನಲ್ಲಿ ವಿಜಯಶಂಕರ ಅವರು ತೊಡಗಿಸಿಕೊಂಡವರು. 'ಕನ್ನಡದ ಈಚಿನ ಕಾರ್ಯಶೀಲ ಚಟುವಟಿಕೆಯ ಹೊಸ ಕತೆಗಾರರನ್ನು ಅರ್ಥಮಾಡಿಕೊಳ್ಳುವ ಉದ್ದೇಶದಿಂದ ವಸುಧೇಂದ್ರ ಅವರ ಏಳು ಪುಸ್ತಕಗಳನ್ನು ಒಟ್ಟಾಗಿ ಓದಿ ಅಲ್ಲಿನ ವೈಶಿಷ್ಟ್ಯ ಇತಿಮಿತಿಗಳನ್ನು ಸ್ಪಷ್ಟಪಡಿಸಿದ್ದಾರೆ. ಕನ್ನಡ ಸಾಹಿತ್ಯ ಸಂದರ್ಭದಲ್ಲಿ ವಸುಧೇಂದ್ರ ಅವರನ್ನು ಯಾವ ರೀತಿ ಕಾಣಬೇಕು ಎಂಬ ಪ್ರಶ್ನೆಗೆ ಅವರೇ ಸಮರ್ಪಕವಾದ ಉತ್ತರವನ್ನೂ ಕಂಡುಕೊಂಡಿದ್ದಾರೆ. ಒಂದು ಅಂತರದಲ್ಲಿ ನಿಂತು ಸಮಕಾಲಿನ ಸಾಹಿತ್ಯವನ್ನು ಮೌಲ್ಯಮಾಪನ ಮಾಡುವ ಘನಕಾರ್ಯವೂ ಇಲ್ಲಿನ ಬರವಣಿಗೆಯಲ್ಲಿ ನಡೆದಿದೆ ಎಂಬುದು ಉಲ್ಲೇಖನೀಯ ಅಂಶ. "ವಸುಧೇಂದ್ರ ಅವರು

ನಾವು ಗಮನಿಸಬೇಕಾದ ಕನ್ನಡದ ಹೊಸಕತೆಗಾರರಲ್ಲಿ ಒಬ್ಬರು ಎಂಬುದು ನಿಜವಿರಬಹುದು. ಆದರೆ ಟಿ.ಪಿ. ಅಶೋಕರು ಸೂಚಿಸುವಂತೆ ಕನ್ನಡ ಪರಂಪರೆಯ ವಾರಸುದಾರರಲ್ಲಿ ವಸುಧೇಂದ್ರರು ಮುಖ್ಯರಾದವರು ಎಂಬುದು ತೀರಾ ಅವಸರದ ಮಾತಾಯಿತು ಅನಿಸುತ್ತದೆ" ಎಂದು ಪ್ರಾಮಾಣಿಕವಾಗಿ ಧೈರ್ಯವಾಗಿ ಹೇಳಿದ್ದಾರೆ. ಇಂಥ ನೇರ ಆರೋಗ್ಯಪೂರ್ಣ ಸಂವಾದ ಕನ್ನಡದಲ್ಲಿ ಇಂದು ಅಪರೂಪವಾಗುತ್ತಿದೆ. ಸಮಕಾಲೀನ ವಿಮರ್ಶೆ ಹೇಗೆ ನಡೆಯಬೇಕು ಎಂಬ ಪಥನಿದರ್ಶನ ಸಹ ಇಲ್ಲಿ ಪಡಿಮೂಡಿದೆ. ಜೋಗಿ ಅವರ ಕೃತಿಗಳ ತಾತ್ವಿಕ ಗ್ರಹಿಕೆ ಏನು, ಅವರ ಸಮಕಾಲೀನರ ನಡುವೆ ಜೋಗಿಯವರ ನೆಲೆಗಳೇನು ಎಂಬುದರ ಶೋಧ ಹೀಗೆ ಸಮಕಾಲೀನ ಲೇಖಕರ, ವಿಮರ್ಶಕರ ನಿಜದ ನೆಲೆಯನ್ನು ಹುಡುಕುವ ಯತ್ನ, ಸೂಕ್ಷ್ಮ ತುಲನಾತ್ಮಕ ಜಿಜ್ಞಾಸೆ ಇಲ್ಲಿನ ಲೇಖನಗಳಲ್ಲಿ ಎದ್ದು ಕಾಣುವ ಅಂಶ.

ಸಮಕಾಲೀನ ಸಾಹಿತ್ಯದ ಬಗೆಗೆ ಅವರ ಧೋರಣೆ ಏನೆಂಬುದನ್ನು ತಿಳಿದುಕೊಳ್ಳಲು ಪ್ರಸ್ತುತ ಕೃತಿ ಸಹಾಯಕವಾಗಿದೆ. ನಮ್ಮ ಸಮಕಾಲೀನ ಸಂಸ್ಕೃತಿ ವಿಮರ್ಶೆಯ ಗಟ್ಟಿದನಿ ಅವರ ಈ ಕೃತಿಯಲ್ಲಿ ಕೇಳಿಬಂದಿದೆ. "ಎಸ್.ಆರ್.ವಿಜಯಶಂಕರ ತಮ್ಮ ಸ್ವತಂತ್ರ ಚಿಂತನೆ, ನೇರವೂ ಖಚಿತವೂ ಆದ ವಿಶ್ಲೇಷಣೆ, ತರ್ಕಬದ್ಧವಾಗಿ ದಿಟ್ಟ ತೀರ್ಮಾನಗಳತ್ತ ತಲುಪಿಸಬಲ್ಲ ಮೇಧಾವಿ ವಿಮರ್ಶೆಗಾಗಿ ಹೆಸರು ಪಡೆದಿರುವರು. ವಿಜಯಶಂಕರ ಅವರು ವಿಮರ್ಶೆಯ ತಮ್ಮದೇ ಸ್ವತಂತ್ರ ದಾರಿಯೊಂದನ್ನು ರೂಪಿಸಿಕೊಳ್ಳುತ್ತಾ ಬಂದಿದ್ದಾರೆ" ಎಂಬುದಾಗಿ ಈ ಕೃತಿಯ ಮುಮ್ಮಾತಿನಲ್ಲಿ ಡಾ. ಬಿ.ಎನ್. ಸುಮಿತ್ರಾಬಾಯಿ ಅವರು ಹೇಳಿರುವ ಮಾತಿನಲ್ಲಿ ತಥ್ಯವಿದೆ. ಹೀಗಾಗಿ ಪ್ರಸ್ತುತ 'ನಿಜಗುಣ' ಸಮಕಾಲೀನ ಸಾಹಿತ್ಯ ಸ್ಪಂದನದ ನೆಲೆಯಿಂದ ಹೆಚ್ಚಿನ ಮಹತ್ವದ ಚರ್ಚೆಗೆ ಅವಕಾಶ ಕಲ್ಪಿಸಿದೆ. ಹೊಸ ಹೊಸ ಒಳನೋಟಗಳ ನಿಲುವು ಈ ಕೃತಿಯ ಧನಾತ್ಮಕ ಅಂಶ.

ಮೆರವಣಿಗೆಯ ಹಾದಿಯಲಿ
ಸುರಿದ ಹೂ ಪಕಳೆಗಳು
ಹರಡಿ ಬಿದ್ದಿವೆ ಧೂಳಿಯಲಿ
ಸರಿದ ಕಾಲಕ್ಕುಳಿದ ಸಾಕ್ಷಿಯಾಗಿ।

# ಭಕ್ತಿಪ್ರಧಾನ ಕೃಷಿ ಕಾವ್ಯ
# ಶ್ರೀ ಮಧ್ವಪ್ರಾಣ ಕಕ್ರ ಶೆಟ್ಟಿ ಕೃಷಿ ಕಾವ್ಯಲೋಕ

**ಡಾ. ಬಿ. ಜನಾರ್ದನ ಭಟ್**
ಅಕ್ಷರ, ದೇವಸ್ಥಾನದ ರಸ್ತೆ
ಅಂಚೆ : ಬೆಳ್ಮಣ್ಣು – 576111 ಕಾರ್ಕಳ ತಾಲೂಕು

ತಮ್ಮ 'ಅಳಿದುಳಿದವರು' (1990) ಎಂಬ ಕಾದಂಬರಿಯ ಮೂಲಕ ಕನ್ನಡ ಸಾರಸ್ವತ ಲೋಕದ ಗಮನಸೆಳೆದ ಬೋಲ ಚಿತ್ತರಂಜನದಾಸ ಶೆಟ್ಟಿಯವರು ಅದರಲ್ಲಿ ತುಳು ನಾಡಿನ ಮಣ್ಣಿನಗುಣಗಳನ್ನು ಚಿತ್ರಿಸಿ ಪ್ರಸಿದ್ಧ ರಾಗಿದ್ದರು. ನಂತರ ಎರಡು ಕನ್ನಡ ಕಾದಂಬರಿಗಳನ್ನು ಬರೆದರು. ನಂತರ ಅವರು ತುಳು ಪಾರ್ದನಗಳ ಕಥನ ವಿಧಾನವನ್ನು ಬಳಸಿಕೊಂಡು ತುಳುವಿನಲ್ಲಿ ದೀರ್ಘ ಕಾವ್ಯಗಳನ್ನು ರಚಿಸುವ ಮೂಲಕ ಹೊಸ ಪ್ರಯೋಗ ಮಾರ್ಗ ವೊಂದನ್ನು ಕಂಡುಕೊಂಡಿದ್ದಾರೆ. ಆ ಕೃತಿಗಳ ಕನ್ನಡ ಅನುವಾದವನ್ನೂ ಅವರೇ ಪ್ರಕಟಿಸಿದ್ದಾರೆ. ಅಂತಹ ಒಂದು ಮಹತ್ವಾಕಾಂಕ್ಷೆಯ ದೀರ್ಘ ಕಾವ್ಯ ಕೃತಿ 'ಶ್ರೀ ಮಧ್ವಪ್ರಾಣ ಕಕ್ರ ಶೆಟ್ಟಿ ಕೃಷಿ ಕಾವ್ಯಲೋಕ'.

ಈ ಬಗೆಯ ನಿರೂಪಣಾ ವಿಧಾನದ ಮರು ಬಳಕೆಯ ಔಚಿತ್ಯದ ಬಗ್ಗೆ ಪ್ರಶ್ನೆಗಳನ್ನು ಎತ್ತಬಹುದು. ತುಳು ಪಾರ್ದನಗಳು ಹಲವಾರು ವಿಧಗಳಲ್ಲಿ ಬಳಕೆಗೆ ಒದಗುವಂತಹ ರಚನೆಗಳು. ಅವು ಮುಖ್ಯವಾಗಿ ಲಿಖಿತ ರೂಪಕ್ಕೆ ಒಗ್ಗುವಂಥದ್ದಲ್ಲ. ಮೌಖಿಕವಾಗಿ ಆಗಿಂದಾಗ್ಗೆ ಹಾಡಬೇಕಾದ ಪಾರ್ದನಗಳನ್ನು ದೈವಾರಾಧನೆಯ ಸಂದರ್ಭದಲ್ಲಿ ಇನ್‌ವೊಕೇಶನ್‌ಗಾಗಿ, ಮನೋಚಿಕಿತ್ಸೆಗಾಗಿ (ಉದಾ. ಸಿರಿ ಪಾರ್ದನ), ದೈವದ ಸಾಧನೆಗಳ ಕೀರ್ತನೆಯಾಗಿ, ಶುದ್ಧ ಕಾವ್ಯದಂತೆ ಮನರಂಜನೆಗಾಗಿ – ಹೀಗೆ ವಿವಿಧ ಉದ್ದೇಶಗಳಿಗಾಗಿ ಬಳಸುತ್ತಾರೆ. ದೈವಾರಾಧನೆ ಒಂದನ್ನುಳಿದುಅವುಗಳನ್ನು ಬಳಸುವ ಇತರ ಜೀವಂತ ಸನ್ನಿವೇಶಗಳು ಕಡಿಮೆಯಾಗುತ್ತಾ ಬರುತ್ತಿವೆ. ಇಂತಹ ಸಂದರ್ಭ ದಲ್ಲಿ ಪಾರ್ದನಗಳ ಮಾದರಿಯಲ್ಲಿ ಲಿಖಿತ ಕಾವ್ಯವನ್ನು ರಚಿಸುವುದರ ಹಿಂದಿನ ತುಡಿತ ಪಾರ್ದನಗಳ ರಚನೆಯ ಹಿಂದೆ ಇದ್ದವುಗಳಲ್ಲ, ಅದನ್ನು ಒಂದು ತಂತ್ರವಾಗಿ ಮಾತ್ರ ಬಳಸಿರುವುದು ಸ್ಪಷ್ಟವಾಗುತ್ತದೆ.

ಕಾವ್ಯಖಂಡಗಳ ಕೊನೆಗೆ "ಓ ಓ" ಎಂಬ 'ಉರಲ್' (ಪಾರ್ದನದ ಸೊಲ್ಲು) ಇರುವುದರಿಂದ ಕನ್ನಡಿಗರಿಗೆ ಕುತೂಹಲವುಂಟಾಗಬಹುದು. ಮೂಲ ತುಳು ಪಾರ್ದನಗಳನ್ನು ಕೇಳಿದವರಿಗೆ ಇದರ ಸ್ವಾರಸ್ಯ – ನಿರೂಪಣೆ ಯಲ್ಲಿ ಕುತೂಹಲ ಉಳಿಸುವಂತಹ ಸ್ಥಾನಗಳಿಗೆ ಹೊಂದಿಕೊಂಡು ಒಂದು ಉಸಿರೆಳೆದು ಕೊಳ್ಳುವಂತಹ ನಿಲುಗಡೆಯಾಗಿ ಓ ಓ ಬರುವುದು –

ತಿಳಿದಿರುತ್ತದೆ. ಉದಾಹರಣೆಗೆ –

"ಗೋಪಾಲರ ಕಣ್ ತಪ್ಪಿನಿಂದ
ದನಗಳು ಕಾಯಿಪಲ್ಯೆಯ ಹಿತ್ತಲ ಹೊಕ್ಕರೆ
ದನ ಮೇಯಿಸುವಾತ
ಬೆನ್ನಿಗೆ ಕಂಗಿನ ಹಾಳೆ ಕಟ್ಟಿ
ಓಡಾಡಬೇಕೆಂದರಯ್ಯ .... ಓ. ಓ." (ಪುಟ 63)

ಈ ಸಾಲುಗಳಲ್ಲಿ ಸೂಚಿತವಾಗಿರುವಂತೆ ಕವಿ ತುಳುವಿನ ಕಥನ ಸಂಪ್ರದಾಯವನ್ನು ಬಳಸುವುದು ಮಾತ್ರವಲ್ಲ, ತುಳುವಿನ ಆಲಂಕಾರಿಕ ಮಾತುಗಳನ್ನು ಮತ್ತು ಈಡಿಯಮ್‌ಗಳನ್ನು ಕೂಡಾ ಕನ್ನಡಕ್ಕೆ ತಂದಿದ್ದಾರೆ. ಮೇಲಿನ ಈಡಿಯಮ್ 'ಪೆಟ್ಟು ತಿನ್ನಲು ಸದಾ ಸಿದ್ಧನಾಗಿರಬೇಕು' ಎಂದು ಸೂಚಿಸುತ್ತದೆ. ಬೆನ್ನಿಗೆ ಕೋಲಿನ ಪೆಟ್ಟು ತಾಗದ ಹಾಗೆ ಕಂಗು (ಅಡಿಕೆ) ಹಾಳೆಗಳನ್ನು ರಕ್ಷಣೆಗಾಗಿ ಕಟ್ಟಿಕೊಳ್ಳುವ ಹಾಸ್ಯಮಯ ಕಲ್ಪನೆ ಇದರ ಹಿಂದಿದೆ.

ಬೋಲ ಚಿತ್ತರಂಜನದಾಸ ಶೆಟ್ಟಿಯವರು ಮಧ್ವಾಚಾರ್ಯರ ಜೀವನ ಚರಿತ್ರೆ ಮತ್ತು ಐತಿಹ್ಯಗಳನ್ನು ಬಳಸಿಕೊಂಡು ಈ ಭಕ್ತಿ ಪ್ರಧಾನ ಕೃಷಿ ಕಾವ್ಯವನ್ನು ಕಟ್ಟಿಕೊಟ್ಟಿದ್ದಾರೆ. ಕವಿ ಶೆಟ್ಟರು ಮಧ್ವಾಚಾರ್ಯರ ಹುಟ್ಟೂರಾದ ಬೆಳ್ಳೆ – ಕುಂಜಾರು ಗಿರಿ ಪರಿಸರದಲ್ಲಿ ಬಾಲ್ಯದ ದಿನಗಳನ್ನು ಕಳೆದವರು. ಹಾಗಾಗಿ ಅಲ್ಲಿನ ಪರಿಸರವನ್ನು ಮತ್ತು ಕೃಷಿ ಲೋಕವನ್ನು ಬಹಳ ವಿಶಿಷ್ಟವಾಗಿ ಚಿತ್ರಿಸಲು ಅವರಿಗೆ ಸಾಧ್ಯವಾಗಿದೆ. ಉದಾಹರಣೆಗೆ, ಮಧ್ವಾಚಾರ್ಯರ ತಂದೆಯ ಗದ್ದೆಗಳು ಬಂಡೆಗಲ್ಲಿನ ಹಾಸಿನ ಮೇಲೆ ಮಣ್ಣುತುಂಬಿಸಿ ಮಾಡಿದ ಗದ್ದೆಗಳು, ಸುತ್ತ ಬೋಗಿ ಮತ್ತು ಕರ್ಮಾರು ಮರಗಳ ಪ್ರಭಾವದಿಂದ ನೆಲದ ಫಲವಂತಿಕೆ ನಾಶವಾಗುತ್ತದೆ, ಹಾಗಾಗಿ ಅಲ್ಲಿ ಫಸಲು ತೆಗೆಯಲು ಯಾವ ಕೃಷಿ ಪದ್ಧತಿಯನ್ನು ಅನುಸರಿಸಬೇಕು ಎನ್ನುವುದನ್ನು ತಾವೇ ಕೃಷಿ ಮಾಡಿಸಿದಷ್ಟು ಖಚಿತವಾಗಿ ಕವಿ ವಿವರಿಸುತ್ತಾರೆ!

ಬೋಲ ಚಿತ್ತರಂಜನ ದಾಸ ಶೆಟ್ಟಿಯವರು ವರ್ಣಿಸಿರುವ ಶ್ರೀ ಮಧ್ವಾಚಾರ್ಯರ ಕಥಾನಕದ ಮುಖ್ಯ ಅಂಶಗಳು : ಆಚಾರ್ಯರು ಉಡುಪಿ ಜಿಲ್ಲೆಯ ಕುಂಜಾರುಗಿರಿಯ ಸಮೀಪದ ಪಾಜಕ ಕ್ಷೇತ್ರ ಅಥವಾ ಬೆಳ್ಳೆಯಲ್ಲಿ ಹುಟ್ಟಿದವರು. ಅವರ ತಂದೆ ನಾರಾಯಣ ಭಟ್ಟರು ಉಡುಪಿಯ ಅನಂತೇಶ್ವರನ ಭಕ್ತರು, ಜೀವನೋಪಾಯವನ್ನು ಹುಡುಕುತ್ತಾ ಬೆಳ್ಳೆಗೆ ಬಂದವರು. ಅಲ್ಲಿನ ಕೃಷಿಕ ಕಕ್ರ ಶೆಟ್ಟಿಯವರ ಸಹಾಯದಿಂದ ಭಟ್ಟರು ಜೀವನೋಪಾಯಕ್ಕಾಗಿ

ಕೃಷಿ ಮಾಡಲು ತೊಡಗುತ್ತಾರೆ. ಎಲ್ಲಾ ಹಂತಗಳಲ್ಲೂ ಶೆಟ್ಟರು ಅವರಿಗೆ ಬೆಂಬಲವಾಗಿ ನಿಲ್ಲುತ್ತಾರೆ. ಭಟ್ಟರಿಗಾಗಿ ಒಂದು ಜತೆ ಎತ್ತುಗಳನ್ನು ಕೊಂಡುಕೊಳ್ಳಲು ಹೋದಾಗ ಕಡಿಮೆ ಬಿದ್ದ ಎರಡು ವರಹಗಳನ್ನು ತಾವೇ ನೀಡಿರುತ್ತಾರೆ. ಭಟ್ಟರು ಅದನ್ನು ಸಾಲವೆಂದು ಪರಿಗಣಿಸಿರುತ್ತಾರೆ. ಪ್ರಾಣ ದೇವರು ಮತ್ತೆ ಅವತಾರ ತಳೆಯುವರೆಂದು ಅನಂತೇಶ್ವರ ದೇವಾಲಯದ ಎದುರು ದೈವದ ಆವೇಶದ ವೇಳೆಗೆ ನುಡಿಯಾಗುತ್ತದೆ. ಆ ಸಂದರ್ಭದಲ್ಲಿ ಅದನ್ನು ತಿಳಿದ ಭಟ್ಟರ ಹೆಂಡತಿ ಸತ್ಯವತಿ ಅಂತಹ ಅವತಾರ ತನ್ನ ಗರ್ಭದಲ್ಲೇ ಆಗಲಿ ಎಂದು ಪ್ರಾರ್ಥಿಸುತ್ತಾರೆ. ಅವರ ಎರಡು ಗಂಡುಮಕ್ಕಳು ಬಾಲ್ಯದಲ್ಲೇ ಸತ್ತುಹೋಗಿದ್ದವು, ಹೆಣ್ಣು ಮಗಳೊಬ್ಬಳೇ ಉಳಿದಿದ್ದಳು. ಸತ್ಯವತಿಯ ಬಯಕೆಯಂತೆ ಪ್ರಾಣದೇವರು ಅವರ ಗರ್ಭದಲ್ಲಿ ಹುಟ್ಟಿದರು.

ಮಧ್ವಾಚಾರ್ಯರು ( ಬಾಲ್ಯದ ಹೆಸರು ವಾಸುದೇವ) ಭೀಮನಂತೆ ಪ್ರಾಣದೇವರ ಅವತಾರವೆಂಬ ನಂಬಿಕೆಯನ್ನು ಕವಿ ಈ ಕಾವ್ಯದ ಉದ್ದಕ್ಕೂ ಸ್ಥಾಯಿಯಾಗಿ ಇರಿಸಿಕೊಳ್ಳುತ್ತಾರೆ.

ಮಧ್ವರ ಬದುಕಿನ ಕುರಿತಾಗಿರುವ ಐತಿಹ್ಯಗಳನ್ನು ಕಥಾನಕದ ಮಾದರಿಯಲ್ಲಿ ನಿರೂಪಿಸಿದ್ದಾರೆ. ಬ್ರಹ್ಮರಾಕ್ಷಸನನ್ನು ಓಡಿಸಿದ ಪ್ರಸಂಗ, ಮಣಿಮಂತ ರಾಕ್ಷಸನನ್ನು ಮಣಿಸಿದ ಪ್ರಸಂಗ ಇತ್ಯಾದಿಗಳೆಲ್ಲ ಸ್ವಾರಸ್ಯಕರವಾಗಿ ಮರುಹುಟ್ಟು ಪಡೆದಿವೆ. ಉಡುಪಿಯ ಕೃಷ್ಣನ ವಿಗ್ರಹವನ್ನು ತಂದೆಯ ಬಯಕೆಯನ್ನು ಪೂರೈಸಲು ಅನಂತೇಶ್ವರ ದೇವಸ್ಥಾನದ ಪಕ್ಕದಲ್ಲಿ ಸ್ಥಾಪಿಸಿದರೆನ್ನುವ ಭಾಗ ಕವಿಯ ಸ್ವೋಪಜ್ಞ ಕಲ್ಪನೆಗಳೊಂದಿಗೆ ಹೊಸರೂಪದಲ್ಲಿ ಸೃಷ್ಟಿಯಾಗಿದೆ. ಪ್ರಾಣ ದೇವರ ವಿಶ್ವಾತ್ಮಕತೆಯನ್ನು ಉದ್ದಕ್ಕೂ ಸ್ಮರಿಸುತ್ತಾ ಮಧ್ವಾಚಾರ್ಯರು ಪ್ರಾಣದೇವರ ಅವತಾರ ವೆನ್ನುವುದನ್ನು ಸಾಕಾರಗೊಳಿಸುತ್ತಾ ಕಥನ ಸಾಗುತ್ತದೆ. ಒಟ್ಟಿನಲ್ಲಿ ಮಧ್ವಾಚಾರ್ಯರ ತಂದೆಯ ಸಂಸಾರ, ಕಕ್ರ ಶೆಟ್ಟರ ಕೃಷಿ, ಬೆಳ್ಳೆ ಕುಂಜಾರು ಗಿರಿಯ ಗ್ರಾಮ್ಯ ಪರಿಸರ ಮುಂತಾದವುಗಳೇ ಮುಖ್ಯ ಭಾಗವನ್ನು ಆಕ್ರಮಿಸಿವೆ. ಮಧ್ವಾಚಾರ್ಯರ ಬದುಕಿನ ಚಿತ್ರಣ ಮಾತಾ ಪಿತೃ ಪ್ರೇಮ, ಪರಿಸರ – ಕೃಷಿ ಪ್ರೇಮ ಮುಂತಾದ ಗ್ರಾಮೀಣ, ಸಾಂಸಾರಿಕ ನೆಲೆಯಲ್ಲಿರುವುದು ವಿಶೇಷವಾಗಿದೆ.

ಮಧ್ವಾಚಾರ್ಯರ ಹುಟ್ಟೂರಿನಲ್ಲಿರುವ ಮಠಕ್ಕೆ ಕಕ್ರಶೆಟ್ಟಿ ಮಠವೆಂದು ಹೆಸರು. ಇದಕ್ಕೆ ಕಾರಣವಾದ ಐತಿಹ್ಯ ಹೀಗಿದೆ : ಮಧ್ವಾಚಾರ್ಯರ ತಂದೆ ಬಾಲಕನಾಗಿದ್ದ ಮಗನಿಗೆ ತಮ್ಮ ಎತ್ತುಗಳು ಕಕ್ರಶೆಟ್ಟಿಯವರ ಸಾಲದಿಂದ ಕೊಂಡವುಗಳು ಎಂದು ಹೇಳಿದಾಗ ನೊಂದ ಹುಡುಗ ಕಕ್ರ ಶೆಟ್ಟಿಯವರ ಕೈಗೆ ಐದು ಹುಣಿಸೆ ಬೀಜಗಳನ್ನು ಹಾಕುತ್ತಾನೆ. ಅವು ಐದು ಚಿನ್ನದ ವರಹಗಳಾಗುತ್ತವೆ. ಆಶ್ಚರ್ಯಪಟ್ಟ ಕಕ್ರ ಶೆಟ್ಟರಿಗೆ "ನಾನು ನಿಮಗೆ ನೀಡಿದ್ದು ಹುಣಿಸೆ ಬೀಜಗಳೇ, ಅವು ನಿಮ್ಮ ಕೈಗುಣ (ಲಕ್ಷಣ) ದಿಂದಾಗಿ ಚಿನ್ನದ ನಾಣ್ಯಗಳಾದವು" ಎನ್ನುತ್ತಾರೆ.

ಈ ಸನ್ನಿವೇಶವನ್ನು ಕವಿ ಕೃಷಿ ಕಾವ್ಯದ ಕೇಂದ್ರದಲ್ಲಿ ನಿಲ್ಲಿಸುತ್ತಾರೆ. ನಾರಾಯಣ ಭಟ್ಟರು ಕೃಷಿಯಲ್ಲಿ ಕಕ್ರ ಶೆಟ್ಟರ ಶಿಷ್ಯರಾಗಿ ಶೆಟ್ಟರ ದೈನಂದಿನ ಚಟುವಟಿಕೆಗಳನ್ನು ಗಮನಿಸುವಂತೆ ದಕ್ಷಿಣ ಕನ್ನಡದ ಒಕ್ಕಲಿಗರ (ಇದಕ್ಕೆ ಬಂಟ ಸಮುದಾಯದ ಮತ್ತು ಕೃಷಿಕರ ಎಂಬ ಎರಡು ಅರ್ಥಗಳಿವೆ) ಬದುಕಿನ ಕ್ರಮ, ಮನೆತನ, ಕೃಷಿ ತತ್ಪರತೆ, ಅಳಿಯ ಕಟ್ಟು (ಕಟ್ಟಲೆ / ಪದ್ಧತಿ) ಇವೆಲ್ಲವನ್ನೂ ತಂದಿರುವುದು ಇದನ್ನೊಂದು ಕೃಷಿ ಕಾವ್ಯವನ್ನಾಗಿ ಮಾಡಿದೆ. ಆ ಕಾರಣಕ್ಕೂ ಇದೊಂದು ಬಹಳ ವಿಶಿಷ್ಟವಾದ ಕೃತಿಯಾಗಿದೆ. ಜಿಲ್ಲೆಯ ಹಿಂದಿನ ಕಾಲದ ಬದುಕನ್ನು ಕವಿ ಬಹಳ ಸುಂದರವಾಗಿ ಪಡಿಮೂಡಿಸಿದ್ದಾರೆ.

ಕೃಷಿಕರ ಬದುಕಿನ ಜತೆಗೆ ಇಲ್ಲಿನ ದನ ಕರುಗಳು, ಎತ್ತು ಕೋಣಗಳ ಬದುಕೂ ಹಾಸುಹೊಕ್ಕಾಗಿದೆ. ಈ ಕಾವ್ಯದ ಪ್ರಕಾರ ಅದಕ್ಕೆ ಕಾರಣ ನಂದಿಯ ಮೇಲೆ ಶಿವನ ಶಾಪ ! ಸುಂದರವಾದ ಕಲ್ಪನೆ. ಕಕ್ರ ಶೆಟ್ಟರ ಮನೆಯಲ್ಲಿ ಗಾಣದೆತ್ತಿನ ಬೆನ್ನ ಮೇಲೆ ಬೀಳುವ ಚಡಿ ಏಟನ್ನು ಕಂಡು ಭಟ್ಟರ ಕರುಳು ಚುರುಕ್ಕೆನ್ನುತ್ತದೆ. ನನಗೆ ಕೃಷಿ ಬೇಡವೆಂಬ ನಿರ್ಧಾರಕ್ಕೆ ಬರುತ್ತಾರೆ.

"ಕಕ್ರ ಶೆಟ್ರು ರಾಯರ ಹೂಮನಸ್ಸಿಗೆ / ಎದುರಾಡದೆ ಮೆಲ್ಲಗೆ / 'ಅಯ್ಯಾ ರಾಯರೆ / ಇವೆಲ್ಲ ರೈತನ ಅಗತ್ಯದ ಅನ್ನದಾಟಗಳು / ಈಶ್ವರ ದೇವರ ಸವಾರಿ / ನಂದಿಗೆ ಬೀಳುತಿರುವ / ಬೆತ್ತದ ಏಟು / ನಿಮ್ಮನ್ನು ದುಃಖಕ್ಕೀಡು ಮಾಡಿತಲ್ಲವೇ? / ರೈತ ತನ್ನ ಕೈ ಪಾಲನೆಗಳಿಂದ / ತನ್ನ ಮನೆ ಮಗನಂತೆ / ಸಾಕಿರುವ ಪಶುವನ್ನು / ದಂಡಿಸುವುದನು ಕಂಡರೆ / ನಿಮ್ಮಂತೆ ನನ್ನ ಕರುಳೂ ಚುರ್ರೆನ್ನುತ್ತದೆ./ ದೇವ ದೇವರುಗಳ ಕಥೆಯಲ್ಲಿ / ನಂದಿ ನರರೊಂದಿಗೆ / ದುಡಿಯುವುದಕೊಂದು / ಕಥೆ ಉಂಟೆಂದರಯ್ಯ ... ಓ. ಓ." (ಪುಟ 128)

ಆ ಕತೆಯೇನೆಂದರೆ ತ್ರಿಮೂರ್ತಿಗಳು ಭೂಮಿಯಲ್ಲಿ ಅತಿ ಬುದ್ಧಿವಂತನಾದ ಮನುಷ್ಯನನ್ನು ಸೃಷ್ಟಿ ಮಾಡಿದ ಮೇಲೆ ಹಸಿವು ಹಸಿವೆಂದು ಹಾರಾಟ ನಡೆಸುವ ಮನುಷ್ಯರಿಗೆ ಆಹಾರ

ಒದಗಿಸುವ ಚಿಂತೆಯಲ್ಲಿ ಸಭೆ ಸೇರಿದರಂತೆ.

ನರರಿಗೆ ಮೂರು ದಿವಸಕ್ಕೊಮ್ಮೆ ಊಟ ಎಂದು ನಿರ್ಧರಿಸಿ, ಅದನ್ನು ಜಾರಿಗೆ ತರುವ ಹೊಣೆಯನ್ನು ಈಶ್ವರ ದೇವರ ತಲೆಯ ಮೇಲೆ ಹೊರಿಸಿದರಂತೆ. ಅವರು ಕೈಲಾಸದ ಬಾಗಿಲಲ್ಲಿ ನಿದ್ರಿಸುತ್ತಿದ್ದ ನಂದಿಯನ್ನು ತಟ್ಟಿ ಎಬ್ಬಿಸಿ, ನೀನೀಗಲೇ ಭೂಮಿಗೆ ಹೋಗಿ ನರರಿಗೆ ಮೂರು ದಿನಕ್ಕೊಮ್ಮೆ ಊಟ ಎಂದು ಹೇಳಿ ಬಾ ಎಂದು ಕಳಿಸಿದರಂತೆ. ನಂದಿ ಕಂಠಪಾಠ ಮಾಡುತ್ತಾ ಬರುವಾಗ ಅದಲು ಬದಲಾಗಿ ದಿನಕ್ಕೆ ಮೂರು ಊಟ ಎಂದು ಹೇಳಿಹೋಯಿತಂತೆ. ಇದು ಗೊತ್ತಾದ ಮೇಲೆ ಈಶ್ವರ ದೇವರು – "ನಂದಿ ಮಾಡಿರುವ ಅನರ್ಥಕ್ಕೆ / ಸಿಟ್ಟುಗೊಂಡು, ನಂದಿಯ ಬಡಿಯಲು / ಬೆತ್ತ ಹುಡುಕಿದರು / ತಾನು ತಿನಿಸಿ, ಉಣಿಸಿ ಬೆಳೆಸಿದ / ನಂದಿಯನು ಬಡಿಯಲು ಮನಬಾರದೆ / ನಂದಿಯನು ಹತ್ತಿರಕೆ ಕರೆದು / ರಮಿಸುತ ಹೇಳಿದರು / ನಂದೀ – ನರನೊಬ್ಬ ತನ್ನ / ದಿನದ ಮೂರು ಊಟ / ಸಂಪಾದಿಸುವಷ್ಟು ಗಟ್ಟಿಗನಲ್ಲ / ಅವನ ಊಟದ ಹೊರೆಯ / ಹೊರುವಷ್ಟು ಶಕ್ತ ನಾನಲ್ಲ / ನೀನು ಮಾಡಿರುವ ತಪ್ಪಿಗೆ / ನೀನೇ ಹೊಣೆ – ಅದಕಾಗಿ / ನೀನೀಗಲೇ ಭೂಮಿಗೆ ಹೋಗು / ನರರೊಂದಿಗೆ ದುಡಿದು / ಅವರಿಗೆ ದಿನದ ಮೂರು / ಊಟಕ್ಕೊಂದು ವ್ಯವಸ್ಥೆ / ಮಾಡೆಂದರಂತಯ್ಯ ...

ಓ. ಓ." (ಪುಟ 134)

ಇಲ್ಲಿನ ಶಿವನೂ ಕೃಷಿಕ – ಜಮೀನುದಾರನಂತಿರುವುದು ವಿಶೇಷ. ಜತೆಗೆ ಕವಿಯೂ ಕೃಷಿಕನಾಗದೆ, ಪಾರ್ದನಕಾರನಾಗದೆ ಈ ಬಗೆಯ ಗ್ರಾಮ್ಯ ಕಲ್ಪನೆ ಸಾಧ್ಯವಾಗದು. ಈ ದೃಷ್ಟಿಯಿಂದ ಬೋಲ ಚಿತ್ತರಂಜನದಾಸ ಶೆಟ್ಟರು ಪಾರ್ದನದ ಮಾದರಿಯನ್ನು ಬಳಸಿಕೊಂಡಿರುವುದು ಅತ್ಯಂತ ಸೂಕ್ತವಾಗಿದೆ.

ಕಾದಂಬರಿಕಾರರಾದ ಬೋಲ ಚಿತ್ತರಂಜನದಾಸ ಶೆಟ್ಟರು ಆಚಾರ್ಯ ಮಧ್ವರ ಪವಾಡಗಳಿಗೂ ಎಡೆಯಿರುವ, ಪ್ರಾಣ ದೇವರ ಸರ್ವಾಂತರ್ಯಾಮಿತ್ವದಂತಹ ಕಾವ್ಯ ಸೂಕ್ಷ್ಮವುಳ್ಳ ಈ ವಸ್ತುವನ್ನು ನಿಭಾಯಿಸಲು ಗದ್ಯಕ್ಕಿಂತ ಕಾವ್ಯವೇ ಸೂಕ್ತವೆಂದು ಈ ಮಾಧ್ಯಮವನ್ನು ಆರಿಸಿಕೊಂಡಿರುವುದು ಯೋಗ್ಯವಾಗಿದೆ.

ನಿಲುವುಗನ್ನಡಿಯೆದುರು
ಹಲವು ಬಗೆಯಲಿ ನಿಂತು
ಚೆಲುವು ತಿಳಿಯಲುಬಹುದಲ್ಲದೆ
ನಿಲವು ತಿಳಿಯಲುಬಹುದೆ?




## ಮುದ್ದಣ ವಿರಚಿತ ರಾಮಾಶ್ವಮೇಧಂ

**ಸಂ: ಡಾ. ಗಾಯತ್ರಿ ನಾವಡ**

ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು.

ಬೆಲೆ : ರೂ. 160

ಎಂ.ಎಂ. ಕಲ್ಬುರ್ಗಿಯವರ ಗೌರವ ಸಂಪಾದಕತ್ವದಲ್ಲಿ ಕನ್ನಡ ಪುಸ್ತಕ ಪ್ರಾಧಿಕಾರವು ಪ್ರಕಟಿಸಿದ ಹತ್ತು ಗದ್ಯ ಸಾಹಿತ್ಯ ಕೃತಿಗಳ ಮಾಲೆಯಲ್ಲಿ ಇದು ಕೊನೆಯದು. ಗಾಯತ್ರಿ ನಾವಡರು ಇದನ್ನು ಸಂಪಾದಿಸಿದ್ದಾರೆ. ಮುದ್ದಣನ ಹಸ್ತಪ್ರತಿಯನ್ನು ಆಧರಿಸಿ ಜಿ. ವೆಂಕಟಸುಬ್ಬಯ್ಯನವರು ಸಂಪಾದಿಸಿದ ಗ್ರಂಥವನ್ನು ಗಾಯತ್ರಿ ನಾವಡರು ಪ್ರಧಾನ ವಾಗಿ ಆಧಾರವಾಗಿಟ್ಟುಕೊಂಡಿದ್ದಾರೆ. ಮುದ್ದಣನ ಸಾಂಸಾರಿಕ ಬದುಕಿನ ವಿವರ ಇತ್ಯಾದಿ ಅಲ್ಲದೆ ಅವನ ಗದ್ಯದ ಸ್ವರೂಪ, ಸಾಹಿತ್ಯ ಮೀಮಾಂಸೆಯ ಕುರಿತು ಹೇಳುವ ಅಧ್ಯಯನಪೂರ್ಣ ಪ್ರಸ್ತಾವನೆಯನ್ನೂ ಗಾಯತ್ರಿಯವರು ಬರೆದಿದ್ದಾರೆ.




## ಮಹಾನ್ ಇತಿಹಾಸಕಾರರು

**ಇಂಗ್ಲಿಷ್ ಮೂಲ : ಅರುಣ್ ಶೌರಿ**

**ಕನ್ನಡಕ್ಕೆ : ಮಂಜುನಾಥ ಅಜ್ಜಂಪುರ**

ರಾಷ್ಟ್ರೋತ್ಥಾನ ಸಾಹಿತ್ಯ, ಬೆಂಗಳೂರು

ಬೆಲೆ : ರೂ. 200

ಪ್ರಸಿದ್ಧ ಪತ್ರಕರ್ತರಾದ ಅರುಣ್ ಶೌರಿಯವರು ಹಲವು ವರ್ಷಗಳ ಹಿಂದೆಯೇ ಇಂಗ್ಲಿಷಿನಲ್ಲಿ ಬರೆದ ಪುಸ್ತಕದ ಕನ್ನಡ ಅನುವಾದವನ್ನು ಅಚ್ಚುಕಟ್ಟಾಗಿ ಅಜ್ಜಂಪುರ ಅವರು ಮಾಡಿದ್ದಾರೆ. ವಿವಿಧ ಯೋಜನೆಗಳಿಗಾಗಿ ಸರಕಾರದಿಂದ ಹಣವನ್ನು ಪಡೆದು ಯೋಜನೆಗಳನ್ನು ಪೂರ್ಣಗೊಳಿಸದ ಇತಿಹಾಸಕಾರರನ್ನು ಆಧಾರ ಸಹಿತ ಶೌರಿಯವರು ತರಾಟೆಗೆ ತೆಗೆದುಕೊಂಡಿದ್ದೇ ಅಲ್ಲದೆ, ಇತಿಹಾಸದ ಪಠ್ಯಪುಸ್ತಕಗಳನ್ನು ತಿದ್ದುವ ಯತ್ನಗಳನ್ನು ಯಾವ ರೀತಿ ಮಾಡಲಾಗಿದೆ







ಎಂಬುದನ್ನೂ ವಿವರವಾಗಿ ತಿಳಿಸಿದ್ದಾರೆ. ವಿದ್ವಾಂಸರೆನಿಸಿಕೊಂಡವರು ಆತ್ಮವಿಮರ್ಶೆ ಮಾಡಿಕೊಳ್ಳುವಂತೆ ಒತ್ತಾಯಿಸುವ ಕೃತಿ ಇದು.

## ತೀಡಿದಷ್ಟು ಗಂಧ

**ಡಾ. ಪೂವಪ್ಪ ಕಣಿಯೂರು**
ತರಂಗಿಣಿ ಪ್ರಕಾಶನ, ಸುಳ್ಯ,
ಬೆಲೆ : ರೂ. 110

ಹನ್ನೊಂದು ಲೇಖನಗಳಿರುವ ವಿಮರ್ಶಾ ಸಂಕಲನ ಇದು. ಸಾಹಿತ್ಯ ವಿಮರ್ಶೆಯ ಜೊತೆಗೆ ಕೃಷಿ ಕುರಿತ ಚಿಂತನೆಯೂ ಇದೆ. 'ದ.ಕ. ಜಿಲ್ಲೆಯ ಆರು ದಶಕಗಳ ಕಾದಂಬರಿ ಸಾಹಿತ್ಯ (1950 ರಿಂದ 2010)', 'ಕಳೆದೆರಡು ದಶಕಗಳ ಜಾನಪದೀಯ ಅಧ್ಯಯನ' ಇವೆಲ್ಲ ವಿಸ್ತಾರ ಓದಿನಿಂದ ಸಾಧ್ಯವಾದ ಲೇಖನಗಳು. ಕೇವಲ ಸಮೀಕ್ಷೆಯಷ್ಟೇ ಅಲ್ಲದೆ ವಿಶ್ಲೇಷಣೆಯನ್ನೂ ಲೇಖಕರು ಮಾಡಿದ್ದಾರೆ. ಲೇಖಕರ ಸಾಮಾಜಿಕ ಬದ್ಧತೆಯೂ ಇಲ್ಲಿನ ಲೇಖನಗಳಲ್ಲಿ ಬಿಂಬಿತವಾಗಿದೆ.

## ಸ್ವತಂತ್ರ ಭಾರತದಲ್ಲಿ ಅತಂತ್ರ ಕರ್ನಾಟಕ

**ಆನಂದ್. ಜಿ.**
ಬನವಾಸಿ ಬಳಗ ಪ್ರಕಾಶನ, ಬೆಂಗಳೂರು
ಬೆಲೆ : ರೂ. 100

ರಾಜಕೀಯ ಪಕ್ಷಗಳು ರಾಷ್ಟ್ರೀಯ ಹಿತಾಸಕ್ತಿಯ ನೆಪದಲ್ಲಿ ಕರ್ನಾಟಕದ ಹಿತವನ್ನು ಕಡೆಗಣಿಸುತ್ತವೆ ಎಂದು ವಾದಿಸುವ ಪುಸ್ತಕ ಇದು. ಲೇಖಕರೇ ಹೇಳಿಕೊಂಡಂತೆ, ಈ ಕೃತಿಯಲ್ಲಿ ಭಾರತದ ರಾಜಕೀಯ ವ್ಯವಸ್ಥೆಯ ಬಗ್ಗೆ, ಸ್ವಾತಂತ್ರ್ಯ ಪೂರ್ವದ ಕನ್ನಡ ನಾಡಿನ ಸ್ಥಿತಿಗಳ ಬಗ್ಗೆ, ಕರ್ನಾಟಕದ ಪ್ರಾದೇಶಿಕ ಪಕ್ಷಗಳ ಯಶಸ್ಸು, ವೈಫಲ್ಯಗಳ ಬಗ್ಗೆ ರಾಷ್ಟ್ರೀಯ ಪಕ್ಷಗಳಿಂದಾದ ಅನ್ಯಾಯಗಳ ಪರಂಪರೆಯ ಬಗ್ಗೆ – ಹೀಗೆ ಕನ್ನಡ ನಾಡಿನ ಹಿತಾಸಕ್ತಿ ಯನ್ನೇ, ಕೇಂದ್ರವಾಗಿಟ್ಟುಕೊಂಡು ನಡೆಸಿದ ಚಿಂತನೆಯಿದೆ. ಅನುಬಂಧದಲ್ಲಿ ಸಾಕಷ್ಟು ಪೂರಕ ಮಾಹಿತಿಗಳನ್ನು ನೀಡಲಾಗಿದೆ.

## ಸ್ವೀಕಾರ

(1) **ಮಾಯಾ ಕೋಲಾಹಲ**
ಮೌನೇಶ ಬಡಿಗೇರ
ಛಂದ ಪುಸ್ತಕ, ಬೆಂಗಳೂರು
ಬೆಲೆ: ರೂ.100/–

(2) **ಮೋಹನ ಸ್ವಾಮಿ**
ವಸುಧೇಂದ್ರ
ಛಂದ ಪುಸ್ತಕ, ಬೆಂಗಳೂರು
ಬೆಲೆ : ರೂ. 180/–

(3) **ನೂಪುರಾಗಮ**
ಸಂಶೋಧನ ನಿಯತ ಕಾಲಿಕ
ಸಂ: ಮನೋರಮಾ ಬಿ. ಎನ್.
ನೂಪುರ ಭ್ರಮರಿ, ಮಡಿಕೇರಿ
ಬೆಲೆ: ರೂ. 200/–

(4) **ಕತೆ ಬರೆಯುವುದು ಹೇಗೆ**
ಎನ್. ಭವಾನಿ ಶಂಕರ್
ವಿ. ಶಾರದಾ ಪುಸ್ತಕ ಪ್ರಕಾಶನ, ಶಿರ್ವ
ಬೆಲೆ : ರೂ. 100/–

(5) **ನಟನೆ ಕಲಿಯಿರಿ**
ಎನ್. ಭವಾನಿ ಶಂಕರ್
ವಿ. ಶಾರದಾ ಪುಸ್ತಕ ಪ್ರಕಾಶನ, ಶಿರ್ವ
ಬೆಲೆ : ರೂ. 80/–

(6) **ಮುದ್ರಾಮಂಜೂಷ : ಒಂದು ಸಮಗ್ರ ಅಧ್ಯಯನ**
ಡಾ. ಕೆ. ಎಸ್. ಎನ್. ಉಡುಪ
ಸುದರ್ಶನ ಪ್ರಕಾಶನ, ಸುಬ್ರಹ್ಮಣ್ಯ
ಬೆಲೆ : ರೂ. 195/–

(7) **ಹುಸಿ ಜಾತ್ಯತೀತವಾದ**
ಸೀತಾರಾಮ ಗೋಯಲ್
ಅನು : ಶ್ರೀನಿವಾಸ ಸುಬ್ರಹ್ಮಣ್ಯಂ
ಸಾಹಿತ್ಯ ಸಿಂಧು ಪ್ರಕಾಶನ, ಬೆಂಗಳೂರು,
ಬೆಲೆ : ರೂ. 75/–

(8) **ಆತ್ಮರಕ್ಷಣೆಯೆಡೆಗೆ ಹಿಂದೂ ಸಮಾಜ.......!**
ಸೀತಾರಾಮ ಗೋಯಲ್
ಅನು : ಮಂಜುನಾಥ ಅಜ್ಜಂಪುರ
ಸಾಹಿತ್ಯ ಸಿಂಧು ಪ್ರಕಾಶನ, ಬೆಂಗಳೂರು
ಬೆಲೆ : ರೂ. 100/–

(9) **ಕ್ರೈಸ್ತ ಕ್ರೌರ್ಯ ಪರಂಪರೆ**
ಟಿ. ಎ. ಪಿ. ಶೆಣೈ
ರಾಷ್ಟ್ರೋತ್ಥಾನ ಸಾಹಿತ್ಯ
ಬೆಂಗಳೂರು
ಬೆಲೆ : ರೂ. 75/–

**ಚಂದಾದಾರರಿಗೆ ಸೂಚನೆ**

ಚಂದಾಹಣವನ್ನು ಪತ್ರಿಕೆಯ ಬ್ಯಾಂಕ್ ಖಾತೆಗೆ ನೇರವಾಗಿ ಜಮೆ ಮಾಡಿದರೆ, ಆ ಬಗ್ಗೆ ವಿವರಗಳನ್ನು ತಕ್ಷಣ ದಯವಿಟ್ಟು ಬರೆದು ತಿಳಿಸಬೇಕಾಗಿ ಕೋರಿಕೆ. ಯಾಕೆಂದರೆ ಬ್ಯಾಂಕಿನವರು ವಹಿವಾಟನ್ನು ದಾಖಲಿಸುವಾಗ ಬಹಳ ಬಾರಿ ಹಣ ಜಮೆ ಮಾಡಿದವರ ಹೆಸರನ್ನು ಸಹ ನಮೂದಿಸುವುದಿಲ್ಲ. ಹೀಗೆ ಒಂದೆರಡು ಪ್ರಕರಣಗಳಲ್ಲಿ ಖಾತೆಗೆ ಹಣ ಜಮಾ ಮಾಡಿದವರು ಯಾರೆಂದೇ ಗೊತ್ತಾಗದೆ ಪತ್ರಿಕೆ ಕಳಿಸಲು ಸಾಧ್ಯವಾಗುತ್ತಿಲ್ಲ. ಇದು ನಮಗೆ ತುಂಬ ಮುಜುಗರ ಹಾಗೂ ಬೇಸರದ ಸಂಗತಿ. ದಯವಿಟ್ಟು ಚಂದಾದಾರರು ಸಹಕರಿಸಬೇಕು. ಪತ್ರಿಕೆ ಸಿಗದವರು ಕಾರ್ಡ್ ಅಥವಾ ದೂರವಾಣಿ ಅಥವಾ ಕಿರುಸಂದೇಶದ ಮೂಲಕ ತಿಳಿಸಿದರೆ ಪುನಃ ಕಳುಹಿಸುವ ವ್ಯವಸ್ಥೆ ಮಾಡಲಾಗುವುದು.

# Form IV

## Statement about ownership and other particulars about CHINTHANA BAYALU (Quarterly)

| | | | |
|---|---|---|---|
| 1. | Place of Publication | : | Bantwal, Dakshina Kannada |
| 2. | Periodicity of its publication | : | Quarterly |
| 3. | Printers Name | : | Reshma G. Bhat |
| | Nationality | : | Indian |
| | Address | : | No. 15-109, Modankapu<br>Bantwal Taluk, D.K. - 574 219 |
| 4. | Publishers Name | : | Reshma G. Bhat |
| | Nationality | : | Indian |
| | Address | : | No. 15-109, Modankapu<br>Bantwal Taluk, D.K. - 574 219 |
| 5. | Editors Name | : | Reshma G. Bhat |
| | Nationality | : | Indian |
| | Address | : | No. 15-109, Modankapu<br>Bantwal Taluk, D.K. - 574 219 |
| 6. | Names and address of individuals who own the newspaper and partners or sharesholders holding more than one percent of the total capital | } | Reshma G. Bhat<br>No. 15-109, Modankapu,<br>Bantwala Taluk<br>D.K. - 574 219 |

I, Reshma G. Bhat, hereby declare that the particulars given above are true to the best of my knowledge and belief.

Date: 31 December 2013

**Reshma G. Bhat**
(Publisher)

- ★ ಚಿಂತನ ಬಯಲು ತ್ರೈಮಾಸಿಕ ಪತ್ರಿಕೆಯನ್ನು ವೃತ್ತಿಪರವಾಗಿ ನಡೆಸಿಕೊಂಡು ಹೋಗಬೇಕೆಂಬುದು ನಮ್ಮ ಅಪೇಕ್ಷೆ.
- ★ ಈ ಪತ್ರಿಕೆ ISSN ಮಾನ್ಯತೆ ಪಡೆದಿರುತ್ತದೆ. ISSN 2278-2192
- ★ ಗಂಭೀರ ಚಿಂತನೆಯನ್ನೊಳಗೊಂಡ ಲೇಖನಗಳು, ವಿಮರ್ಶಾ ಲೇಖನಗಳು ಹಾಗೂ ಸಂಶೋಧನಾತ್ಮಕ ಲೇಖನಗಳನ್ನು ಪ್ರಕಟಣೆಗಾಗಿ ಆಹ್ವಾನಿಸುತ್ತಿದ್ದೇವೆ.
- ★ ಇಲ್ಲಿ ಪ್ರಕಟವಾಗುವ ಲೇಖನಗಳ ಗುಣಮಟ್ಟವನ್ನು ಉಳಿಸಿ ಬೆಳೆಸುವುದಕ್ಕಾಗಿ, ಲೇಖನಗಳನ್ನು ಆಯಾ ಕ್ಷೇತ್ರಗಳಲ್ಲಿ ಪರಿಣತರಾದವರಿಂದ ಸಮೀಕ್ಷೆ ಮಾಡಿಸಿ, ಅಂದರೆ, ಅನಾಮಿಕ ಸಂಪಾದಕರಿಂದ ಅಭಿಪ್ರಾಯ ಪಡೆದು ಪ್ರಕಟಿಸಲಾಗುವುದು. ತಜ್ಞರ ಸೂಚನೆಗಳನ್ನು ಅನುಸರಿಸಿ, ಅವಶ್ಯವೆನಿಸಿದರೆ, ಸೂಕ್ತ ಪರಿಷ್ಕರಣೆಗಳನ್ನು ಮಾಡುವಂತೆ ಲೇಖಕರನ್ನು ಕೋರಲಾಗುವುದು.
- ★ ಎಲ್ಲಾ ಪ್ರಕಟಿತ ಲೇಖನಗಳಿಗೆ ಸಂಭಾವನೆ ನೀಡಲಾಗುವುದು.
- ★ ಲೇಖನಗಳಿಗೆ ಬಹಳ ಕಟ್ಟುನಿಟ್ಟಾದ ಪದಗಳ ಮಿತಿ ಇಲ್ಲ.
- ★ ಯಾವುದೇ ಆಧಾರಗಳಿಲ್ಲದೆ, ಕೇವಲ ಹೇಳಿಕೆ, ಅಭಿಪ್ರಾಯ ರೂಪದ ಬರಹಗಳನ್ನು ದಯವಿಟ್ಟು ಕಳುಹಿಸುವುದು ಬೇಡ. ಅಗತ್ಯವಿರುವ ಕಡೆಗಳಲ್ಲಿ ಟಿಪ್ಪಣಿ, ಪರಾಮರ್ಶನ ಗ್ರಂಥಗಳು ಇತ್ಯಾದಿ ಮಾಹಿತಿಗಳನ್ನು ಲೇಖನಗಳು ಹೊಂದಿರಲಿ.
- ★ ಲೇಖನಗಳು ಬೇರೆ ಕಡೆ ಪ್ರಕಟವಾಗಿರಬಾರದು. ಜಾಲಲೇಖ (ಬ್ಲಾಗ್)ಗಳಲ್ಲಿ ಪ್ರಕಟವಾಗಿದ್ದರೆ ವಿವರಗಳನ್ನು ನೀಡಬೇಕು. ಅನುವಾದಿತ ಲೇಖನಗಳಾದರೆ ಮೂಲದ ಬಗ್ಗೆ ಪೂರ್ಣ ವಿವರ ಹಾಗೂ ಮೂಲಲೇಖಕರ ಅನುಮತಿ ಇತ್ಯಾದಿ ತಾಂತ್ರಿಕ ಆವಶ್ಯಕತೆಗಳನ್ನು ಪೂರೈಸಿರಬೇಕು. ಲೇಖನಗಳನ್ನು ಕೈಬರಹ ಅಥವಾ ಬೆರಳಚ್ಚು ಮಾಡಿ ಕಳುಹಿಸುವುದಾದರೆ ಒಂದೇ ಮಗ್ಗುಲಲ್ಲಿ ಇರಲಿ. ಮಿಂಚಂಚೆಯ ಮೂಲಕ ಕಳುಹಿಸಿದರೆ ಉತ್ತಮ. ಟಿಪ್ಪಣಿಗಳು ಲೇಖನದ ಕೊನೆಗೇ ಇರಬೇಕು.
- ★ ಲೇಖಕರು ತಮ್ಮ ಲೇಖನಗಳ ಪ್ರತಿಗಳನ್ನು ಇಟ್ಟುಕೊಳ್ಳಬೇಕಾಗಿ ಕೋರಿಕೆ.
- ★ ಲೇಖಕರು ತಮ್ಮ ಪೂರ್ಣ ಅಂಚೆ ವಿಳಾಸ, ಮಿಂಚಂಚೆ ವಿಳಾಸ ಹಾಗೂ ದೂರವಾಣಿ ಸಂಖ್ಯೆಗಳನ್ನು ಕಡ್ಡಾಯವಾಗಿ ನಮೂದಿಸಿರಬೇಕು.
- ★ ಪುಸ್ತಕ ವಿಮರ್ಶೆ, ಸಮೀಕ್ಷೆಗಾಗಿ ಕೆಲವು ಪುಟಗಳನ್ನು ಮೀಸಲಿಡಲಾಗುವುದು. ಲೇಖಕರು, ಪ್ರಕಾಶಕರು ತಮ್ಮ ಪ್ರಕಟಿತ ಪುಸ್ತಕಗಳ ಎರಡು ಪ್ರತಿಗಳನ್ನು ವಿಮರ್ಶೆ ಸಮೀಕ್ಷೆಗಾಗಿ ಕಳುಹಿಸಿಕೊಡಬಹುದು.
- ★ ಓದುಗರ ಪ್ರತಿಕ್ರಿಯೆಗಳನ್ನು ಸ್ವಾಗತಿಸುತ್ತೇವೆ.
- ★ ಚಂದಾದಾರರಿಗೆ ವಂಚನೆಯಾಗುವಂತೆ ಪತ್ರಿಕೆಯನ್ನು ಅರ್ಧದಲ್ಲಿ ನಿಲ್ಲಿಸುವುದಿಲ್ಲ.
- ★ ಸಂಪರ್ಕ ವಿಳಾಸ : ಸಂಪಾದಕರು, ಚಿಂತನ ಬಯಲು, ನಂ. 15-109
ಮೊಡಂಕಾಪು ಅಂಚೆ, ಬಂಟ್ವಾಳ ತಾಲೂಕು, ದಕ್ಷಿಣ ಕನ್ನಡ - 574 219.
ಮಿಂಚಂಚೆ : chinthanabayalu@gmail.com
ದೂರವಾಣಿ : 9449772651

ವಾರ್ಷಿಕ ಚಂದಾ :

**ರೂಪಾಯಿ ಇನ್ನೂರು**

(ಅಂಚೆ ವೆಚ್ಚ ಸೇರಿ)

ಮೂರು ವರ್ಷಗಳಿಗೆ :

**ರೂಪಾಯಿ ಆರು ನೂರು**

ಐದು ವರ್ಷಗಳಿಗೆ :

**ರೂಪಾಯಿ ಒಂದು ಸಾವಿರ**

ಆಜೀವ (ಪೋಷಕ) ಚಂದಾ :

**ರೂಪಾಯಿ ಐದು ಸಾವಿರ**

ಮಹಾಪೋಷಕ ಚಂದಾ :

**ರೂಪಾಯಿ ಹತ್ತು ಸಾವಿರ**

ಬಿಡಿ ಪ್ರತಿ :

**ರೂಪಾಯಿ ಐವತ್ತು**

ದಯವಿಟ್ಟು ಡಿ.ಡಿ./ಎಂ.ಓ.ಗಳನ್ನು 'ಚಿಂತನ ಬಯಲು' ಹೆಸರಿನಲ್ಲಿ ಪತ್ರಿಕೆಯ ವಿಳಾಸಕ್ಕೆ ಕಳುಹಿಸಿ. ಚೆಕ್/ಡಿ.ಡಿ. ಮಂಗಳೂರಿನಲ್ಲಿ ಸಂದಾಯವಾಗುವಂತಿರಲಿ. ದಯವಿಟ್ಟು ಹೊರ ಊರಿನ ಚೆಕ್ ಕಳುಹಿಸಬೇಡಿ. ಎಲ್ಲಕ್ಕಿಂತ ಸುಲಭವಾಗಿ ಈ ಕೆಳಗಿನ ಖಾತೆಗೆ ನೇರವಾಗಿ ಸಂದಾಯ ಮಾಡಿ ಪೂರ್ಣವಿಳಾಸ ಹಾಗೂ ದೂರವಾಣಿ ಇತ್ಯಾದಿ ವಿವರಗಳೊಂದಿಗೆ ಸಂದಾಯದ ವಿವರಗಳನ್ನು ಬರೆಯಬಹುದು ಅಥವಾ ಮಿಂಚಂಚೆ ಮೂಲಕ ತಿಳಿಸಬಹುದು. ಬ್ಯಾಂಕ್ ಚಾರ್ಜನ್ನು ಚಂದಾದಾರರೇ ದಯವಿಟ್ಟು ಭರಿಸಬೇಕು.

ಕರ್ನಾಟಕ ಬ್ಯಾಂಕಿನ ಬಂಟ್ವಾಳ ಮೂಡ ಶಾಖೆಯಲ್ಲಿ

**ಚಿಂತನ ಬಯಲು** ಹೆಸರಿನಲ್ಲಿರುವ

**ಕರೆಂಟ್ ಅಕೌಂಟ್ ಸಂಖ್ಯೆ :**

**0712000100041401 IFSC: KARB 0000071**

## ಸಾಹಿತ್ಯ ಪ್ರಕಾಶನ, ಕೊಪ್ಪೀಕರ ರಸ್ತೆ, ಹುಬ್ಬಳ್ಳಿ
## ನಿಮ್ಮ ಬಹುಮುಖ ಆಸಕ್ತಿಗಾಗಿ, ವ್ಯಕ್ತಿತ್ವ ವಿಕಸನಕ್ಕಾಗಿ ಈ ಪುಸ್ತಕಗಳನ್ನು ಓದಿ :

**ಪಾಟೀಲ ಪುಟ್ಟಪ್ಪ**
ಕರ್ನಾಟಕದ ಸಂಗೀತ ಕಲಾರತ್ನರು
ಕರ್ನಾಟಕದ ಕವಿ, ಲೇಖಕರು
ಸೋತೆ ಎನಬೇಡಿ ಸೋಲಿನಲ್ಲೇ ಗೆಲುವು ಇದೆ
ಇಲ್ಲಿ ಬೆಳಕಿದೆ
ಬದುಕಲು ಬೇಕು ಬದುಕುವ ಈ ಮಾತು
ಅನುಭವ ಇರುವಲ್ಲಿ ಅಮೃತತ್ವ ಇದೆ
ಕನ್ನಡದ ಕಂಪು
ಅವರ ಬದುಕು ನಮಗೆ ಬೆಳಕು
ಪುಸ್ತಕ ಸಂಸ್ಕೃತಿ
ಚೆಲುವ ಕನ್ನಡನಾಡು
ಸುವರ್ಣ ಕರ್ನಾಟಕ
ಸರ್ ಸಾಹೇಬರು
ನೀವು ನಗಬೇಕು
ನೆನಪಿನ ಬುಟ್ಟಿ
ನಮ್ಮ ದೇಶ ನಮ್ಮ ಜನ
ತಾಯಿಯೇ ಮೊದಲ ಗುರು
(ಇಂದುಮತಿ ಪುಟ್ಟಪ್ಪ)
ಅನುಭವಾಮೃತದ ಅರವಟ್ಟಿಗೆ
(ಇಂದುಮತಿ ಪುಟ್ಟಪ್ಪ)

**ವಿಶ್ವೇಶ್ವರ ಭಟ್**
ನೂರೆಂಟು ಮಾತು II
ಜನಗಳಮನ I
ಬಾನಯಾನ
ನಾನೇಕೆ ಮಂತ್ರಿಯತ್ತ ಬೂಟನ್ನೆಸೆದೆ?
ಸ್ಫೂರ್ತಿ ಸೆಲೆ
ಧನ ದೇವೋಭವ
ಸುದ್ದಿಮನೆ ಕತೆ – 2
ನೂರೆಂಟು ಮಾತು II
ಬಾಲ್ಕನಿಯಿಂದ – 1, 2

**ಡಾ. ಬಿ.ವಿ. ಪಟ್ಟಾಭಿರಾಮ್**
ಮನಸ್ಸಿನ ಭಾಷೆ ಮೈಂಡ್ ಮ್ಯಾಜಿಕ್
ನೀ ನೆಮ್ಮದಿಯಿಂದಿರು, ಓ ಮನವೇ
ಸೊಗಸಾದ ಮಾತುಗಾರರಾಗಬೇಕೆ?
ಆತ್ಮವಿಶ್ವಾಸ
ಪಾಸಿಟಿವ್ ಥಿಂಕಿಂಗ್
ಸೆಲ್ಫ್ ಹಿಪ್ನಾಟಿಸಂ – ರಿಲ್ಯಾಕ್ಸೇಷನ್
ಯಶಸ್ಸಿನ ಮೊದಲ ಸೋಪಾನ ನಾಯಕತ್ವದ ಲಕ್ಷಣ
ಉತ್ತಮ ತಂದೆ + ಉತ್ತಮ ಗುರುಗಳು = ಅತ್ಯುತ್ತಮ ವಿದ್ಯಾರ್ಥಿ

**ಪ್ರತಾಪ್‌ಸಿಂಹ**
ಬೆತ್ತಲೆ ಜಗತ್ತು I-VI
ನರೇಂದ್ರ ಮೋದಿ : ಯಾರೂ ತುಳಿಯದ ಹಾದಿ
ಮೈನಿಂಗ್ ಮಾಫಿಯಾ – ಇವರಾರು ಗೊತ್ತೇನು?
ಮಹಮದಾಲಿ ಜಿನ್ನಾ

**ಯಂಡಮೂರಿ ವೀರೇಂದ್ರನಾಥ್**
ತಪ್ಪು ಮಾಡೋಣ ಬನ್ನಿ
ಯಶಸ್ಸಿನ ರಹಸ್ಯಗಳು : ಪಾಲಕರಿಗೆ ಗೊತ್ತಿಲ್ಲ ; ಶಿಕ್ಷಕರು ಹೇಳಲ್ಲ!
ನೂರು ಮಾತು ಕೇಳಿ; ಒಂದು ರ್‍ಯಾಂಕ್ ಗಳಿಸಿ
ವ್ಯಕ್ತಿತ್ವ ವಿಕಾಸ ಮತ್ತು ಸಂವಹನ ಕೌಶಲ್ಯಗಳು
Personality Development & Communication Skills
ಯಶಸ್ಸಿನತ್ತ ಪಯಣ
ನಿಮ್ಮನ್ನು ನೀವು ಗೆಲ್ಲಬಲ್ಲಿರಿ
ಓ ಹೆಣ್ಣೇ ನೀನೆಷ್ಟು ಒಳ್ಳೆಯವಳು!
ನಿಮ್ಮ ಮಕ್ಕಳು ನಿಮ್ಮನ್ನು ಪ್ರೀತಿಸುವರೇ?


CAMPCO
Chocolate
A sweet relationship needs
a sweeter celebration
MILK 'n' MILK
Snack Bar
Cream
MELTO
CAMPCO BAR
Turbo
Treat
Campco
Dilwala Chocolate
The Campco Ltd.
Mission Street, Mangalore - 575001 Ph.: 0824 - 2888200
www.campco.org
AN ISO 22000 : 2005 CERTIFIED COMPANY

# ಉಳಿತಾಯ ಅಥವಾ ಚಾಲ್ತಿ ಖಾತೆ ತೆರೆಯಿರಿ ಹಾಗೂ
# ಉಚಿತವಾಗಿ ಪಡೆಯಿರಿ



ಮನಿಕ್ಲಿಕ್™
ಅಂತರ್ಜಾಲ ಬ್ಯಾಂಕಿಂಗ್

**ನಿಮ್ಮ ಖಾತೆಯೊಂದಿಗೆ**
**ನಿರಂತರ ಸಂಪರ್ಕದ ಲಾಭ ಪಡೆಯಿರಿ.**
**ಯಾವುದೇ ಸಮಯದಲ್ಲಿ ಯಾವುದೇ ಸ್ಥಳದಿಂದ**

## ಕೆಬಿಎಲ್ ಮೊಬೈಲ್

**ನೀವು ಇದ್ದಲ್ಲಿಯೇ ನಿಮ್ಮ ಬ್ಯಾಂಕ್!!**

ಕೆಬಿಎಲ್ ಮೊಬೈಲ್

ಸುರಕ್ಷಿತ • ತ್ವರಿತ • ಸರಳ



ಸುಲಭ ಬ್ಯಾಂಕಿಂಗ್ ಸೇವೆಗಾಗಿ
ಕೆಬಿಎಲ್ ಮೊಬೈಲ್‌ಗೆ
ಇಂದೇ ಅರ್ಜಿ ನೀಡಿರಿ

**ನಿಮ್ಮ ಖಾತೆಯ ಮಾಹಿತಿಗಾಗಿ**

## ಎಸ್‌ಎಂಎಸ್

**ಇಂದೇ ನಿಮ್ಮ ಮೊಬೈಲ್ ಸಂಖ್ಯೆಯನ್ನು ನೊಂದಾಯಿಸಿ**




ಖಾತೆಯ ವ್ಯವಹಾರದ ವಿವರದೊಂದಿಗೆ ಬ್ಯಾಲೆನ್ಸನ್ನೂ ನಿರಂತರವಾಗಿ ಪಡೆಯಿರಿ

ನಿಮ್ಮ ಅನುಕೂಲತೆ.. ನಿಮ್ಮ ಆದ್ಯತೆ




## ಕೆಬಿಎಲ್ ಮನಿಪ್ಲಾಂಟ್®

**ಅಂತಾರಾಷ್ಟ್ರೀಯ ವೀಸಾ**
**ಡೆಬಿಟ್ ಕಾರ್ಡ್**

**ನಿಮ್ಮ ಬ್ಯಾಂಕ್ ಖಾತೆ**
**ನಿಮ್ಮ ಜೇಬಿನಲ್ಲಿ**

ನಿಮ್ಮ ದೈನಂದಿನ ಬದುಕಿನಲ್ಲಿ ಸುರಕ್ಷಿತ,
ಭದ್ರತೆ ಮತ್ತು ಅನುಕೂಲಕ್ಕಾಗಿ ಹಣ ವರ್ಗಾವಣೆ.

ಷರತ್ತುಗಳು ಅನ್ವಯವಾಗುತ್ತವೆ

SCAN THIS QR CODE FOR MORE DETAILS

ಹೆಚ್ಚಿನ ಮಾಹಿತಿಗಾಗಿ ಟೋಲ್ ಫ್ರೀ ಸಂಖ್ಯೆ 1800 425 1444ಗೆ ಕರೆ ಮಾಡಿ ಅಥವಾ ನಿಮ್ಮ ಸಮೀಪದ ಶಾಖೆಯನ್ನು ಸಂಪರ್ಕಿಸಿ

# ಕರ್ಣಾಟಕ ಬ್ಯಾಂಕ್ ಲಿ.

ನಿಮ್ಮ ಕುಟುಂಬದ ಬ್ಯಾಂಕ್. ಭಾರತದಾದ್ಯಂತ.

ನೋಂದಾಯಿತ ಹಾಗೂ ಪ್ರಧಾನ ಕಚೇರಿ: ಮಂಗಳೂರು - 575 002    ಇಮೇಲ್: info@ktkbank.com  ವೆಬ್‌ಸೈಟ್: www.karnatakabank.com

RNI Reg No. : KARKAN /2012/49251

**CHINTHANA BAYALU** ISSN 2278-2192

**Kannada Quarterly, Volume 2, Issue 2, October-December 2013**

Edited, Published, Printed & Owned by

**Reshma G. Bhat**

Door No. 15-109, Modankapu Post,

Bantwal Taluk, Dakshina Kannada 574 219.

Printed at

**Aakrithi Prints**

Light House Hill Road, Mangalore - 575 001

**Pages : 64**

ವಾರ್ಷಿಕ ಚಂದಾ : ರೂಪಾಯಿ ಇನ್ನೂರು

(ಅಂಚೆ ವೆಚ್ಚ ಸೇರಿ)

ಮೂರು ವರ್ಷಗಳಿಗೆ : ರೂಪಾಯಿ ಆರುನೂರು

ಐದು ವರ್ಷಗಳಿಗೆ : ರೂಪಾಯಿ ಒಂದು ಸಾವಿರ

ಆಜೀವ (ಪೋಷಕ) ಚಂದಾ : ರೂಪಾಯಿ ಐದು ಸಾವಿರ

ಮಹಾಪೋಷಕ ಚಂದಾ : ರೂಪಾಯಿ ಹತ್ತು ಸಾವಿರ

ಬಿಡಿ ಪ್ರತಿ : ರೂಪಾಯಿ ಐವತ್ತು

ದಯವಿಟ್ಟು ಡಿ.ಡಿ./ಎಂ.ಓ.ಗಳನ್ನು 'ಚಿಂತನ ಬಯಲು' ಹೆಸರಿನಲ್ಲಿ ಪತ್ರಿಕೆಯ ವಿಳಾಸಕ್ಕೆ ಕಳುಹಿಸಿ. ಚೆಕ್/ಡಿ.ಡಿ. ಮಂಗಳೂರಿನಲ್ಲಿ ಸಂದಾಯವಾಗುವಂತಿರಲಿ. ದಯವಿಟ್ಟು ಹೊರ ಊರಿನ ಚೆಕ್ ಕಳುಹಿಸಬೇಡಿ. ಎಲ್ಲಕ್ಕಿಂತ ಸುಲಭವಾಗಿ ಈ ಕೆಳಗಿನ ಖಾತೆಗೆ ನೇರವಾಗಿ ಸಂದಾಯ ಮಾಡಿ ಪೂರ್ಣವಿಳಾಸ ಹಾಗೂ ದೂರವಾಣಿ ಇತ್ಯಾದಿ ವಿವರಗಳೊಂದಿಗೆ ಸಂದಾಯದ ವಿವರಗಳನ್ನು ಬರೆಯಬಹುದು ಅಥವಾ ಮಿಂಚಂಚೆ ಮೂಲಕ ತಿಳಿಸಬಹುದು. ಬ್ಯಾಂಕ್ ಚಾರ್ಜನ್ನು ಚಂದಾದಾರರೇ ದಯವಿಟ್ಟು ಭರಿಸಬೇಕು.

**ಕರ್ಣಾಟಕ ಬ್ಯಾಂಕ್**

ಬಂಟ್ವಾಳ ಮೂಡ ಶಾಖೆಯಲ್ಲಿ

**ಚಿಂತನ ಬಯಲು** ಹೆಸರಿನಲ್ಲಿರುವ

**ಕರೆಂಟ್ ಅಕೌಂಟ್ ಸಂಖ್ಯೆ : 0712000100041401**

**IFSC: KARB 0000071**

ಸುಲಭ ಬ್ಯಾಂಕಿಂಗ್ ಸೇವೆಗಾಗಿ ನಿಮ್ಮ ಹತ್ತಿರದ ಶಾಖೆಯನ್ನು ಸಂಪರ್ಕಿಸಿ ಅಥವಾ 1800 425 1444ಗೆ ಕರೆ ಮಾಡಿರಿ

ಕರ್ಣಾಟಕ ಬ್ಯಾಂಕ್ ಲಿ.

ನಿಮ್ಮ ಕುಟುಂಬದ ಬ್ಯಾಂಕ್. ಭಾರತದಾದ್ಯಂತ.